

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 18 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 182 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ತಳ ಸಮುದಾಯದ ಮಕ್ಕಳಿಗಾಗಿ ಹೋಬಳಿಗೊಂದು ವಸತಿ ಶಾಲೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ವಾಲ್ಮೀಕಿ ಜಯಂತಿ ಕಾರ್ಯಕ್ರಮ; ಐವರಿಗೆ ವಾಲ್ಮೀಕಿ ಪ್ರಶಸ್ತಿ ಪ್ರದಾನ

ಬೆಂಗಳೂರು, ಅ.17(ಕೆಎಂಶಿ)–ತಳ ಸಮುದಾಯದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಪ್ರತಿ ಹೋಬಳಿಗೆ ಒಂದರಂತೆ ವಸತಿ ಶಾಲೆ ಪ್ರಾರಂಭಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದ್ದಾರೆ.

ಈ ಸಮುದಾಯಗಳನ್ನು ಉಳಿದವರ ಜೊತೆ ಸಮನಾಗಿ ನಿಲ್ಲಿಸಲು ನಾನು ಮುಂದಾಗುತ್ತಿರುವುದನ್ನು ಸಹಿಸದೆ ನನ್ನ ಕಾಲೆಳೆಯುತ್ತಿದ್ದಾರೆ ಎಂದು ದೂರಿದರು. ಪರಿಶಿಷ್ಟ ಜಾತಿ, ವರ್ಗಕ್ಕೆ ವಾರ್ಷಿಕ 30,000 ಕೋಟಿ ರೂ.ಗಳನ್ನು ಮೀಸಲಿರಿಸಿದೆ. ಆ ಹಣವನ್ನು ಸಮರ್ಪಕವಾಗಿ ಸದ್ಬಳಕೆ ಮಾಡಬೇಕು. ಈ ಹಣದಲ್ಲಿ ಶಿಕ್ಷಣ ನೀಡಿದರೆ ಮುಂದೆ ಅವರೂ ಸಮಾಜದಲ್ಲಿ ಬೆಳೆಯುತ್ತಾರೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮೀಸಲಿರಿಸಿದ ಹಣದಲ್ಲಿ ಶಿಕ್ಷಣಕ್ಕಾಗಿ ಹೆಚ್ಚು ಒತ್ತು ಕೊಡಲಾಗುವುದು, ಅದರಲ್ಲೇ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು. ವಾಲ್ಮೀಕಿ ಜಯಂತಿ ಅಂಗವಾಗಿ ಐದು ಮಂದಿಗೆ ವಾಲ್ಮೀಕಿ ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು, ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರವಾಗಲೀ, ಬಿಜೆಪಿ ಅಧಿಕಾರದಲ್ಲಿರುವ ಯಾವುದೇ ರಾಜ್ಯದಲ್ಲಾಗಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ ಜಾರಿಗೆ ತಂದಿಲ್ಲ, ಬಾಯಿ ಮಾತಲ್ಲಿ ಸಮಾನತೆ ಬರಲ್ಲ, ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು ಎಂದರು.



ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಐವರಿಗೆ ವಾಲ್ಮೀಕಿ ಪ್ರಶಸ್ತಿ ಪ್ರದಾನ

ನಮ್ಮ ಸರ್ಕಾರ ಎಲ್ಲಾ ಧರ್ಮ, ಜಾತಿಯ ಬಡವರಿಗೆ ಆರ್ಥಿಕ ಶಕ್ತಿ ಕೊಡಲು ಗ್ಯಾರಂಟಿಗಳನ್ನು ಜಾರಿಗೆ ತಂದರೆ ಬಿಜೆಪಿಯವರು ವಿರೋಧಿಸಿದರು, ಗ್ಯಾರಂಟಿ ಫಲಾನುಭವಿಗಳು ಬಿಜೆಪಿಗೆ ಸರಿಯಾಗಿ ಪಾಠ ಕಲಿಸಬೇಕು. ಬಡ್ತಿಯಲ್ಲಿ ಮೀಸಲಾತಿಯನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿಯಿತು, ಅದನ್ನು ಮೊದಲಿಗೆ ಜಾರಿಗೆ ತಂದಿದ್ದು ನಮ್ಮ ಸರ್ಕಾರ, ಗುತ್ತಿಗೆಯಲ್ಲಿ ಮೀಸಲಾತಿ ಮೊದಲಿಗೆ ತಂದಿದ್ದು ನಮ್ಮ ಸರ್ಕಾರ, ಇದನ್ನು ನಾಡಿನ ಜನತೆ ಅರ್ಥಮಾಡಿಕೊಳ್ಳಬೇಕು. ನಾನು ಹೇಳುತ್ತಿದ್ದೇನೆ ಎನ್ನುವ ಕಾರಣಕ್ಕೆ ನೀವು ಇದನ್ನೆಲ್ಲಾ ನಂಬಬೇಡಿ, ಸತ್ಯ, ಸುಳ್ಳನ್ನು ಪರಾಮರ್ಶಿಸಿ, ವಿವೇಚಿಸಿ, ಸತ್ಯವನ್ನು ಧೈರ್ಯವಾಗಿ ಬಹಿರಂಗವಾಗಿ ಮಾತಾಡುವುದನ್ನು ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳು ಬೆಳೆಸಿಕೊಳ್ಳಬೇಕು, ಇದೇ ಮಹರ್ಷಿ ವಾಲ್ಮೀಕಿ ಅವರಿಗೆ ನಾವು–ನೀವು ಸಲ್ಲಿಸುವ ಗೌರವ ಎಂದರು.

ರಾಯಚೂರು ವಿವಿಗೆ ವಾಲ್ಮೀಕಿ ಹೆಸರು: ಎಸ್‌ಸಿಎಸ್‌ಪಿ/ಟಿಎಸ್‌ಪಿ ಮೂಲಕ ಪರಿಶಿಷ್ಟ ಸಮುದಾಯದ ಜನಸಂಖ್ಯೆಗೆ ■6ನೇ ಪುಟಕ್ಕೆ


ಮುಡಾ ಆಡಳಿತ ಮಂಡಳಿ ವಿಸರ್ಜನೆಗೆ ಸರ್ಕಾರದ ಚಿಂತನೆ

ಅ.25ರ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಸಂಭವ

ಮೈಸೂರು, ಅ.17(ಆರ್‌ಕೆ)– ನಿವೇಶನ ಹಂಚಿಕೆ ಹಗರಣದ ಹಿನ್ನೆಲೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಆಡಳಿತ ಮಂಡಳಿ ವಿಸರ್ಜಿಸಲು ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆಯುತ್ತಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ನಿನ್ನೆ(ಅ.17)ಯಷ್ಟೇ ಮುಡಾ ಅಧ್ಯಕ್ಷ ಕೆ. ಮರೀಗೌಡ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆನ್ನಲ್ಲೇ ಪ್ರಾಧಿಕಾರದ ಆಡಳಿತ ಮಂಡಳಿ (ಬೋರ್ಡ್)ಯನ್ನೇ ವಿಸರ್ಜನೆ ಮಾಡಿ, ಹಿರಿಯ ಐಎಎಸ್ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸುವ ಬಗ್ಗೆ ಸರ್ಕಾರ ಸಿದ್ಧತೆ ನಡೆಸುತ್ತಿದೆ ಎಂದು ಹೇಳಲಾಗುತ್ತಿದೆ.

ಅಕ್ಟೋಬರ್ 25ರಂದು ನಿಗದಿಯಾಗಿರುವ ಸಚಿವ ಸಂಪುಟ ಸಭೆಯಲ್ಲಿ ಮರೀಗೌಡ ನೀಡಿರುವ ರಾಜೀನಾಮೆ ಅಂಗೀಕಾರ, ಪ್ರಭಾರ ಜವಾಬ್ದಾರಿ ವಹಿಸುವ ಕುರಿತಂತೆಯೂ ಪ್ರಸ್ತಾಪವಾಗುವ ಸಾಧ್ಯತೆಗಳಿದ್ದು, ಅದೇ ವೇಳೆ ಮುಡಾ



ಆಡಳಿತ ಮಂಡಳಿ(ಬೋರ್ಡ್)ಯನ್ನು ರದ್ದುಗೊಳಿಸಿ, ಆಡಳಿತಾಧಿಕಾರಿ ನೇಮಿಸುವ ನಿರ್ಧಾರ ಕೈಗೊಳ್ಳಬಹುದು ಎಂದು ನಗರಾಭಿವೃದ್ಧಿ ಇಲಾಖೆ ಮೂಲಗಳು ತಿಳಿಸಿವೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಕಾನೂನು ಸಚಿವ ಹೆಚ್.ಕೆ. ಪಾಟೀಲ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ ಹಾಗೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್, ಪೂರ್ವಭಾವಿ ಸಭೆ ನಡೆಸಿದ್ದು, ಸಂಪುಟ ಸಭೆಗೆ ವಿಷಯ ಮಂಡಿಸುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆನ್ನಲಾಗಿದೆ.

ಒಂದು ವೇಳೆ ಆಡಳಿತ ಮಂಡಳಿ ವಿಸರ್ಜನೆಯಾದಲ್ಲಿ ಆಡಳಿತಾಧಿಕಾರಿಗಳ ನೇತೃತ್ವದಲ್ಲಿ ಮುಡಾ ಸಾಮಾನ್ಯ ಸಭೆ ನಡೆಯಲಿದ್ದು, ಇನ್ನು ಅಧಿಕಾರಿಗಳೇ ನಿರ್ಧಾರ ಕೈಗೊಳ್ಳಲಿದ್ದಾರೆ. ನಿವೇಶನ ಹಗರಣದ ತನಿಖೆ ಪ್ರಗತಿಯಲ್ಲಿದ್ದು, ಪೂರ್ಣಗೊಂಡು ಆಯೋಗವು ಸರ್ಕಾರಕ್ಕೆ ವರದಿ ನೀಡಿ ಅದರನ್ವಯ ಕ್ರಮ ಜರುಗಿಸುವವರೆಗೂ ಆಡಳಿತಾಧಿಕಾರಿ ನೇತೃತ್ವದ ಮುಡಾ ಮಂಡಳಿ ಅಸ್ತಿತ್ವದಲ್ಲಿದ್ದು, ಒಟ್ಟಾರೆ ಹಗರಣ ಅಂತಿಮ ಘಟ್ಟ ತಲುಪಿದ ನಂತರ ಮತ್ತೆ ಸರ್ಕಾರವು ಅಧಿಕಾರೇತರ ಜನಪ್ರತಿನಿಧಿಗಳನ್ನೊಳಗೊಂಡ ಸದಸ್ಯರ ಮಂಡಳಿಯನ್ನು ಪುನರ್ ರಚಿಸಬಹುದಾಗಿದೆ. ನಿವೇಶನ ಹಂಚಿಕೆ ಹಗರಣದ ತನಿಖೆಗೆ ದಾಖಲೆಗಳ ಒದಗಿಸುವ ಸಲುವಾಗಿ ಕಾಯ್ದೆ ಪ್ರಕಾರ ಜಿಲ್ಲಾಧಿಕಾರಿ ■6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ ವಿಚಾರಣೆ ಸಮಯ, ಸ್ಥಳ ಇನ್ನು ನಿರ್ಧರಿಸಿಲ್ಲ

ಲೋಕಾಯುಕ್ತ ಎಸ್ಪಿ ಉದೇಶ್ ಸ್ಪಷ್ಟನೆ

ನಾಳೆ ಇಲ್ಲವೇ 20 ದಿನದ ನಂತರ ಸಮನ್ಸ್ ನೀಡುವ ಸಾಧ್ಯತೆ; ಸದ್ಯ ರಿಲೀಫ್

ಮೈಸೂರು, ಅ.17(ಬಿಎಲ್‌ಎಸ್)– ಮುಡಾ ನಿವೇಶನ ಹಗರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ಅವರನ್ನು ಎಲ್ಲಿ ವಿಚಾರಣೆ ಮಾಡಬೇಕೆಂದು ಈಗಲೇ ಏನೂ ಹೇಳಲು ಸಾಧ್ಯವಿಲ್ಲ ಎಂದು ಲೋಕಾಯುಕ್ತ ಎಸ್ಪಿ ಉದೇಶ್ ತಿಳಿಸಿದರು.



'ಮೈಸೂರು ಮಿತ್ರ'ನ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಹಾಗೂ ಪಾರ್ವತಿ ಅವರಿಗೆ ಸಮನ್ಸ್ ನೀಡಿದ ನಂತರ ಈ ಬಗ್ಗೆ ನಿರ್ಧಾರ ಮಾಡಲಾಗುವುದು ಎಂದು ಹೇಳಿದರು.

ಸಿದ್ದರಾಮಯ್ಯ ಅವರನ್ನು ಲೋಕಾಯುಕ್ತ ಕಚೇರಿಯಲ್ಲಿ ಇಲ್ಲವೇ ಮುಖ್ಯಮಂತ್ರಿ ಆಗಿರುವ ಕಾರಣ ಅವರ ಕಚೇರಿಗೆ ಹೋಗಿ ವಿಚಾರಣೆ ಮಾಡುತ್ತೀರಾ ಎಂಬ ಪ್ರಶ್ನೆಗೆ ಉದೇಶ್ ಈ ಪ್ರತಿಕ್ರಿಯೆ ನೀಡಿದರು. ಪ್ರಕರಣ ಸಂಬಂಧ ಈಗಾಗಲೇ ಹಲವು ದಾಖಲಾತಿಗಳನ್ನು ಸಂಗ್ರಹಿಸಲಾಗಿದ್ದು, ತನಿಖೆ ■6ನೇ ಪುಟಕ್ಕೆ

ಲೋಕಾಯುಕ್ತ ಎಸ್ಪಿ ಉದೇಶ್‌ಗೆ ಐಪಿಎಸ್ ಕೇಡರ್

ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್ ಅವರಿಗೆ ಐಪಿಎಸ್ ಕೇಡರ್ ಬಡ್ತಿ ದೊರೆತಿದೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಉದೇಶ್, ಕಳೆದ ತಿಂಗಳು 12ರಂದು ಸರ್ಕಾರದ ಆದೇಶ ಬಂದಿತ್ತು. ಆದರೆ ಮೂಮೆಂಟ್ ಆರ್ಡರ್ ನಿನ್ನೆ ಬಂದಿದೆ ಎಂದು ಹೇಳಿದರು. ಲೋಕಾಯುಕ್ತ ಎಸ್ಪಿ ಉದೇಶ್ ಅವರಲ್ಲದೆ ಮೈಸೂರು ನಗರದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಅವರಿಗೂ ಐಪಿಎಸ್ ಕೇಡರ್ ಬಡ್ತಿ ದೊರೆತಿದೆ. ಇಬ್ಬರೂ ಅದೇ ಸ್ಥಾನದಲ್ಲಿ ಮುಂದುವರೆದಿದ್ದಾರೆ.







ಶೀಘ್ರದಲ್ಲೇ ಥಾವರ್‌ಚಂದ್ ಗೆಹ್ಲೋಟ್ ಸೇರಿ ಹಲವು ರಾಜ್ಯಗಳ ರಾಜ್ಯಪಾಲರ ಬದಲಾವಣೆ

ನವದೆಹಲಿ, ಅ.17–ಈ ತಿಂಗಳು ಇಲ್ಲವೇ ಮುಂದಿನ ತಿಂಗಳೊಳಗೆ ಕರ್ನಾಟಕ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಸೇರಿದಂತೆ ಹಲವು ರಾಜ್ಯಗಳ ರಾಜ್ಯಪಾಲರ ಬದಲಾವಣೆ ಮಾಡುವ ಸಾಧ್ಯತೆ ಇದೆ.



ಗೆಹ್ಲೋಟ್

ಹಲವಾರು ರಾಜ್ಯಪಾಲರು ಮತ್ತು ಲೆಫ್ಟಿನೆಂಟ್ ಗವರ್ನರ್‌ಗಳು ಈಗಾಗಲೇ ಮೂರರಿಂದ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ, ಎಡ–ಆಡಳಿತದ ಕೇರಳ, ಜಮ್ಮು ಮತ್ತು ಕಾಶ್ಮೀರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮತ್ತು ದಾದರ್ ನಗರ ಹವೇಲಿ ಮತ್ತು ದಮನ್ ದಿಯು ಕೇಂದ್ರಾಡಳಿತ ಪ್ರದೇಶಗಳ ಪುನರ್‌ರಚನೆಯ ವಿಷಯ ಮಹತ್ವವನ್ನು ಪಡೆದುಕೊಂಡಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ನಾಲ್ಕು ವರ್ಷಗಳಿಂದ ಅಧಿಕಾರದಲ್ಲಿದ್ದಾರೆ. ಆರ್‌ಎಸ್‌ಎಸ್ ನಿಕಟ ಸಂಪರ್ಕ ಹೊಂದಿರುವ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಮ್ ಮಾಧವ್ ಅವರು ಸಿನ್ಹಾ ಅವರ ಸ್ಥಾನಕ್ಕೆ ಬರುವ ಸಾಧ್ಯತೆಯಿದೆ.

ಆರಿಫ್ ಮೊಹಮ್ಮದ್ ಖಾನ್ ಅವರು ಐದು ವರ್ಷಗಳಿಗೂ ಹೆಚ್ಚು ಕಾಲ ಕೇರಳ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅ.2017ರಿಂದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಲೆಫ್ಟಿನೆಂಟ್ ಗವರ್ನರ್ ಆಗಿರುವ ದೇವೇಂದ್ರ ಕುಮಾರ್ ಜೋಶಿ ನಿವೃತ್ತರಾಗಲಿದ್ದು , ಕೇರಳ ಅಥವಾ ಜಮ್ಮು ಮತ್ತು ಕಾಶ್ಮೀರದಲ್ಲಿ ಸ್ಥಾನ ಪಡೆಯುವ ಸಾಧ್ಯತೆಯಿದೆ. ಕಾಂಗ್ರೆಸ್ ಆಡಳಿತವಿರುವ ಕರ್ನಾಟಕದ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಮತ್ತು ಬಿಜೆಪಿ ಆಡಳಿತವಿರುವ ಗುಜರಾತ್‌ನ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರು ಮೂರು ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಜುಲೈ 15, 2021 ರಂದು ಅಧಿಕಾರ ವಹಿಸಿಕೊಂಡ ■6ನೇ ಪುಟಕ್ಕೆ

ಪುಣ್ಯಕ್ಷೇತ್ರ ತಲಕಾವೇರಿಯಲ್ಲಿ 'ತೀರ್ಥ ಸ್ವರೂಪಿಣಿ' ಕಾವೇರಿ ದರ್ಶನ

ಸಹಸ್ರಾರು ಜನರಿಂದ ಮೊಳಗಿದ ಭಕ್ತಿ ಘೋಷ




ಪುಣ್ಯಕ್ಷೇತ್ರ ತಲಕಾವೇರಿಯಲ್ಲಿ ತೀರ್ಥೋದ್ಭವ ದರ್ಶನಕ್ಕೆ ನೆರೆದಿದ್ದ ಸಹಸ್ರಾರು ಭಕ್ತರು.

ಮಡಿಕೇರಿ, ಅ.17–ಅಗಸ್ತ್ಯ ಮುನಿಗಳ ತಪೋಭೂಮಿ ಜೀವನದಿ ಕಾವೇರಿ ಉಗಮ ಸ್ಥಾನ, ಪುಣ್ಯಕ್ಷೇತ್ರವೂ ಆದ ತಲಕಾವೇರಿಯಲ್ಲಿ ಗುರುವಾರ ಬೆಳಗ್ಗೆ 7.40ಕ್ಕೆ ಸಲ್ಲಿದ ತುಲಾ ಲಗ್ನದಲ್ಲಿ ಪವಿತ್ರ ಬ್ರಹ್ಮ ಕುಂಡಿಕೆಯಿಂದ ಹೊಮ್ಮಿದ ಕಾವೇರಿ ಮಾತೆ ತೀರ್ಥ ಸ್ವರೂಪಿಣಿಯಾಗಿ ಭಕ್ತರಿಗೆ ದರ್ಶನ ನೀಡಿದಳು.

ಭಕ್ತರ ಜಯಘೋಷ, ವೈದಿಕ ತಂಡದವರಿಂದ ವೇದ–ಮಂತ್ರಗಳ ಪಠಣ, ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಪವಿತ್ರ ಕುಂಡಿಕೆಯಲ್ಲಿ 'ತೀರ್ಥ ಸ್ವರೂಪಿಣಿ' ಮಾತೆ ಕಾವೇರಿ ದರ್ಶನ ಪಡೆದು ಭಕ್ತರು ಪಾವನರಾದರು. ಈ ಸಂದರ್ಭ ಜೈ ಜೈ ಮಾತಾ, ಕಾವೇರಿ ಮಾತಾ, ಕಾವೇರಮ್ಮನ ಪಾದಾರವಿಂದಕ್ಕೆ ಗೋವಿಂದಾ, ಕಾವೇರಿ ಮಾತೆ ಉಕ್ಕಿ ಬಾ... ಘೋಷಣೆಗಳು ಮೊಳಗಿದವು. ಕೊಡವ ಸಾಂಪ್ರದಾಯಿಕ ದುಡಿಕೊಟ್ಟ್ ಪಾಟ್ ಮೂಲಕ ಕಾವೇರಿ ಮಾತೆಯನ್ನು ಸ್ತುತಿಸಿದರೆ, ಸಾಂಪ್ರದಾಯಿಕ ವಾಲಗದ ಇಂಪು ಪುಣ್ಯಕ್ಷೇತ್ರದಲ್ಲಿ ಪ್ರತಿಧ್ವನಿಸಿತು. ತಲಕಾವೇರಿ ತೀರ್ಥ ಕುಂಡಿಕೆಯಲ್ಲಿ ಪ್ರಧಾನ ಅರ್ಚಕ ಪ್ರಶಾಂತ್ ಆಚಾರ್ ನೇತೃತ್ವದಲ್ಲಿ ಅರ್ಚಕರಾದ ಗುರುರಾಜ್, ರವಿರಾಜ್, ವಿಠಲ, ಸುಧೀರ್‌ಆಚಾರ್ ಅವರು ಮುಂಜಾನೆಯಿಂದಲೇ ■ 6ನೇ ಪುಟಕ್ಕೆ

ಶಾಸಕ ಪೊನ್ನಣ್ಣ ಪಾದಯಾತ್ರೆ

ತೀರ್ಥೋದ್ಭವಕ್ಕೂ ಮುನ್ನ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ದಂಪತಿ ಭಾಗಮಂಡಲ ಕ್ಷೇತ್ರದಲ್ಲಿ ಶ್ರೀ ಭಗಂಡೇಶ್ವರನಿಗೆ ಪೂಜೆ ಸಲ್ಲಿಸಿದರು. ಬಳಿಕ ಪೊನ್ನಣ್ಣ ದಂಪತಿ ಕಾಲ್ನಡಿಗೆ ಮೂಲಕ ಕಾವೇರಿ ಸ್ಮರಣೆಯೊಂದಿಗೆ ತಲಕಾವೇರಿಗೆ ತೆರಳಿದರು. ವಿವಿಧ ಕೊಡವ ಸಂಘಟನೆಗಳ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗಮಂಡಲದಿಂದ ತಲಕಾವೇರಿವರೆಗೆ ಪಾದಯಾತ್ರೆ ಮೂಲಕ ಸಾಗಿ ಬಂದರು. ಯುನೈಟೆಡ್ ಕೊಡವ ಆರ್ಗನೈಜೇಷನ್, ಕೊಡವ ರೈಡರ್ಸ್ ಕ್ಲಬ್, ಅಖಿಲ ಕೊಡವ ಸಮಾಜ ಯೂತ್ ವಿಂಗ್ ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿದ್ದ ಕೊಡವ ಸಂಘಟನೆಗಳ ಸದಸ್ಯರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.



ಶ್ರೀ ಬನ್ನಿಮಹಾಕಾಳೇಶ್ವರಿ ಶ್ರೀ ಆಯರಳ್ಳಿ ಮಾಕಮ್ಮ; ಶ್ರೀ ಮಾಲಮ್ಮ ದೇವರ ಉತ್ಸವ



ಮೈಸೂರು,ಅ.17–ಮೈಸೂರಿನ ಕುರುಬಾರಹಳ್ಳಿ ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನದ ಟ್ರಸ್ಟ್ ವತಿಯಿಂದ ಅ.18ರಿಂದ 20ರವರೆಗೆ ಶ್ರೀ ಬನ್ನಿಮಹಾಕಾಳೇಶ್ವರಿ ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ದೇವರ ಜಾತ್ರಾ ಮಹೋತ್ಸವ ನಡೆಯಲಿದೆ.

ಅ.18ರಂದು ರಾತ್ರಿ 7 ಗಂಟೆಗೆ ಘಟೆ ಪೂಜೆ, ಅ.19ರಂದು ಸಂಜೆ 4ಕ್ಕೆ ಮಜ್ಜಣ ಪೂಜೆ ಮತ್ತು ಅ.20ರಂದು ಬೆಳಗ್ಗೆ 9ಕ್ಕೆ ವಾಹನೋತ್ಸವ ನಡೆಯಲಿದೆ.

ಜಾತ್ರಾ ಮಹೋತ್ಸವಕ್ಕೆ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್.ನಗರ, ತಿ.ನರಸೀಪುರ, ಗರ್ಗೇಶ್ವರಿ, ಮಂಟಿಕೊಪ್ಪಲು, ರಾವಂದೂರು, ಯಾಂದಳ್ಳಿ, ನಾಡನಹಳ್ಳಿ, ಮಲ್ಲರಾಜಯ್ಯನಹುಂಡಿ, ತಮ್ಮಡಳ್ಳಿ ಮತ್ತಿತರ 40 ಗ್ರಾಮಗಳಿಂದ ಭಕ್ತಾದಿಗಳು ಬರುವುದು ಪದ್ಧತಿ. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಎ.ಎಚ್.ವಿಶ್ವನಾಥ್, ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಕೆ. ಹರೀಶ್‌ಗೌಡ, ಡಿ.ರವಿಶಂಕರ್, ಡಾ/ ಯತೀಂದ್ರ, ಮಾಜಿ ಶಾಸಕರಾದ ಮಂಜುನಾಥ್, ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತಿತರರು ಭಾಗವಹಿಸಲಿದ್ದಾರೆ.

ನ್ಯಾಯದೇವತೆ ಕಣ್ಣಿಗಿಲ್ಲ ಕಪ್ಪುಪಟ್ಟಿ: ಸುಪ್ರೀಂಕೋರ್ಟ್‌ನಲ್ಲಿ ಹೊಸ ಪ್ರತಿಮೆ ಅನಾವರಣ

ಹೊಸದಿಲ್ಲಿ,ಅ.17–ನ್ಯಾಯಾಲಯವೆಂದರೆ ತಕ್ಷಣ ನೆನಪಿಗೆ ಬರುವುದು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕೈಯ್ಯಲ್ಲಿ ತಕ್ಕಡಿ ಹಿಡಿದು ನಿಂತಿರುವ ನ್ಯಾಯದೇವತೆಯ ಪ್ರತಿಮೆ. ಆದರೆ, ನ್ಯಾಯದ ಸಂಕೇತ ಎನಿಸಿರುವ ಈ ಪ್ರತಿಮೆಯ ಚಿತ್ರಣವನ್ನು ಈಗ ಮರುವಿನ್ಯಾಸಗೊಳಿಸಲಾಗಿದೆ.

ಸುಪ್ರೀಂಕೋರ್ಟ್ ಆವರಣದಲ್ಲಿ ನ್ಯಾಯಮೂರ್ತಿಗಳ ಅಧ್ಯಯನಕ್ಕೆ ಮೀಸಲಿರುವ ಗ್ರಂಥಾಲಯದಲ್ಲಿ ಕಣ್ಣಿಗೆ ಬಟ್ಟೆ ಕಟ್ಟದೇ ಇರುವ ಹಾಗೂ ಕೈಯ್ಯಲ್ಲಿ ಕತ್ತಿಯ ಬದಲಿಗೆ ಸಂವಿಧಾನ ಹಿಡಿದಿರುವ ಹೊಸ ನ್ಯಾಯದೇವತೆಯ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದೆ. ಆದರೆ ತಕ್ಕಡಿಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದ್ದು, ನಿಷ್ಪಕ್ಷಪಾತವನ್ನು ಪ್ರತಿಬಿಂಬಿಸುತ್ತದೆ.

ಸಿಜೆಐ ಡಿವೈ ಚಂದ್ರಚೂಡ್ ಅವರ ನೇತೃತ್ವದಲ್ಲಿ ನ್ಯಾಯದೇವತೆ ಪ್ರತಿಮೆಯ ಕಲ್ಪನೆಯನ್ನು ಮರುವಿನ್ಯಾಸಗೊಳಿಸಲಾಗಿದೆ ಎಂದು ಮೂಲಗಳು ಹೇಳಿವೆ. ವಸಾಹತುಶಾಹಿ ಪರಂಪರೆಯನ್ನು ದಾಟಿ ಮುಂದುವರಿಯುವ ಅಗತ್ಯ ಈಗ ಎದುರಾಗಿದೆ. ಭಾರತದಲ್ಲಿ ಸಂವಿಧಾನದ ಅನುಸಾರವೇ ನ್ಯಾಯ ವಿತರಣೆಯಾಗಲಿದೆ. ಕಾನೂನು ಕುರುಡಲ್ಲ, ಅದು ಎಲ್ಲರಿಗೂ ಸಮಾನ ಎಂಬ ಸಂದೇಶ ರವಾನಿಸುವುದು ನ್ಯಾಯದೇವತೆ ಪ್ರತಿಮೆ ಮರುವಿನ್ಯಾಸದ ಹಿಂದಿನ ಉದ್ದೇಶವಾಗಿದೆ ಎಂದು ವರದಿಯಾಗಿದೆ. ನ್ಯಾಯದೇವತೆ ಕಣ್ಣಿಗೆ ಕಪ್ಪು ಪಟ್ಟಿ ಕಟ್ಟಿರುವುದು ದಶಕಗಳಿಂದಲೂ ಚಾಲ್ತಿಯಲ್ಲಿತ್ತು. ಈ ಸಾಂಪ್ರದಾಯಿಕ ಪ್ರಾತಿನಿಧ್ಯದಲ್ಲಿ ಕೆಲವು



ಬದಲಾವಣೆಗಳನ್ನು ಮಾಡಲಾಗಿದೆ. ಈವರೆಗೂ ಕಾನೂನಿನ ಮುಂದೆ ಎಲ್ಲ ಪ್ರಜೆಗಳೂ ಸಮಾನರು. ನ್ಯಾಯದಾನದಲ್ಲಿ ಯಾರಿಗೂ ತಾರತಮ್ಯ ಇರುವುದಿಲ್ಲ ಎಂಬುದನ್ನು ಸಂಕೇತಿಸುವಂತೆ ನ್ಯಾಯದೇವತೆ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಲಾಗಿತ್ತು. 'ಕಾನೂನು ಕುರುಡಲ್ಲ. ಪ್ರತಿಯೊಬ್ಬರನ್ನೂ ಅದು ನೋಡುವಂತಾಗಬೇಕು. ವಸಾಹತುಶಾಹಿ ಕಾನೂನುಗಳ ಹಿನ್ನೆಲೆಯಲ್ಲಿ ನ್ಯಾಯದಾನ ಮಾಡುವುದು ಸಮರ್ಪಕವಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ಹೇಳಿದ್ದಾರೆ.

ಖಡ್ಗ ಹಿಂಸೆಯ ಸಂಕೇತ. ಹೀಗಾಗಿ ನ್ಯಾಯ ದೇವತೆಯ ಸ್ವರೂಪದಲ್ಲಿ ಬದಲಾವಣೆಯಾಗಬೇಕು ಎಂದು ಸಿಜೆಐ ತಿಳಿಸಿದ್ದರು. ಪ್ರತಿಮೆಯು ಒಂದು ಕೈಯ್ಯಲ್ಲಿ ಸಂವಿಧಾನ ಹಿಡಿಯಬೇಕೇ ವಿನಾ ಖಡ್ಗವನ್ನು ಅಲ್ಲ. ಇದರಿಂದ ಸಂವಿಧಾನಕ್ಕೆ ಅನುಗುಣವಾಗಿ ನ್ಯಾಯದೇವತೆ ನ್ಯಾಯದಾನ ಮಾಡುತ್ತಾಳೆ ಎಂಬ ಸಂದೇಶ ರವಾನೆಯಾಗುತ್ತದೆ. ಖಡ್ಗವು ಹಿಂಸೆಯ ಸಂಕೇತ. ಆದರೆ ನ್ಯಾಯಾಲಯಗಳು ಸಂವಿಧಾನಾತ್ಮಕ ಕಾನೂನುಗಳಿಗೆ ಅನುಗುಣವಾಗಿ ನ್ಯಾಯ ನೀಡುತ್ತವೆ ಎಂದು ಮೂಲಗಳು ತಿಳಿಸಿವೆ.

ನ್ಯಾಯಮೂರ್ತಿಗಳ ಗ್ರಂಥಾಲಯದಲ್ಲಿ ಅನಾವರಣಗೊಳಿಸಿರುವ ಹೊಸ ಪ್ರತಿಮೆಯು, ಆಧುನಿಕ ದೃಷ್ಟಿಕೋನದಲ್ಲಿನ ನ್ಯಾಯಾಂಗದ ಬದ್ಧತೆಯನ್ನು ಸೂಚಿಸುತ್ತದೆ. ನ್ಯಾಯಸಮ್ಮತತೆ ಹಾಗೂ ಸಾಕ್ಷ್ಯಾಧಾರಗಳನ್ನು ನಿಷ್ಪಕ್ಷಪಾತವಾಗಿ ತೂಗುವ ಸಂಕೇತವಾಗಿರುವ ತಕ್ಕಡಿಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಒಳ ಮೀಸಲಾತಿ ಜಾರಿಯಾಗುವವರೆಗೂ ಎಲ್ಲಾ ನೇಮಕಾತಿ, ಆಯ್ಕೆ, ಪದೋನ್ನತಿಗಳನ್ನು ತಡೆ ಹಿಡಿಯಿರಿ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಆದಿಜಾಂಬವ ಸಮಾಜದ ಮಹಾ ಒಕ್ಕೂಟ, ಕಾಂಗ್ರೆಸ್ ಪಕ್ಷದ ಆದಿಜಾಂಬವ ಮುಖಂಡರ ವೇದಿಕೆ ಆಗ್ರಹ

ಮೈಸೂರು,ಅ.17(ಜಿಎ)–ಒಳ ಮೀಸಲಾತಿ ಜಾರಿಯಾಗುವವರೆಗೆ ಎಲ್ಲಾ ಇಲಾಖೆಗಳ ಉದ್ಯೋಗ ನೇಮಕಾತಿ, ಆಯ್ಕೆ ಮತ್ತು ಪದೋನ್ನತಿಗಳನ್ನು ತಡೆಹಿಡಿಯುವಂತೆ ಆದಿಜಾಂಬವ ಸಮಾಜದ ಮಹಾ ಒಕ್ಕೂಟ, ಕಾಂಗ್ರೆಸ್ ಪಕ್ಷದ ಆದಿಜಾಂಬವ ಮುಖಂಡರ ವೇದಿಕೆಯು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರ ನೇತೃತ್ವದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿತು.

ಈ ವೇಳೆ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಮಾತನಾಡಿ, ಆದಿಜಾಂಬವ ಸಮುದಾಯವು ಸುಮಾರು 35 ವರ್ಷಗಳಿಂದ ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ನಿರಂತರವಾಗಿ ಹೋರಾಟ ಮಾಡಿಕೊಂಡು ಬರುತ್ತಿದೆ. ಇತ್ತೀಚೆಗೆ ಸುಪ್ರೀಂಕೋರ್ಟ್ ತೀರ್ಪು ನೀಡಿ ಆಯಾಯ ರಾಜ್ಯಗಳು ಒಳ ಮೀಸಲಾತಿ ಜಾರಿ ಮಾಡಬಹುದೆಂದು ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಮಾಜ ಕಲ್ಯಾಣ ಸಚಿವರಾದ ನೀವು ಒಳ ಮೀಸಲಾತಿ ಜಾರಿ ಮಾಡುತ್ತೇವೆಂದು ಹೇಳಿಕೆ ನೀಡಿದ್ದೀರಿ ಎಂದರು.

ಈಗಾಗಲೇ ತೆಲಂಗಾಣದ ಕಾಂಗ್ರೆಸ್ ಸರ್ಕಾರವು ಎರಡು ತಿಂಗಳೊಳಗೆ ಒಳ ಮೀಸಲಾತಿಯನ್ನು ಜಾರಿ ಮಾಡುವುದಾಗಿ ಹಾಗೂ ಅಲ್ಲಿಯವರೆಗೂ ಎಲ್ಲಾ ಉದ್ಯೋಗ ನೇಮಕಾತಿಗಳನ್ನು ತಡೆಹಿಡಿಯುವುದಾಗಿ ಪ್ರಕಟಿಸಿದೆ. ರಾಜ್ಯ ಸರ್ಕಾರವೂ ಕೂಡ ತೆಲಂಗಾಣ ಸರ್ಕಾರದಂತೆ ತೀರ್ಮಾನ ಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಈ ಹಿಂದೆ 2022ರ ಡಿಸೆಂಬರ್ 11ರಂದು ಬೆಂಗಳೂರಿನಲ್ಲಿ ಒಳ ಮೀಸಲಾತಿ ಹೋರಾಟ ಮಾಡುತ್ತಿದ್ದವರ ಮೇಲೆ ಲಾಠಿ ಚಾರ್ಜ್ ಮಾಡಿಸಿದ್ದ ಅಂದು ಆಡಳಿತದಲ್ಲಿದ್ದ ಬಿಜೆಪಿಯ ಕೆಲವು ಮುಖಂಡರನ್ನು ಇಂದು ಎತ್ತಿಕಟ್ಟುವ ಮೂಲಕ ಒಳ ಮೀಸಲಾತಿ ಜಾರಿಯ ಬಗ್ಗೆ ಕಾಳಜಿ ತೋರುವ ನಾಟಕ ಮಾಡುತ್ತಿದ್ದಾರೆ ಎಂದು ಡಾ.ತಿಮ್ಮಯ್ಯ ವಿಷಾದಿಸಿದರು.

ಈ ಹಿಂದಿನಿಂದಲೂ ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಪರಿಶಿಷ್ಟರ ಉದ್ಧಾರ ಸಾಧ್ಯವಿರುವ ಕಾರಣ ತಾವು ಕೂಡಲೇ ಒಳ ಮೀಸಲಾತಿ ಜಾರಿಗೆ ತರಲು ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಜಾರಿ ಮಾಡಬೇಕು ಹಾಗೂ ತೆಲಂಗಾಣ ಸರ್ಕಾರ ಕೈಗೊಂಡಿರುವಂತೆ ಒಳ ಮೀಸಲಾತಿ ಜಾರಿಯಾಗುವವರೆಗೂ ಎಲ್ಲಾ ಇಲಾಖೆಗಳ ಉದ್ಯೋಗ ನೇಮಕಾತಿ, ಆಯ್ಕೆ ಮತ್ತು ಪದೋನ್ನತಿಗಳನ್ನು ತಡೆಹಿಡಿಯಬೇಕೆಂದು ಮನವಿ ಮಾಡಿದರು.

ಈ ವೇಳೆ ರಾಜ್ಯ ಆದಿಜಾಂಬವ ಸಂಘದ ವಿಭಾಗೀಯ ಅಧ್ಯಕ್ಷ ಎಡತೊರೆ ನಿಂಗರಾಜ್, ಶಾಸಕ ಕೆ.ಹರೀಶ್‌ಗೌಡ, ಮಾಜಿ ಉಪಮೇಯರ್ ಶ್ರೀಧರ್, ಮಾಜಿ ಕಾರ್ಪೊರೇಟರ್ ಸುನಂದಕುಮಾರ್, ಜಿಲ್ಲಾ ಮುಖಂಡ ಡಿ.ಕುಮಾರ್, ನಗರ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಜರಾಜೇಂದ್ರ, ಕೆ.ಆರ್.ನಗರ ಅಧ್ಯಕ್ಷ ಎಂ.ಲೋಕೇಶ್, ಕೆ.ಆರ್.ನಗರ ತಾಲೂಕಿನ ಗ್ಯಾರಂಟಿ ಅಧ್ಯಕ್ಷ ಎಂ.ಎಸ್.ಮಹದೇವ, ಪಿರಿಯಾಪಟ್ಟಣ ತಾಲೂಕಿನ ವಿಜಯಕುಮಾರ, ಅಧ್ಯಕ್ಷ ರವಿ, ಹುಣಸೂರಿನ ಬಿಲಿಗೆರೆ ಪಂಚಾಯಿತ್ ಅಧ್ಯಕ್ಷ ಮೋಹನ್, ಬನ್ನಿಕುಪ್ಪೆ ನಾಗಯ್ಯ, ಕಟ್ಟೆಮಳಲವಾಡಿ ಪಂಚಾಯತ್ ಸದಸ್ಯೆ ಸೌಮ್ಯ, ಸುರೇಶ್, ಹೆಚ್.ಡಿ.ಕೋಟೆಯ ಕಲ್ಲಂಬಾಳು ನಾಗಣ್ಣ, ನಂಜನಗೂಡು ಅಧ್ಯಕ್ಷ ಸ್ವಾಮಿ, ಕುಮಾರ, ಟಿ.ನರಸೀಪುರದ ಶಿವಸ್ವಾಮಿ, ರಂಗಪ್ಪ, ಕೈಲಾಸಪುರಂ ದುರ್ಗೇಶ್, ಸೌರಭ ಮತ್ತಿತರರು ಉಪಸ್ಥಿತರಿದ್ದರು.



ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ಮೈಸೂರು ಜಲದರ್ಶಿನಿ ಅತಿಥಿ ಗೃಹದಲ್ಲಿ ಆದಿಜಾಂಬವ ಸಮಾಜದ ಮಹಾ ಒಕ್ಕೂಟ, ಕಾಂಗ್ರೆಸ್ ಪಕ್ಷದ ಆದಿಜಾಂಬವ ಮುಖಂಡರ ವೇದಿಕೆ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಬೆಂಗಳೂರು ಟೆಸ್ಟ್: ಭಾರತ 46ಕ್ಕೆ ಆಲೌಟ್

ಬೃಹತ್ ಮುನ್ನಡೆಯತ್ತ ನ್ಯೂಜಿಲೆಂಡ್



ಬೆಂಗಳೂರು, ಅ.17– ಬ್ಯಾಟ್ಸ್‌ಮನ್‌ಗಳ ದಯನೀಯ ವೈಫಲ್ಯ ಹಾಗೂ ಕಳಪೆ ಕ್ಷೇತ್ರ ರಕ್ಷಣೆಯ ಲಾಭಪಡೆದ ಪ್ರವಾಸಿ ನ್ಯೂಜಿಲೆಂಡ್ ಬೆಂಗಳೂರು ಟೆಸ್ಟ್ ಪಂದ್ಯದಲ್ಲಿ ಬೃಹತ್ ಮೊತ್ತದತ್ತ ದಾಪುಗಾಲು ಹಾಕಿದೆ. ಭಾರತವನ್ನು ಕೇವಲ 46 ರನ್‌ಗಳಿಗೆ ಆಲೌಟ್ ಮಾಡಿ ಮೊದಲ ಇನ್ನಿಂಗ್ಸ್ ಆರಂಭಿಸಿರುವ ನ್ಯೂಜಿಲೆಂಡ್ ಎರಡನೇ ದಿನದಾಟದಂತ್ಯಕ್ಕೆ 3 ವಿಕೆಟ್ ನಷ್ಟಕ್ಕೆ 180 ರನ್ ಬಾರಿಸಿದ್ದು ಒಟ್ಟಾರೆ 134 ರನ್ ಮುನ್ನಡೆ ಸಾಧಿಸಿದೆ.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2ನೇ ದಿನದಿಂದ ಆರಂಭವಾದ ಭಾರತ ಹಾಗೂ ನ್ಯೂಜಿಲೆಂಡ್ ನಡುವಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆಯ್ದುಕೊಂಡಿತು. ಆದರೆ ನ್ಯೂಜಿಲೆಂಡ್ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 46 ರನ್‌ಗಳಿಗೆ ಸರ್ವಪತನ ಕಂಡಿತು. ಈ ಮೂಲಕ ತವರಿನಲ್ಲಿ ಅಲ್ಪ ಮೊತ್ತಕ್ಕೆ ಆಲೌಟ್ ಆದ ಕುಖ್ಯಾತಿಗೆ ಪಾತ್ರವಾಗಿದೆ.

ಭಾರತದ ಪರ ಯಶಸ್ವಿ ಜೈಸ್ವಾಲ್ 13, ರಿಷಬ್ ಪಂತ್ 20 ರನ್ ಗಳಿಸಿದ್ದು ಹೊರತುಪಡಿಸಿ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. 8 ವರ್ಷಗಳ ಬಳಿಕ ಟೆಸ್ಟ್ ಕ್ರಿಕೆಟ್‌ನಲ್ಲಿ 3ನೇ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದ ವಿರಾಟ್ ಕೊಹ್ಲಿ ಶೂನ್ಯ ಸುತ್ತಿದರು. ಇನ್ನು ಕನ್ನಡಿಗ ಕೆ.ಎಲ್.ರಾಹುಲ್, ಸರ್ಫರಾಜ್ ಖಾನ್, ಆಲ್ರೌಂಡರ್‌ಗಳಾದ ರವೀಂದ್ರ ಜಡೇಜಾ ಹಾಗೂ ರವಿಚಂದ್ರನ್ ಅಶ್ವಿನ್ ಖಾತೆ ತೆರೆಯುವ ಮುನ್ನವೇ ವಿಕೆಟ್ ಒಪ್ಪಿಸಿದರು.

ನ್ಯೂಜಿಲೆಂಡ್ ಪರ ಮ್ಯಾಟ್ ಹೆನ್ರಿ 5, ವಿಲಿಯಮ್ ಓರ್ಕೆ 4, ಟಿಮ್ ಸೌಥಿ ಒಂದು ವಿಕೆಟ್ ಪಡೆದರು. ಬಳಿಕ ಮೊದಲ ಇನ್ನಿಂಗ್ಸ್ ಆರಂಭಿಸಿರುವ ನ್ಯೂಜಿಲೆಂಡ್ ಉತ್ತಮ ಆರಂಭ ಪಡೆಯಿತು. ಮೊದಲ ವಿಕೆಟ್‌ಗೆ ನಾಯಕ ಟಾಮ್ ಲೇಥಮ್ ಹಾಗೂ ಡೆವೊನ್ ಕಾನ್‌ವೇ 67 ರನ್‌ಗಳ ಜತೆಯಾಟವಾಡಿದರು. ಲೇಥಮ್ 15 ರನ್ ಗಳಿಸಿ ಕುಲ್ದೀಪ್ ಯಾದವ್ ಬಲೆಗೆ ಬಿದ್ದರು. ಇನ್ನು ವಿಲ್ ಯಂಗ್ 33 ರನ್ ಗಳಿಸಿದ್ದಾಗ ಜಡೇಜಾ ಶಾಕ್ ನೀಡಿದರು. ಇನ್ನೊಂದೆಡೆ ಭಾರತೀಯ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ ಮತ್ತೊರ್ವ ಆರಂಭಿಕ ಬ್ಯಾಟರ್ 105 ಎಸೆತಗಳನ್ನು ಎದುರಿಸಿ 11 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 91 ರನ್ ಗಳಿಸಿ ರಿವರ್ಸ್ ಸ್ವೀಪ್ ಮಾಡುವ ಯತ್ನದಲ್ಲಿ ಕ್ಲೀನ್ ಬೌಲ್ಡ್ ಆಗಿ ಪೆವಿಲಿಯನ್ ಸೇರಿದರು. ಸದ್ಯ ರಚಿನ್ ರವೀಂದ್ರ 22 ಹಾಗೂ ಡೇರಲ್ ಮಿಚೆಲ್ 14 ರನ್ ಗಳಿಸಿದ್ದು, ಮೂರನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಹರಿಯಾಣ ಸಿಎಂ ಆಗಿ ನಯಾಬ್ ಸಿಂಗ್ ಸೈನಿ ಪ್ರಮಾಣ ವಚನ ಸ್ವೀಕಾರ



ಚಂಡೀಗಡ. ಅ. 17– 90 ಸದಸ್ಯ ಬಲದ ಹರಿಯಾಣ ವಿಧಾನಸಭೆಯಲ್ಲಿ 48 ಸ್ಥಾನಗಳನ್ನು ಗೆದ್ದು, ಸತತ ಮೂರನೇ ಅವಧಿಗೆ ಭಾರತೀಯ ಜನತಾ ಪಕ್ಷ(ಬಿಜೆಪಿ) ಅಧಿಕಾರಕ್ಕೆ ಬಂದಿದ್ದು, ಎರಡನೇ ಅವಧಿಗೆ ಹರಿಯಾಣ ಮುಖ್ಯಮಂತ್ರಿಯಾಗಿ ನಯಾಬ್ ಸಿಂಗ್ ಸೈನಿ ಅವರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ಇಂದು ಪಂಚಕುಲದಲ್ಲಿ ನಡೆದ ಸಮಾರಂಭದಲ್ಲಿ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಸೈನಿ ಅವರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು. ಸೈನಿ ಅವರೊಂದಿಗೆ ಅಂಬಾಲಾ ಕ್ಯಾಂಟ್ ಶಾಸಕ ಅನಿಲ್ ವಿಜ್, ಇಸ್ರಾನಾ ಶಾಸಕ ಕ್ರಿಶನ್ ಲಾಲ್ ಪನ್ವಾರ್ ಮತ್ತು ಬಾದಶಹಪುರ ಶಾಸಕ ರಾವ್ ನರಬೀರ್ ಸಿಂಗ್ ಅವರು ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಸೈನಿ ಅವರು ಪ್ರಮಾಣವಚನ ಸ್ವೀಕರಿಸುವ ಮುನ್ನ ವಾಲ್ಮೀಕಿ ಭವನಕ್ಕೆ ಭೇಟಿ ನೀಡಿದರು ಮತ್ತು ಪಂಚಕುಲದ ಗುರುದ್ವಾರ ಹಾಗೂ ಮಾನಸಾ ದೇವಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಬಿಜೆಪಿ ಆಡಳಿತವಿರುವ 13 ರಾಜ್ಯದ ಮುಖ್ಯಮಂತ್ರಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.



ದಸರಾ ಮಹೋತ್ಸವ: ಅತ್ಯುತ್ತಮ ಉದ್ಯಾನವನ ಪ್ರಶಸ್ತಿ

ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನ ಸ್ಪರ್ಧೆಯಲ್ಲಿ ಕಣ್ಣನ್ ಡಯಾಗ್ನೋಸ್ಟಿಕ್ ಸೆಂಟರ್‌ನ ಡಾ.ಲಕ್ಷ್ಮಣ್ ಅವರ ಪತ್ನಿ ಡಾ.ಹೇಮಾಮಾಲಿನಿ ಲಕ್ಷ್ಮಣ್ ಅವರ ಫಾರಂಗೆ ಅತ್ಯುತ್ತಮ ಉದ್ಯಾನವನ ಪ್ರಶಸ್ತಿ, ಜೊತೆಗೆ ಈ ವರ್ಷವೂ ಮನೆಯ ತಾರಸಿ ತೋಟಕ್ಕೆ ಪ್ರಥಮ ಬಹುಮಾನ ಬಂದಿದೆ. ಇವರ ತೋಟ ಹೆಚ್‌ಎಲ್ ಟ್ರಾಂಕ್‌ವಿಲ್ಲಾ ವಿಲಕ್ಷಣ ಅಪರೂಪದ ಮರಗಳು ಮತ್ತು ಗುಲಾಬಿ ಉದ್ಯಾನವನಕ್ಕೆ ಹೆಸರುವಾಸಿಯಾಗಿದೆ. ಅಲ್ಲದೆ ಹೇಮಾಮಾಲಿನಿ ಅವರು ತಮ್ಮ ಮನೆಯ ತಾರಸಿ ತೋಟದಲ್ಲಿ ಬೋನ್ಸಾಯ್ ಮತ್ತು ಅಲಂಕಾರಿಕ ಸಸ್ಯಗಳ ಅದ್ಭುತ ಸಂಗ್ರಹ ಮಾಡಿದ್ದಾರೆ. ಚಿತ್ರದಲ್ಲಿ ಪ್ರಶಸ್ತಿಯೊಂದಿಗೆ ಡಾ.ಲಕ್ಷ್ಮಣ್ ದಂಪತಿ ಕಾಣಬಹುದು.

ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದ ಬಾಲಕ ಜೀವಂತ ಪತ್ತೆ; ಬಳಿಕ ಚಿಕಿತ್ಸೆ ಫಲಿಸದೇ ಸಾವು

ಹಾವೇರಿ,ಅ.17–ರಾಜ್ಯಾದ್ಯಂತ ಮಳೆ ಆರ್ಭಟ ಜೋರಾಗಿರುವಂತೆಯೇ ಅತ್ತ ಹಾವೇರಿ ಜಿಲ್ಲೆಯಲ್ಲಿ ಮಳೆ ನೀರಿನಲ್ಲಿ 12 ವರ್ಷದ ಬಾಲಕನೋರ್ವ ಕೊಚ್ಚಿಕೊಂಡು ಹೋಗಿ ಬಳಿಕ ಪತ್ತೆಯಾಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿರುವ ದಾರುಣ ಘಟನೆ ವರದಿಯಾಗಿದೆ. ಹಾವೇರಿ ಜಿಲ್ಲೆಯ ಹಳೇ ಪಿ.ಬಿ.ರಸ್ತೆಗೆ ಹೊಂದಿಕೊಂಡಿರುವ ಶಿವಾಜಿನಗರದ 3ನೇ ಕ್ರಾಸ್‌ನಲ್ಲಿರುವ ಕಾಲುವೆಯಲ್ಲಿ ನಿವೇದನ್ ಬಸವರಾಜ ಗುಡಿಗೇರಿ ಎಂಬ ಬಾಲಕ ಕೊಚ್ಚಿಕೊಂಡು ಹೋಗಿದ್ದು, ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಈ ವೇಳೆ ಬಾಲಕ ಮೆಡಿಕಲ್ ಶಾಪ್ ಮುಂಭಾಗದಲ್ಲಿದ್ದ ಸ್ಲ್ಯಾಬ್‌ನಲ್ಲಿ ಪತ್ತೆಯಾಗಿದ್ದ. ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಹಾಗೂ ಹೆಚ್ಚುವರಿ ಎಸ್ಪಿ ಶಿರಕೋಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಪತ್ತೆಯಾದ ಬಾಲಕನನ್ನು ಅಗ್ನಿಶಾಮಕ ಸಿಬ್ಬಂದಿ ಹಾಗೂ ಸಾರ್ವಜನಿಕರು ತಕ್ಷಣವೇ ಜಿಲ್ಲಾಸ್ಪತ್ರೆಗೆ ಹೊತ್ತು ಸಾಗಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಆತ ಸಾವನ್ನಪ್ಪಿದ್ದಾನೆ. ಬಾಲಕ ನಿವೇದನ್ ಸ್ನೇಹಿತರೊಂದಿಗೆ ಮಳೆ ನೀರಿನಲ್ಲಿ ಆಟವಾಡುತ್ತಿದ್ದ. ಕಾಲುವೆಯಲ್ಲಿ ನೀರು ರಭಸವಾಗಿ ಹರಿಯುತ್ತಿತ್ತು. ಈ ವೇಳೆ ಮಳೆ ನೀರಿನ ಹರಿವು ಹೆಚ್ಚಿದ್ದರಿಂದ ಆತ ಕೊಚ್ಚಿಕೊಂಡು ಹೋಗಿದ್ದಾನೆ.

ಬೇಬಿ ಗ್ರಾಮದ ಮಹಿಳೆ ನಾಪತ್ತೆ



ಮೈಸೂರು,ಅ.17–ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕು ಬೇಬಿ ಗ್ರಾಮದ ರಾಕೇಶ್ ಶರ್ಮ ಎಂಬುವರ ಪತ್ನಿ ಹರ್ಷಿಣಿ (31) ಮೈಸೂರಿನಲ್ಲಿ ನಾಪತ್ತೆಯಾಗಿದ್ದಾರೆ. ಹರ್ಷಿಣಿ ಅವರನ್ನು ನನ್ನ ತಮ್ಮ ರಾಕೇಶ್‌ಗೆ ಮದುವೆ ಮಾಡಿಕೊಟ್ಟಿದ್ದು, ಬೇಬಿ ಗ್ರಾಮದಲ್ಲಿ ವಾಸವಾಗಿದ್ದರು. ಅ.10ರಂದು ದಸರಾ ಹಬ್ಬಕ್ಕೆ ನಮ್ಮ ಮನೆಗೆ ಬಂದಿದ್ದು, ತಾನು ತಂದಿದ್ದ ಲಗೇಜ್ ಮನೆಯಲ್ಲಿ ಇಟ್ಟು, ತನ್ನ ಮಕ್ಕಳನ್ನು ಬೇಕರಿಗೆ ಕರೆದುಕೊಂಡು ಹೋಗಿ ತಿಂಡಿ ಕೊಡಿಸಿ ಮನೆಗೆ ಹೋಗಿ ಎಂದು ಕಳುಹಿಸಿ, ತಾನು ಬ್ಯೂಟಿ ಪಾರ್ಲರ್‌ಗೆ ಹೋಗಿ ಬರುತ್ತೇನೆ ಎಂದು ಹೋದವಳು ಕಾಣೆಯಾಗಿರುವುದಾಗಿ ತಾಯಿ ರೇಖಾ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2418315 ಸಂಪರ್ಕಿಸಲು ಕೋರಲಾಗಿದೆ.

ನಿಧನ


ಸಾವಿತ್ರಿ ಜನಾರ್ಧನ್ ಭಟ್



ಮೈಸೂರು, ಅ. 17 – ಮೈಸೂರಿನ ಸಿದ್ಧಾರ್ಥನಗರದ ನಿವಾಸಿ ದಿವಂಗತ ಜನಾರ್ಧನ್ ಭಟ್ ಅವರ ಪತ್ನಿ ಸಾವಿತ್ರಿ ಜನಾರ್ಧನ್ ಭಟ್ (89) ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಆರು ಮಂದಿ ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.10.2024 ಶುಕ್ರವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಮತ್ತು ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ಪ್ರತ್ಯೇಕ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಬಾಸುದೇವ ಸೋಮಾನಿ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ :** ತಂಬಾಕು ಸೇವನೆಯ ದುಷ್ಪರಿಣಾಮಗಳು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಸಂಪನ್ಮೂಲ ವ್ಯಕ್ತಿ : ಉಪಶಮನ ಆರೈಕೆ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಿರಿಯ ವ್ಯವಸ್ಥಾಪಕ ಡಾ. ಎಸ್.ಪಿ. ವಿಭಾ, ಅಧ್ಯಕ್ಷತೆ : ಬಾಸುದೇವ ಸೋಮಾನಿ ಕಾಲೇಜು ಪ್ರಾಂಶುಪಾಲ ಡಾ. ಎಂ. ಮಹದೇವಸ್ವಾಮಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ಟಿ. ರಮೇಶ್, ಸ್ಥಳ:ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಪದಗ್ರಹಣ ಸಮಾರಂಭ ಮತ್ತು ಸಂವಾದ, ಅಧ್ಯಕ್ಷತೆ : ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಉದ್ಘಾಟನೆ : ಕೆಪಿಸಿಸಿ ಮೀನುಗಾರರ ವಿಭಾಗದ ರಾಜ್ಯಾಧ್ಯಕ್ಷ ಮಂಜುನಾಥ್ ಬಿ. ಸುಣಗಾರ, ಉಪಸ್ಥಿತರು : ಕರ್ನಾಟಕ ರಾಜ್ಯ ಒಳನಾಡು ಸಹಕಾರಿ ಮೀನುಗಾರಿಕೆ ಮಹಾಮಂಡಳ ಮಾಜಿ ಅಧ್ಯಕ್ಷ ಸಿದ್ದಲಿಂಗರಾಜು, ಸ್ಥಳ: ನಗರ ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ಸುವರ್ಣ ಕರ್ನಾಟಕ ಮಹೋತ್ಸವದ ಅಂಗವಾಗಿ ಲೇಖಕರಾದ ಆರ್. ರಂಗಸ್ವಾಮಿಯವರ 'ಕಾವ್ಯಸುರಭಿ' ಕವನ ಸಂಕಲನ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ: ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಲೇಖಕರ ಪರಿಚಯ : ಪತ್ರಕರ್ತ ಡಿ. ಈರೇಶ್ ನಗರ್ಲೆ, ಕೃತಿ ಕುರಿತು : ಸಾಹಿತಿ ಶ್ರೀಮತಿ ಎ.ಎಸ್. ವಾಣಿಸುಬ್ಬಯ್ಯ, ಮುಖ್ಯ ಅತಿಥಿಗಳು ; ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಂ.ಜಿ.ಆರ್. ಅರಸ್, ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಭಾರತೀ ಪ್ರಕಾಶನದ ಬಿ.ಎನ್. ಶ್ರೀನಿವಾಸ್, ಹಿರಿಯ ಸಾಹಿತಿ ಡಾ.ಎಚ್.ಎ. ಪಾರ್ಶ್ವನಾಥ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕದ ಅಧ್ಯಕ್ಷೆ ಡಾ. ರತ್ನಹಾಲಪ್ಪಗೌಡ, ವಿಶ್ವ ಚೇತನ ಬಳಗದ ಅಧ್ಯಕ್ಷ ಡಾ. ಎಂ. ಶಿವಸ್ವಾಮಿ, ಆರ್.ಜೆ. ವಿವೇಕ್, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಎಸ್.ಜಿ. ರಾಜು, ಮುಖ್ಯಸ್ಥರು, ಜೈವಿಕ ತಂತ್ರಜ್ಞಾನ ಮತ್ತು ಪ್ರಾಣಿಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಟಿ.ರುಕ್ಮಿಣಿ – ವೈಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.30 ದೇವರನಾಮ – ಶ್ರೀಹರ್ಷ, 12.45 ಕಾದಂಬರಿ ವಿಹಾರ – ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್., 1.20 ಭಾವಗೀತೆಗಳು –ಜಿ. ಎಸ್. ಲಕ್ಷ್ಮೀ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.10 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ. ಎಂ. ಬಾಲಮುರಳೀಕೃಷ್ಣ – ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ : ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು: ಕೃಷಿ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ : ಕೃಷಿ ಭಾಗ್ಯ ಯೋಜನೆ, ಭಾಗ ವಹಿಸುತ್ತಾರೆ : ಜಂಟಿ ಕೃಷಿ ನಿರ್ದೇಶಕರಾದ ಎ.ಎನ್. ರೂಪಾ, 7.20 ಕೃಷಿ ದರ್ಪಣ–ಕೃಷಿರಂಗ ಕಿಸಾನ್‌ವಾಣಿ ಕಾರ್ಯಕ್ರಮದ ಮುನ್ನೋಟ, 7.45 ಶಾರ್ಜಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಮಹಿಳೆಯರ ಟಿ20 ವರ್ಲ್ಡ್ ಕಪ್ ಎರಡನೇ ಸೆಮಿಫೈನಲ್ ಕ್ರಿಕೆಟ್ ಪಂದ್ಯದ ನೇರ ವೀಕ್ಷಕ ವಿವರಣೆ.

ಕ್ರೈಂ ಬಾಕ್ಸ್

ದಸರಾ ರಜೆ ನೀಡಿದ್ದ ಕಾರ್ಖಾನೆಯಲ್ಲಿ 15 ಲಕ್ಷ ಮೌಲ್ಯದ ಪದಾರ್ಥ ಕಳವು



ಮೈಸೂರು, ಅ.17(ಎಸ್‌ಬಿಡಿ)– ದಸರಾ ರಜೆ ವೇಳೆ ಕಾರ್ಖಾನೆ ಕಿಟಕಿಯ ಗ್ರಿಲ್‌ಗಳನ್ನು ತುಂಡರಿಸಿ ಸುಮಾರು 15 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಕದ್ದೊಯ್ದಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಇಲ್ಲಿನ ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿನ ಟ್ರಾನ್ಸ್‌ಫಾರ್ಮರ್ ಹಾಗೂ ಇಂಡಕ್ಟರ್ಸ್ ತಯಾರಿಸುವ ವ್ಯಾಗ್ನಟೆಕ್ ಕಾರ್ಖಾನೆಯಲ್ಲಿದ್ದ ಸುಮಾರು 14 ಲಕ್ಷ ರೂ. ಮೌಲ್ಯದ ತಾಮ್ರದ ತಂತಿಗಳು, ಲ್ಯಾಪ್‌ಟಾಪ್‌ಗಳು ಸೇರಿದಂತೆ ಒಟ್ಟು 15.57 ಲಕ್ಷ ರೂ. ಬೆಲೆಬಾಳುವ ಹಲವು ವಸ್ತುಗಳು ಕಳುವಾಗಿದ್ದು, ಈ ಬಗ್ಗೆ ಕಾರ್ಖಾನೆ ಮಾಲೀಕರು ವಿಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬೆಂಗಳೂರು ಹಾಗೂ ಕೊಯಮತ್ತೂರಿನಿಂದ ತರಿಸಿದ್ದ ತಾಮ್ರದ ತಂತಿಗಳನ್ನು ಕಾರ್ಖಾನೆಯ ಉಗ್ರಾಣದಲ್ಲಿಡಲಾಗಿತ್ತು. ಅ.10ರಂದು ಸಂಜೆ ಆಯುಧ ಪೂಜೆ ನಂತರ ಕಾರ್ಖಾನೆಗೆ ಮೂರು ದಿನ ದಸರಾ ರಜೆ ನೀಡಲಾಗಿತ್ತು. ಅ.14ರಂದು ಬೆಳಗ್ಗೆ 9.30ಕ್ಕೆ ಕಾರ್ಖಾನೆ ಬೀಗ ತೆಗೆದು ಒಳಹೋದಾಗ ಸಿಸಿ ಕ್ಯಾಮರಾಗಳ ಡಿವಿಆರ್ ಹಾಗೂ ಡೇಟಾ ಸ್ಟೋರೇಜ್ ಯೂನಿಟ್ ಇಡಲಾಗಿದ್ದ ಬಾಕ್ಸ್ ತೆರೆದಿತ್ತು. ಹತ್ತಿರ ಹೋಗಿ ನೋಡಿದಾಗ ಆ ಎರಡೂ ಉಪಕರಣಗಳಿರಲಿಲ್ಲ. ಆದ್ದರಿಂದ ಅನುಮಾನಗೊಂಡು ಎಲ್ಲಾ ಕಡೆ ಪರಿಶೀಲಿಸಿದಾಗ ಉಗ್ರಾಣದ ಬೀಗ ಮುರಿದು ಅಲ್ಲಿದ್ದ 14 ಲಕ್ಷ ರೂ. ಬೆಲೆಯ 1,500 ಕೆಜಿ ತಾಮ್ರದ ತಂತಿ, ಮೀಟರ್‌ಗಳ ಲೀಡ್ ವೈರ್‌ಗಳು, ಪ್ಲಾಸ್ಟಿಕ್ ಬಿನ್‌ಗಳು, ಕಚೇರಿಯಲ್ಲಿದ್ದ ಮೂರು ಲ್ಯಾಪ್‌ಟಾಪ್‌ಗಳು, ಸಿಪಿಯು, ಸರ್ವರ್ ಸ್ಟೋರೇಜ್ ಯೂನಿಟ್, ಡಿಎಸ್‌ಎಲ್‌ಆರ್ ಕ್ಯಾಮರಾ ಸೇರಿದಂತೆ ಸುಮಾರು 15.57 ಲಕ್ಷ ರೂ. ಬೆಲೆಯ ವಸ್ತುಗಳು ಕಳುವಾಗಿರುವುದು ತಿಳಿಯಿತು.

ಕಾರ್ಖಾನೆ ಕಿಟಕಿಯ ಗ್ರಿಲ್‌ಗಳನ್ನು ತುಂಡರಿಸಲಾಗಿತ್ತು ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್ ಹತ್ತುವಾಗ ವೃದ್ಧೆಯ ಮಾಂಗಲ್ಯ ಸರ ಕದ್ದ ಖದೀಮರು

ಮೈಸೂರು ಸಬರ್ಬನ್ ಬಸ್ ನಿಲ್ದಾಣದಲ್ಲಿ ಹೊಂಚು ಹಾಕುತ್ತಿರುವ ಸರಗಳ್ಳರು



ಮೈಸೂರು, ಅ.17(ಎಸ್‌ಬಿಡಿ)– ರಶ್ ಇದ್ದ ಬಸ್ ಹತ್ತುತ್ತಿದ್ದ ವೃದ್ಧೆಯ ಮಾಂಗಲ್ಯ ಸರ ಕಳವು ಮಾಡಿರುವ ಘಟನೆ ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದಲ್ಲಿ ನಡೆದಿದೆ.

ದಸರಾಗೆಂದು ಮೈಸೂರಿನಲ್ಲಿರುವ ಮಗಳ ಮನೆಗೆ ಬಂದಿದ್ದ ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು, ಕೆಲಗೆರೆ ಗ್ರಾಮದ ಲಕ್ಷ್ಮಮ್ಮ(78), ವಾಪಸ್ಸಾಗುವಾಗ ಸುಮಾರು 1.65 ಲಕ್ಷ ರೂ. ಮೌಲ್ಯದ 33 ಗ್ರಾಂ ಮಾಂಗಲ್ಯ ಸರವನ್ನು ಕಳೆದುಕೊಂಡಿದ್ದಾರೆ.

ದಸರಾ ನೋಡಲೆಂದು ಲಕ್ಷ್ಮಮ್ಮ ಅವರು ತಮ್ಮ ಮೊಮ್ಮಗ ಪುನೀತ್‌ನೊಂದಿಗೆ ಅ.10ರಂದು ಮೈಸೂರಿನ ಗಣೇಶನಗರದಲ್ಲಿರುವ ಮಗಳ ಮನೆಗೆ ಬಂದಿದ್ದರು. ಮೂರ್ನಾಲ್ಕು ದಿನ ಇದ್ದು, ಅ.14ರಂದು ಬೆಳಗ್ಗೆ ಊರಿಗೆ ಹೊರಟಿದ್ದರು. ನಾಗಮಂಗಲ ಮಾರ್ಗದ ಬಸ್ ತುಂಬಾ ರಶ್ ಇದ್ದ ಕಾರಣ ಲಕ್ಷ್ಮಮ್ಮ ಅವರ ಮೊಮ್ಮಗ ಪುನೀತ್ ಜನರ ನಡುವೆ ನುಸುಳಿ ಬಸ್‌ನಲ್ಲಿ ಸೀಟ್ ಹಿಡಿದುಕೊಂಡಿದ್ದ. ಬಳಿಕ ಲಕ್ಷ್ಮಮ್ಮ ಅವರೂ ರಶ್‌ನಲ್ಲಿಯೇ ಬಸ್ ಹತ್ತಿದ್ದರು. ಸೀಟ್‌ನಲ್ಲಿ ಕೂರುವಾಗ ಕೊರಳು ನೋಡಿಕೊಂಡಾಗ ಮಾಂಗಲ್ಯ ಸರ ಇರಲಿಲ್ಲ. ಏನೂ ತೋಚದೆ ಊರಿಗೆ ಹೋಗಿ ಮನೆಯವರಿಗೆ ವಿಷಯ ತಿಳಿಸಿ, ತಡವಾಗಿ ದೂರು ನೀಡಿದ್ದಾರೆ. ಈ ಸಂಬಂಧ ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಖದೀಮರ ಪತ್ತೆಗೆ ಕ್ರಮ ವಹಿಸಿದ್ದಾರೆ.

ಎಚ್ಚರದಿಂದಿರಿ: ಖದೀಮರು ತುಂಬಾ ರಶ್ ಇರುವ ಬಸ್‌ಗಳನ್ನೇ ಟಾರ್ಗೆಟ್ ಮಾಡುತ್ತಾರೆ. ಅದರಲ್ಲೂ ವಯಸ್ಸಾದ ಮಹಿಳೆಯರು ಬಸ್ ಹತ್ತುವಾಗಲೇ ಹೊಂಚು ಹಾಕಿ, ಕಳವು ಮಾಡುತ್ತಾರೆ. ಪ್ರಯಾಣಿಕರ ಸೋಗಿನಲ್ಲಿ ಬಸ್ ಹತ್ತಿ, ತಮ್ಮ ಕೆಲಸ ಮುಗಿದ ಮೇಲೆ ರಶ್ ನೆಪದಲ್ಲಿ ಕೆಳಗಿಳಿದು ಪರಾರಿಯಾಗುತ್ತಾರೆ. ಈ ರೀತಿಯ ಘಟನೆಗಳು ನಿರಂತರವಾಗಿ ನಡೆಯುತ್ತಿವೆ. ಅದರಲ್ಲೂ ಕಳ್ಳಿಯರೇ ಹೆಚ್ಚು ಸಕ್ರಿಯರಾಗಿದ್ದಾರೆ. ಈ ಬಗ್ಗೆ ಮಹಿಳೆಯರು ನಿಗಾ ವಹಿಸಬೇಕು. ರಶ್ ಇದ್ದ ಬಸ್ ಹತ್ತುವಾಗ ತಾವು ಧರಿಸಿರುವ ಆಭರಣಗಳನ್ನು ಬಟ್ಟೆಯಲ್ಲಿ ಮರೆಮಾಚಿಕೊಳ್ಳಬೇಕು. ಒಡವೆಗಳ ಬಗ್ಗೆ ನಿಗಾ ಇಟ್ಟಿರಬೇಕು. ಸೀಟ್ ಹಿಡಿಯುವ ಭರದಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಮೌಲ್ಯಯುತ ವಸ್ತುಗಳು ಕಳ್ಳರ ಪಾಲಾಗುವುದು ನಿಶ್ಚಿತ.

ಆಟೋ ಬಾಡಿಗೆಗೆ ಕರೆದೊಯ್ದು ದೋಚುತ್ತಿದ್ದ ಖದೀಮನ ಬಂಧನ

ಸಹಚರನಿಗೆ ಶೋಧ



ಮೈಸೂರು, ಅ.17(ಎಸ್‌ಬಿಡಿ)– ಆಟೋ ಬಾಡಿಗೆಗೆ ಕರೆದೊಯ್ದು ಮಾರ್ಗಮಧ್ಯೆ ಚಾಲಕನ ಮೇಲೆ ಹಲ್ಲೆ ನಡೆಸಿ, ದೋಚುತ್ತಿದ್ದ ಖದೀಮನನ್ನು ಮೈಸೂರು ದಕ್ಷಿಣ ಠಾಣೆ ಪೊಲೀಸರು ಬಂಧಿಸಿದ್ದಾರೆ. ಉಮೇಶ್(28) ಬಂಧಿತನಾಗಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವ ಈತನ ಸಹಚರನ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಅ.10ರಂದು ಉಮೇಶ್ ತನ್ನ ಸಹಚರನೊಂದಿಗೆ ಹೊಸಹುಂಡಿಗೆಂದು ಬಾಡಿಗೆ ಆಟೋದಲ್ಲಿ ತೆರಳುವಾಗ ಏಳಿಗೆಹುಂಡಿ ಬಳಿ ಚಾಲಕನ ಮೇಲೆ ಹಲ್ಲೆ ನಡೆಸಿ ಆಟೋ ಸಮೇತ ಮೊಬೈಲ್, 8,500 ರೂ. ಹಣ ದೋಚಿ ಪರಾರಿಯಾಗಿದ್ದರು.

ಈ ಸಂಬಂಧ ಚಾಲಕ ನೀಡಿದ ದೂರಿನನ್ವಯ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಸೆರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಎಸ್ಪಿ) ವಿಷ್ಣುವರ್ಧನ್ ನಿರ್ದೇಶನದಂತೆ ಎಎಸ್ಪಿ ನಾಗೇಶ್ ಮಾರ್ಗದರ್ಶನ ಹಾಗೂ ಡಿವೈಎಸ್ಪಿ ಕರೀಂ ರಾವತರ್ ಉಸ್ತುವಾರಿಯಲ್ಲಿ ದಕ್ಷಿಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಡಾ.ಎಂ.ಎಲ್. ಶೇಖರ್, ಸಬ್‌ಇನ್ಸ್‌ಪೆಕ್ಟರ್ ಕೆ.ಎ. ಚಂದ್ರು, ಸಿಬ್ಬಂದಿ ಮಹೇಶ್, ಸುನೀಲ್ ಕುಮಾರ್, ಮಂಜು ಹಾಗೂ ಪ್ರಕಾಶ್ ತಂಡ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಿದೆ. ಆರೋಪಿ ಉಮೇಶ್ ಮೇಲೆ ಕಳ್ಳತನ, ಸುಲಿಗೆ ಆರೋಪದಡಿ ದಕ್ಷಿಣ ಪೊಲೀಸ್ ಠಾಣೆಯಲ್ಲಿ 4, ನಂಜನಗೂಡು ಪೊಲೀಸ್ ಠಾಣೆಯಲ್ಲಿ 3, ವರುಣ ಪೊಲೀಸ್ ಠಾಣೆಯಲ್ಲಿ 2, ಜಯಪುರ, ಹುಲ್ಲಹಳ್ಳಿ ಹಾಗೂ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಇನ್ನೂ ತಗ್ಗದ ಜನ–ವಾಹನ ದಟ್ಟಣೆ

● ವಿದ್ಯುತ್ ದೀಪಾಲಂಕಾರ ವೀಕ್ಷಣೆಗೆ ರಸ್ತೆ–ವೃತ್ತದಲ್ಲಿ ಜಮಾವಣೆ ● ಅರಮನೆ ಸುತ್ತಲಿನ ರಸ್ತೆ ಹೊರತಾಗಿ ಉಳಿದೆಡೆ ದಟ್ಟಣೆ ಇಳಿಮುಖ ● ವಿದ್ಯುತ್ ದೀಪಾಲಂಕಾರದ ಬೆಳಕಲ್ಲಿ ಸೆಲ್ಫಿ, ಫೋಟೋಗ್ರಫಿ, ರೀಲ್ಸ್ ಕ್ರೇಜ್



ಚಾಮರಾಜ ಒಡೆಯರ್ ವೃತ್ತದಲ್ಲಿ ಗುರುವಾರ ಸಂಜೆ ಕಂಡು ಬಂದ ಸೆಲ್ಫಿ ಕ್ರೇಜ್



ಚಾಮರಾಜ ಒಡೆಯರ್ ವೃತ್ತದಲ್ಲಿ ಗುರುವಾರ ಸಂಜೆ ವಾಹನ, ಜನ ದಟ್ಟಣೆ ಕಂಡು ಬಂದಿತು.





ಕೆಆರ್ ವೃತ್ತದಲ್ಲಿ ವಿದೇಶಿ ಪ್ರವಾಸಿಗರು

ಮೈಸೂರು,ಅ.17(ಪಿಎಂ)– ಈ ಬಾರಿಯ ಅದ್ಧೂರಿಯ ದಸರಾ ಸಂಪನ್ನಗೊಂಡು ಐದು ದಿನ ಕಳೆದರೂ ಪಾರಂಪರಿಕ ನಗರಿ ಮೈಸೂರಿನಲ್ಲಿ ಜನ ಮತ್ತು ವಾಹನ ದಟ್ಟಣೆ ಕಡಿಮೆಯಾಗಿಲ್ಲ. ಅರಮನೆ, ವಸ್ತುಪ್ರದರ್ಶನ ಸೇರಿದಂತೆ ನಗರದ ಪ್ರವಾಸಿ ತಾಣಗಳಿಗೆ ಪ್ರವಾಸಿಗರು, ಸ್ಥಳೀಯರು ಎಡತಾಕುತ್ತಿದ್ದು, ಸಂಜೆಯಂತೂ ಜನ–ವಾಹನಗಳು ರಸ್ತೆಗಳಲ್ಲಿ ಕಿಕ್ಕಿರಿದಿರುವುದು ಕಂಡು ಬರುತ್ತಿದೆ.

ಗುರುವಾರ ಸಂಜೆ ಅರಮನೆಯ ಸುತ್ತಲಿನ ರಸ್ತೆ ವಾಹನ–ಜನಸಂದಣಿ ವ್ಯಾಪಕವಾಗಿತ್ತು. ಕೆಆರ್ ವೃತ್ತ, ಚಾಮರಾಜ ಒಡೆಯರ್ ವೃತ್ತ, ಹಾರ್ಡಿಂಜ್ ವೃತ್ತ ಹಾಗೂ ಈ ವೃತ್ತಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ದಟ್ಟಣೆ ಕಂಡು ಬಂದಿತು. ದಸರಾ ವಿದ್ಯುತ್ ದೀಪಾಲಂಕಾರ ನಗರದಲ್ಲಿ ಮುಂದುವರೆದಿದ್ದು, ರಸ್ತೆಗಳು ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸುತ್ತಿದ್ದರೆ, ವೃತ್ತಗಳಲ್ಲಿ ವಿದ್ಯುತ್ ದೀಪಗಳಲ್ಲಿ ವಿನ್ಯಾಸಗೊಳಿಸಿದ ವಿವಿಧ ಬಗೆಯ ಕಲಾಕೃತಿಗಳು ಕಣ್ಮನ ಸೆಳೆಯುತ್ತಿವೆ. ಇಂತಹ ಮನಮೋಹಕ ದೃಶ್ಯಾವಳಿ ಕಣ್ತುಂಬಿಕೊಳ್ಳಲು ಸಂಜೆಯಾಗುತ್ತಿದ್ದಂತೆ ಜನ ರಸ್ತೆಗಳಿಯುತ್ತಿದ್ದಾರೆ.

ಬೆಳಗಿನ ಸಂದರ್ಭದಲ್ಲಿ ನಗರದ ವಿವಿಧ ಪ್ರವಾಸಿ ತಾಣಗಳತ್ತ ಎಡತಾಕುತ್ತಿರುವ ದೇಶ–ವಿದೇಶ ಪ್ರವಾಸಿಗರು ಹಾಗೂ ಸ್ಥಳೀಯರು, ಸಂಜೆಯಾಗುತ್ತಿದ್ದಂತೆ ನಗರದ ದೀಪಾಲಂಕಾರ ನೋಡಲು ಜಮಾವಣೆಯಾಗಿದ್ದರು. ವಿದ್ಯುತ್ ದೀಪಗಳಿಂದ ಶೃಂಗಾರಗೊಂಡ ವೃತ್ತಗಳಲ್ಲಿ ನಿಂತು ಫೋಟೋಗೆ ಪೋಸ್ ನೀಡಲು ಜನ ಉತ್ಸುಕತೆ ತೋರುತ್ತಿರುವುದು ಗೋಚರಿಸಿತು. ವಯಸ್ಕರು, ಹಿರಿಯರು, ಮಕ್ಕಳು ದೀಪಾಲಂಕಾರದ ನಡುವೆ ಫೋಟೋ ತೆಗೆಸಿಕೊಳ್ಳಲು ಆಸಕ್ತರಾಗಿದ್ದರೆ, ಯುವಕ–ಯುವತಿಯರು ಹೆಚ್ಚಾಗಿ ಸೆಲ್ಫಿ ತೆಗೆದುಕೊಳ್ಳಲು ಹಾಗೂ ರೀಲ್ಸ್ ಮಾಡಿಕೊಳ್ಳಲು ಮುಂದಾಗಿದ್ದರು. ನಗರದ ಸೌಂದರ್ಯ ಕಣ್ತುಂಬಿಕೊಳ್ಳಲು ಜನ ರಸ್ತೆಗಿಳಿದಿರುವ ಹಿನ್ನೆಲೆಯಲ್ಲಿ ವಿವಿಧ ರೀತಿ ಆಟಿಕೆಗಳ ವ್ಯಾಪಾರಸ್ಥರಿಗೂ ವ್ಯಾಪಾರ ಜೋರಾಗಿತ್ತು. ಅಲ್ಲದೆ, ತಿಂಡಿ–ತಿನಿಸು, ಬಟ್ಟೆಬರೆ ಸೇರಿದಂತೆ ವಿವಿಧ ಬಗೆಯ ವ್ಯಾಪಾರ ವಹಿವಾಟು ಸಹ ಗರಿಗೆದರಿತ್ತು. ಅ.23ರವರೆಗೆ ಅರಮನೆ ಸುತ್ತಲಿನ ರಸ್ತೆಗಳಲ್ಲಿ ಏಕಮುಖ ವಾಹನ ಸಂಚಾರಕ್ಕೆ ಪೊಲೀಸ್ ಆಯುಕ್ತರು ಆದೇಶಿಸಿದ್ದು, ಅದರಂತೆ ಪ್ರತಿದಿನ ಸಂಜೆ 4ರಿಂದ ರಾತ್ರಿ 12ರವರೆಗೆ ಈ ರಸ್ತೆಗಳಲ್ಲಿ ಆಂಟಿ ಕ್ಲಾಕ್‌ವೈಸ್‌ಗೆ ವಿರುದ್ಧ ದಿಕ್ಕಿನಲ್ಲಿ ವಾಹನಗಳ ಏಕಮುಖ ಸಂಚಾರ ಜಾರಿಗೊಳಿಸಲಾಗಿದೆ. ಆದರೆ ಗುರುವಾರ ಸಂಜೆ 7.30ರವರೆಗೂ ಸದರಿ ಏಕಮುಖ ಸಂಚಾರವನ್ನು ತಾತ್ಕಾಲಿಕವಾಗಿ ಕೈಬಿಡಲಾಗಿತ್ತು. ಆವರೆಗೆ ವಾಹನಗಳ ಸಂಚಾರದಲ್ಲಿ ವ್ಯಾಪಕ ದಟ್ಟಣೆ ಇಲ್ಲದ ಹಿನ್ನೆಲೆಯಲ್ಲಿ ಮಾಮೂಲಿನಂತೆ ದ್ವಿಮುಖ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಆದರೆ ರಾತ್ರಿ ಸುಮಾರು 7.30ರ ವೇಳೆಯಲ್ಲಿ ವಾಹನಗಳ ದಟ್ಟಣೆ ವ್ಯಾಪಕವಾಯಿತು. ಕೆಆರ್ ವೃತ್ತ, ಆಲ್ಬರ್ಟ್–ವಿಕ್ಟರ್ ರಸ್ತೆ, ಹಾರ್ಡಿಂಜ್ ವೃತ್ತಗಳಲ್ಲಿ ಸಾಲು ಸಾಲು ವಾಹನಗಳು ನಿಲ್ಲುವಂತಾಯಿತು. ಹಾಗಾಗಿ ಸ್ಥಳದಲ್ಲಿದ್ದ ಸಂಚಾರ ಪೊಲೀಸರು ಏಕಮುಖ ಸಂಚಾರ ಜಾರಿಗೆ ತುರ್ತು ಕ್ರಮ ವಹಿಸಿ ವಾಹನ ಸಂದಣಿಯಾಗುವುದನ್ನು ತಪ್ಪಿಸಿದರು. ಚಾಮರಾಜ ಒಡೆಯರ್ ವೃತ್ತ, ಕೆಆರ್ ವೃತ್ತ ಸೇರಿದಂತೆ ಅರಮನೆ ಸುತ್ತಲಿನ ರಸ್ತೆ ಹೊರತುಪಡಿಸಿದರೆ, ಸಯ್ಯಾಜಿರಾವ್ ರಸ್ತೆ, ಜೆಎಲ್‌ಬಿ ರಸ್ತೆ, ದೇವರಾಜ ಅರಸು ರಸ್ತೆಗಳಲ್ಲಿ ಜನ ಮತ್ತು ವಾಹನ ದಟ್ಟಣೆ ಅರ್ಧಕ್ಕರ್ಧ ಇಳಿಕೆಯಾಗಿತ್ತು.

ತೀರ್ಥಹಳ್ಳಿ ತಹಸೀಲ್ದಾರ್ ಜಿ.ಬಿ.ಜಕ್ಕನಗೌಡರ್ ಶವವಾಗಿ ಪತ್ತೆ



ಬೆಂಗಳೂರು, ಅ. 17– ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ತಹಸೀಲ್ದಾರ್ ಜಿ.ಬಿ. ಜಕ್ಕನಗೌಡರ್ ನಿಗೂಢ ರೀತಿಯಲ್ಲಿ ಸಾವನ್ನಪ್ಪಿದ್ದಾರೆ. ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ವೈಭವ್ ಲಾಡ್ಜ್‌ನ ಕೊಠಡಿಯಲ್ಲಿ ಬುಧವಾರ ರಾತ್ರಿ ಮೃತದೇಹ ಪತ್ತೆಯಾಗಿದೆ. ಹೃದಯಾಘಾತದಿಂದ ಮೃತಪಟ್ಟಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ನ್ಯಾಯಾಲಯದ ಕೆಲಸ ನಿಮಿತ್ತ ಬೆಂಗಳೂರಿಗೆ ಬಂದಿದ್ದ ಅವರು ಲಾಡ್ಜ್‌ನಲ್ಲಿ ಉಳಿದಿದ್ದರು. ಮಂಗಳವಾರ ಸಂಜೆಯಿಂದಲೂ ಯಾರ ಸಂಪರ್ಕಕ್ಕೂ ಅವರು ಸಿಕ್ಕಿರಲಿಲ್ಲ. ನಂತರ ಮೊಬೈಲ್ ಲೊಕೇಶನ್ ಪರಿಶೀಲಿಸಿದಾಗ ಮೆಜೆಸ್ಟಿಕ್ ಸಮೀಪ ತೋರಿಸುತ್ತಿತ್ತು. ಪರಿಶೀಲನೆ ನಡೆಸಿದಾಗ ಮೃತದೇಹ ಪತ್ತೆಯಾಗಿದೆ.

ಉಪ ಸಮರಕ್ಕೆ ಕಾಂಗ್ರೆಸ್ ರೆಡಿ: ಸಿಎಂ


ಬೆಂಗಳೂರು, ಅ.17(ಕೆಎಂಶಿ)–ನವೆಂಬರ್‌ನಲ್ಲಿ ರಾಜ್ಯದಲ್ಲಿ ನಡೆಯಲಿರುವ ಮೂರು ವಿಧಾನಸಭಾ ಉಪ ಚುನಾವಣೆಯನ್ನು ಕಾಂಗ್ರೆಸ್ ಸಮರ್ಥವಾಗಿ ಎದುರಿಸಲಿದ್ದು, ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸಿಬಿಐ, ಇ.ಡಿ., ಐ.ಟಿ. ಸೇರಿದಂತೆ ಯಾವುದೇ ಸಂಸ್ಥೆಗಳು ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಬೇಕೇ ಹೊರತು ಒಂದು ರಾಜಕೀಯ ಪಕ್ಷದ ಪರವಾಗಿ ಕೆಲಸ ಮಾಡಬಾರದು ಎಂದರು.

ದೆಹಲಿ ಪೊಲೀಸ್ ಸೋಗಿನಲ್ಲಿ ಮೈಸೂರು ವೃದ್ಧ ಮಹಿಳೆಗೆ 1.39 ಕೋಟಿ ವಂಚನೆ

ಮೈಸೂರು, ಅ.17(ಎಸ್‌ಬಿಡಿ)– ದೆಹಲಿ ಪೊಲೀಸ್ ಸೋಗಿನಲ್ಲಿ ಮೈಸೂರಿನ ಮಹಿಳೆಗೆ ಕರೆ ಮಾಡಿ, ಸೆಕ್ಯೂರಿಟಿ ಬಾಂಡ್ ನೆಪದಲ್ಲಿ ಆನ್‌ಲೈನ್ ಮೂಲಕ 1.39 ಕೋಟಿ ರೂ. ಹಣ ಪಡೆದು ವಂಚಿಸಿರುವ ಘಟನೆ ಬೆಳಕಿಗೆ ಬಂದಿದೆ. ನಗರದ 72 ವರ್ಷದ ಮಹಿಳೆಗೆ ಸೆ.18ರಂದು ಕರೆ ಮಾಡಿದ ಅನಾಮಧೇಯ, ತನ್ನನ್ನು ದೆಹಲಿಯ ಪೊಲೀಸ್ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಾನೆ. ಕರೆ ಮಾಡಿದ ವಿಷಯ ಕೇಳಿದಾಗ 'ಟೆಲಿಕಾಂ ರಿಜಿಸ್ಟರಿಂಗ್ ಅಥಾರಿಟಿ ಆಫ್ ಇಂಡಿಯಾ'ದಲ್ಲಿ ನಿಮ್ಮ ವಿರುದ್ಧ ಪ್ರಕರಣ ದಾಖಲಾಗಿದೆ. ಅಲ್ಲದೆ ನಿಮ್ಮ ಆಧಾರ್ ಕಾರ್ಡ್ ದುರುಪಯೋಗಪಡಿಸಿಕೊಂಡು ದೆಹಲಿಯಲ್ಲಿ ನಿಮ್ಮ ಹೆಸರಿನಲ್ಲಿ ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ತೆರೆದು, ಕೋಟ್ಯಾಂತರ ರೂ. ವ್ಯವಹಾರ ನಡೆಸಲಾಗಿದೆ ಎಂದು ಬೆದರಿಸಿದ್ದಾನೆ.

ಅಲ್ಲದೆ ಮಹಿಳೆಗೆ ಬಂಧನದ ನಕಲಿ ವಾರಂಟ್ ಪ್ರತಿ ಹಾಗೂ ಜಾಮೀನು ಭದ್ರತಾ ಬಾಂಡ್‌ನ ಪ್ರತಿ ಕಳುಹಿಸಿ, ನೀವು 2 ಕೋಟಿ ರೂ. ಸೆಕ್ಯೂರಿಟಿ ಬಾಂಡ್ ಇಡಬೇಕು. ತನಿಖೆ ಮುಗಿದ ಬಳಿಕ ಅ.13ಕ್ಕೆ ಹಣ ಹಿಂದಿರುಗಿಸುತ್ತೇವೆ ಎಂದು ತಿಳಿಸಿದ್ದಾನೆ. ಆ ವೇಳೆ ಮಹಿಳೆ ಮನೆಯಿಂದ ಹೊರಹೋಗದಂತೆ ಹಾಗೂ ಬೇರೆಯವರಿಗೆ ಕರೆ ಮಾಡದಂತೆ ನೋಡಿಕೊಂಡಿದ್ದಾನೆ. ಕರೆ ಮಾಡಿರುವುದು ಪೊಲೀಸ್ ಅಧಿಕಾರಿಯೇ ಇರಬೇಕು ಎಂದು ನಂಬಿದ ಮಹಿಳೆ, ಆತ ತಿಳಿಸಿದ್ದ ಖಾತೆಗೆ ಹಂತ ಹಂತವಾಗಿ ಒಟ್ಟು 1,39,72,104 ರೂ. ಹಣ ವರ್ಗಾವಣೆ ಮಾಡಿದ್ದಾರೆ. ಆದರೆ ಆತನ ಹೇಳಿದ ದಿನಾಂಕದಲ್ಲಿ ಹಣ ಹಿಂದಿರುಗಿಸಿಲ್ಲ. ಆತ ಸಂಪರ್ಕಕ್ಕೂ ಸಿಗದಿದ್ದಾಗ ಅನುಮಾನಗೊಂಡು ಮೈಸೂರಿನ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಿಖಿಲ್‌ಗೆ ಸದ್ಯದ ಪರಿಸ್ಥಿತಿಯಲ್ಲಿ ಚುನಾವಣೆ ಬೇಡವಾಗಿದೆ



ಸಾ.ರಾ ಮಹೇಶ್

ರಾಮನಗರ, ಅ.17– ಸದ್ಯದ ಪರಿಸ್ಥಿತಿಯಲ್ಲಿ ಚುನಾವಣೆ ಬೇಡ, ಇನ್ನೂ ಮೂರು ವರ್ಷ ಪಕ್ಷ ಸಂಘಟನೆ ಮಾಡುತ್ತೇನೆ ಎಂದು ನಿಖಿಲ್ ಕುಮಾರಸ್ವಾಮಿ ನನ್ನ ಬಳಿ ಹೇಳಿಕೊಂಡಿದ್ದಾರೆ ಎಂದು ಮಾಜಿ ಸಚಿವ ಸಾ.ರಾ ಮಹೇಶ್ ಹೇಳಿಕೆ ನೀಡಿದ್ದಾರೆ.

ಬಿಡದಿಯ ಹೆಚ್.ಡಿ.ಕುಮಾರಸ್ವಾಮಿ ಅವರ ತೋಟದ ಮನೆಯಲ್ಲಿ ನಡೆದ ಜೆಡಿಎಸ್ ಪ್ರಮುಖರ ಸಭೆಯಲ್ಲಿ ಭಾಗಿಯಾಗಿದ್ದ ಅವರು ಮಾಧ್ಯಮಗಳ ಜೊತೆ ಮಾತನಾಡಿ, ಚನ್ನಪಟ್ಟಣ ಹೆಚ್.ಡಿ.ಕುಮಾರಸ್ವಾಮಿ ಪ್ರತಿನಿಧಿಸುತ್ತಿದ್ದ ಕ್ಷೇತ್ರವಾಗಿದೆ. ಈಗ ಎನ್‌ಡಿಎ ಅಭ್ಯರ್ಥಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಬೇಕು. ಇಂದು ಪೂರ್ವಭಾವಿಯಾಗಿ ಚರ್ಚೆ ಮಾಡಿದ್ದೇವೆ. ಅಭ್ಯರ್ಥಿ ಆಯ್ಕೆ ಬಗ್ಗೆ ಎರಡೂ ಪಕ್ಷದ ಹೈಕಮಾಂಡ್ ನಾಯಕರು ತೀರ್ಮಾನ ಮಾಡುತ್ತಾರೆ. ರಾಜ್ಯದಲ್ಲಿ ಉಪಚುನಾವಣೆ ನಡೆಯಲಿರುವ ಮೂರೂ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲಬೇಕು ಅಷ್ಟೇ. ಕಾಂಗ್ರೆಸ್ ಸರ್ಕಾರ ಸಾಕಷ್ಟು ಭ್ರಷ್ಟಾಚಾರದಲ್ಲಿ ಮುಳುಗಿದೆ. ಇದರಿಂದ ಜನ ಬೇಸತ್ತಿದ್ದಾರೆ. ಹಾಗಾಗಿ ಈ ಮೂರು ಕ್ಷೇತ್ರ ಗೆಲ್ಲುವ ವಿಶ್ವಾಸ ಇದೆ ಎಂದು ಹೇಳಿದರು. ನಿಖಿಲ್ ಕುಮಾರಸ್ವಾಮಿ ಸ್ಪರ್ಧೆಗೆ ಒತ್ತಡ ಹೆಚ್ಚಳದ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಸಾಕಷ್ಟು ಜನ ನನಗೂ ಕರೆ ಮಾಡಿ ಈ ಬಗ್ಗೆ ಮಾತನಾಡಿದ್ದಾರೆ. ಕಾರ್ಯಕರ್ತರ ಒತ್ತಡ ಇದ್ದರೂ ಅದನ್ನು ತೀರ್ಮಾನ ಮಾಡುವುದು ನಿಖಿಲ್. ಅವರು ಕೂಡ ಈ ಬಗ್ಗೆ ನನ್ನ ಜೊತೆ ಅನೇಕ ಬಾರಿ ಮಾತನಾಡಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಚುನಾವಣೆ ಬೇಡ, ಸಂಘಟನೆ ಮಾಡಬೇಕು ಎಂದಿದ್ದಾರೆ. ಕುಮಾರಸ್ವಾಮಿ ಕೂಡ ದೆಹಲಿಯಲ್ಲಿ ಇರುತ್ತಾರೆ. ಇರುವ ಮೂರೂವರೆ ವರ್ಷದಲ್ಲಿ ನಿಖಿಲ್ ಪಕ್ಷ ಸಂಘಟನೆ ಮಾಡಬೇಕು. ಹಾಗಾಗಿ ವೈಯಕ್ತಿಕವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವ ಆಸಕ್ತಿ ಇಲ್ಲ ಎಂದಿದ್ದಾರೆ. ಮೈತ್ರಿ ಪಕ್ಷ ಏನು ತೀರ್ಮಾನ ಮಾಡುತ್ತದೋ ನೋಡೋಣ ಎಂದು ಅವರು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಪ್ರಿನ್ಸಿಪಾಲ್ : ಏನು ಮಕ್ಕಳಾ, ಏನು ನಿಮ್ಮ ಸಮಸ್ಯೆ?
ಮಕ್ಕಳು : ನಮ್ಮ ಕ್ಲಾಸ್ ಟೀಚರ್ ಬಗ್ಗೆ ಕಂಪ್ಲೇಂಟ್ ಮಾಡಬೇಕಿತ್ತು..
ಪ್ರಿನ್ಸಿಪಾಲ್ : ಏನದು?
ಮಕ್ಕಳು : ನಮ್ಮ ಟೀಚರ್‌ಗೆ ಏನೂ ಗೊತ್ತಿಲ್ಲ ಸರ್, ಎಲ್ಲದಕ್ಕೂ ನಮಗೇ ಆನ್ಸರ್ ಮಾಡಿ.. ಆನ್ಸರ್ ಮಾಡಿ ಅಂತಾರೆ...

ಮೈಸೂರು ಮಿತ್ರ
ಶುಕ್ರವಾರ, 18 ಅಕ್ಟೋಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತಂದೆ ಕೂಡಿಟ್ಟ ಕೈ ತುಂಬಾ ಹಣದಲ್ಲಿ ಶ್ರೀಮಂತಿಕೆಯ ಜೀವನ ನಡೆಸುವವನು ಅಲ್ಲ ಶ್ರೀಮಂತ. ತನ್ನನ್ನು ಬೆಳೆಸಲು ತಂದೆ ಮಾಡಿದ ಸಾಲವ ತೀರಿಸಿ ತಾನು ದುಡಿದು ತಂದೆಯ ಸಾಕುವವನು ನಿಜವಾದ ಶ್ರೀಮಂತ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೆಣ್ಣಿಗೆ ಹಠವಿರಬಾರದು, ಗಂಡಿಗೆ ಚಟವಿರಬಾರದು

ನಿಮ್ಮ ಪತ್ರಗಳು

■ ದಸರಾ ಮೆರವಣಿಗೆಯಲ್ಲಿ ಅಧಿಕಾರೇತರ ಸದಸ್ಯರಿಂದ ಕಿರಿಕಿರಿ

ಮಾನ್ಯರೆ,

ಈ ವರ್ಷದ ನಾಡಹಬ್ಬ ದಸರಾ ಮುಗಿದಿದೆ. ಆದರೆ ದಸರಾದಲ್ಲಿ ಮುಖ್ಯ ಆಕರ್ಷಣೆಯಾದ ಜಂಬೂಸವಾರಿ ಮೆರವಣಿಗೆಯಲ್ಲಿ ಮೆರವಣಿಗೆಯ ಉಪ ಸಮಿತಿಯ ಅಧಿಕಾರೇತರ ಸದಸ್ಯರು ನಡೆದುಕೊಂಡ ರೀತಿಯನ್ನು ನೋಡಿದರೆ ಜಂಬೂಸವಾರಿಯನ್ನು ನೋಡಲು ಬಂದ ವೀಕ್ಷಕರಿಗೆ ತೀವ್ರ ಮುಜುಗರ ಉಂಟು ಮಾಡಿತು. ಮೆರವಣಿಗೆಯ ಉಪ ಸಮಿತಿಯ ನೂರಾರು ಸದಸ್ಯರು ಹಾಗೂ ಈಗಾಗಲೇ ಮುಕ್ತಾಯವಾಗಿರುವ ಕಾರ್ಯಕ್ರಮಗಳ ಉಪ ಸಮಿತಿಯ ಅಧಿಕಾರೇತರ ಸದಸ್ಯರು ಸಹ ಕತ್ತಿಗೆ ಟ್ಯಾಗ್ ಧರಿಸಿ ಅಂಬಾರಿ ಹೊತ್ತ ಆನೆಯ ಮುಂದೆಯೇ ಓಡಾಡುತ್ತಿದ್ದ ದೃಶ್ಯ ಪ್ರೇಕ್ಷಕರಿಗೆ ತೀರಾ ಅಸಹ್ಯವೆನಿಸಿತು.

ಮೆರವಣಿಗೆಯಲ್ಲಿ ಅಧಿಕಾರೇತರ ಸದಸ್ಯರ ಕೆಲಸವೇನು? ಅವರಿಗೆ ಯಾವ ಜವಾಬ್ದಾರಿ ಇರುತ್ತದೆ? ಎಂಬುದನ್ನು ಅಧಿಕಾರಿಗಳು ಅವರಿಗೆ ಮೊದಲೇ ತಿಳಿಸಬೇಕಿತ್ತು. ಕೇವಲ ಅಂಬಾರಿ ಹೊತ್ತ ಆನೆಯ ಹಿಂದೆ – ಮುಂದೆ ಓಡಾಡುವುದಷ್ಟೇ ಇವರ ಕೆಲಸವೇ? ಇವರಿಂದ ಮೆರವಣಿಗೆಗೆ ಆದ ಉಪಯೋಗವೇನು? ನನಗೆ ತಿಳಿದಿರುವಂತೆ ಇವರಿಂದ ಐದು ಪೈಸೆ ಉಪಯೋಗವೂ ಇರುವುದಿಲ್ಲ.

ಸಾಮಾನ್ಯವಾಗಿ ಆಡಳಿತ ಪಕ್ಷದ ಕಾರ್ಯಕರ್ತರೇ ಎಲ್ಲಾ ಉಪ ಸಮಿತಿಯ ಅಧಿಕಾರೇತರ ಸದಸ್ಯರು ಇರುತ್ತಾರೆ. ಇವರನ್ನು ಹದ್ದುಬಸ್ತಿನಲ್ಲಿಡಲು ಪೊಲೀಸರು ಸಹ ಹಿಂದೇಟು ಹಾಕುತ್ತಾರೆ. ಹೀಗಾಗಿ ಮೆರವಣಿಗೆ ಜನರ ಸಂತೆಯಂತಾಗುತ್ತದೆ. ಪೊಲೀಸರಿಗೂ ಈ ಮೆರವಣಿಗೆ ಮುಗಿದರೇ ಸಾಕು ಎನ್ನುವಂತಾಗಿರುತ್ತದೆ.

ಮುಂದಿನ ವರ್ಷದಿಂದಲಾದರೂ ಯಾವುದೇ ಸಮಿತಿಗಳಿಗೆ ಅಧಿಕಾರೇತರ ಸದಸ್ಯರ ಸಂಖ್ಯೆ ಹತ್ತು ಜನರಿಗಿಂತ ಹೆಚ್ಚು ಇರದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಈ ವರ್ಷದಂತೆ ಮೆರವಣಿಗೆ ಅಶಿಸ್ತಿನ ಗೊಂದಲದ ಗೂಡಾಗುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಕೆನಡಾ ಉದ್ಧಟತನಕ್ಕೆ ಕಡಿವಾಣ ಅಗತ್ಯ

ಮಾನ್ಯರೆ,

ಭಾರತ ಒಂದು ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ವಿಶ್ವದ ಯಾವುದೇ ದೇಶವಾಗಲಿ ಭಾರತದ ಆಂತರಿಕ ವಿಚಾರದಲ್ಲಿ ಮಧ್ಯಪ್ರವೇಶ ಮಾಡುವುದು ಯೋಗ್ಯವಲ್ಲ. ಪ್ರಸ್ತುತ ಕೆನಡಾ ದೇಶ ಅಲ್ಲಿನ ಮುಂದಿನ ಚುನಾವಣೆಗಾಗಿ ಮತ್ತು ಅಲ್ಲಿರುವ ಸುಮಾರು 8 ಲಕ್ಷ ಸಿಖ್ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಭಾರತದ ಆಂತರಿಕ ವಿಚಾರದಲ್ಲಿ ತಲೆ ಹಾಕುತ್ತಾ ಖಲಿಸ್ತಾನ ಪ್ರತ್ಯೇಕತೆಯನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ.

ಕಳೆದ ವರ್ಷ ಖಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆಯಲ್ಲಿ ಭಾರತದ ಸರ್ಕಾರಿ ಏಜೆಂಟರ ಕೈವಾಡವಿದೆ ಎಂದು ಗುಪ್ತಚರ ಮಾಹಿತಿಯನ್ನು ಮಾತ್ರವೇ ಆಧರಿಸಿ ಕೆನಡಾದ ಪ್ರಧಾನಿ ಟ್ರುಡೋ ಆರೋಪ ಮಾಡಿದ್ದರು. ಆದರೆ, ಇದಕ್ಕೆ ಬೇಕಾದ 'ಸ್ಥಿರ ಹಾಗೂ ಖಚಿತ ಸಾಕ್ಷ್ಯಾಧಾರಗಳಿಲ್ಲ' ಎಂದು ಅವರೇ ಒಪ್ಪಿಕೊಂಡಿದ್ದರು. ಇಷ್ಟಾದರೂ ಇತ್ತೀಚೆಗೆ ಅಲ್ಲಿನ ಭಾರತದ ವಿದೇಶಾಂಗ ಇಲಾಖೆಯ ಅಧಿಕಾರಿಯ ಮೇಲೆ ಆರೋಪ ಹೊರಿಸಿದ್ದು, ಇದನ್ನು ಭಾರತ ತಿರಸ್ಕರಿಸಿ ಇಲ್ಲಿನ ಹಂಗಾಮಿ ಹೈಕಮಿಷನರ್ ಸೇರಿದಂತೆ ಕೆನಡಾದ ಆರು ರಾಜತಾಂತ್ರಿಕರನ್ನು ವಜಾಗೊಳಿಸಿದ್ದು, ಶನಿವಾರದ ಒಳಗೆ ಜಾಗ ಖಾಲಿ ಮಾಡುವಂತೆ ಗಡುವು ನೀಡಿದೆ.

ಕೋವಿಡ್ ಸಮಯದಲ್ಲಿ ಭಾರತ ಕೆನಡಾಕ್ಕೆ ಅಪಾರ ಪ್ರಮಾಣದ ಔಷಧಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಒದಗಿಸಿತ್ತು. ಇದನ್ನು ಕೆನಡಾ ದೇಶ ಮರೆತಂತಿದೆ. ಭಾರತ ಪ್ರಸ್ತುತ ಜಗತ್ತಿನ ಎಲ್ಲಾ ರಂಗಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದು, ಕೆನಡಾಕ್ಕೆ ರಾಜತಾಂತ್ರಿಕ ಮಾರ್ಗಗಳ ಮೂಲಕ ಒತ್ತಡ ಹೇರಿ ಕಡಿವಾಣ ಹಾಕಬೇಕು ಮತ್ತು 144 ಕೋಟಿ ಭಾರತೀಯರ ಪರವಾಗಿ ಕೆನಡಾದ ಉದ್ಧಟತನವನ್ನು ಖಂಡಿಸೋಣ. **–ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.**

■ ಬಿಗ್‌ಬಾಸ್ ಎನ್ನುವ ಜಗಳಗಂಟಿ ಕಾರ್ಯಕ್ರಮ ನಿಲ್ಲಿಸುವುದೊಳಿತು!

ಮಾನ್ಯರೆ,

ಕನ್ನಡದ ಖಾಸಗಿ ಚಾನೆಲ್ ಒಂದರಲ್ಲಿ ಬಿಗ್‌ಬಾಸ್ ಹೆಸರಿನಡಿ ಪ್ರತಿದಿನ ಪ್ರಸಾರವಾಗುತ್ತಿರುವ ಕಾರ್ಯಕ್ರಮವೊಂದು ವೀಕ್ಷರಿಗೆ ನೋಡಲು ಕಿರಿಕಿರಿ ಉಂಟು ಮಾಡುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದಂತಹ ಛಾಪು ಮೂಡಿಸಿರುವ ಸೆಲೆಬ್ರಿಟಿಗಳನ್ನು ಒಂದೆಡೆ ತಂದು ಒಂದೇ ಮನೆಯಲ್ಲಿ ಕೂಡಿಹಾಕಿ (!?) ಅವರಿಂದ ಬಗೆ ಬಗೆಯ ಆಟಗಳನ್ನು ಆಡಿಸಿ ವೀಕ್ಷಕರಿಗೆ ಮನರಂಜನೆ ನೀಡುವ ದೃಷ್ಟಿಯಿಂದ ಪ್ರಸಾರವಾಗುತ್ತಿರುವ ಈ ಕಾರ್ಯಕ್ರಮ ತೀರ ಇತ್ತೀಚೆಗೆ ನೋಡಲು ಸಹ್ಯವಾಗುತ್ತಿಲ್ಲ.

ಇದರಲ್ಲಿ ಭಾಗವಹಿಸಿರುವ ಸ್ಪರ್ಧಿಗಳು ಅವಾಚ್ಯ ಹಾಗೂ ಅಶ್ಲೀಲ ಪದಗಳಿಂದ ಪರಸ್ಪರ ಬೈದುಕೊಳ್ಳುವುದು, ನಿಂದಿಸುವುದು, ಎದುರಾಳಿ ಸ್ಪರ್ಧಿಗಳು ಕೆರಳುವಂತೆ ಅವರನ್ನು ಕಿಚಾಯಿಸುವುದು. ಬರೀ ಇದೇ ರೀತಿಯ ಸನ್ನಿವೇಶಗಳನ್ನು ಸೃಷ್ಟಿಸಿ, ಸ್ಪರ್ಧಿಗಳು ಕಿರುಚುವ, ಅರಚುವ, ಕಿತ್ತಾಡಿಕೊಳ್ಳುವ ರೌದ್ರ ದೃಶ್ಯಗಳನ್ನು ಪ್ರತಿನಿತ್ಯ ಪ್ರಸಾರ ಮಾಡುವುದು ಈ ಕಾರ್ಯಕ್ರಮದ ಉದ್ದೇಶ ಎಂಬಂತಿದೆ. ಕನ್ನಡ ಚಾನಲ್ ಒಂದರ ಕಾರ್ಯಕ್ರಮವನ್ನು ಮಕ್ಕಳು ಸಹಿತ ಕುಟುಂಬದ ಪರಿವಾರದೊಂದಿಗೆ ಕೋಟ್ಯಾಂತರ ಮಂದಿ ನಿತ್ಯ ವೀಕ್ಷಣೆ ಮಾಡುತ್ತಿದ್ದಾರೆ ಎಂಬ ಕನಿಷ್ಠ ಜ್ಞಾನವು ಇಲ್ಲದೆ ಈ ಕಾರ್ಯಕ್ರಮದದಲ್ಲಿ ಭಾಗವಹಿಸಿರುವ ಸ್ಪರ್ಧಿಗಳು ಅತಿರೇಕದಿಂದ ವರ್ತಿಸುತ್ತಿರುವುದು, ಅದನ್ನೇ ಆ ಚಾನೆಲ್‌ನವರು ಪ್ರಸಾರ ಮಾಡುತ್ತಿರುವುದು, ಇದನ್ನೆಲ್ಲಾ ವೀಕ್ಷಕರು ಮಕ್ಕಳೊಟ್ಟಿಗೆ ಕೂತು ನೋಡುವುದು ಖೇದಕರ ಅನಿಸುತ್ತದೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಸ್ಪರ್ಧಿಗಳು ಹಣ, ಹೆಸರು ಸಲುವಾಗಿ ಏನು ಬೇಕಾದರೂ ಮಾಡಲು ಸೈ ಎನ್ನುವಂತಿದೆ. ಅಲ್ಲದೇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವವರು ಸೇರಿದಂತೆ ಬರೀ ವಿವಾದಗಳಿಂದಲೇ ಚಾಲ್ತಿಯಲ್ಲಿರುವ ಕೆಲವರನ್ನು ಉದ್ದೇಶಪೂರ್ವಕವಾಗಿ ಕರೆತಂದು ಟಾಸ್ಕ್ ಹೆಸರಲ್ಲಿ ಸ್ಪರ್ಧಿಗಳನ್ನು ಕಿತ್ತಾಡಲು ಅವಕಾಶ ಮಾಡಿಕೊಟ್ಟು, ಆ ಮೂಲಕ ವೀಕ್ಷಕರನ್ನು ಮತ್ತಷ್ಟು ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ.

ಈ ಬಾರಿಯ ಬಿಗ್‌ಬಾಸ್ ಶೋ ಎಂಬುದೇ ಒಂಥರಾ ಗಲಾಟೆ, ಗಲಭೆಕೋರರ ಸಂತೆಯಂತಿದೆ. ಮತ್ತೊಬ್ಬರ ಖಾಸಗಿ ಬದುಕಿನ ಮೇಲಿರೋ ಮನುಷ್ಯ ಸಹಜ ಕ್ಯೂರಿಯಾಸಿಟಿಯನ್ನೇ ಬಂಡವಾಳ ಮಾಡಿಕೊಂಡು ಈ ಶೋವನ್ನು ಪ್ರದರ್ಶಿಸಲಾಗುತ್ತಿದೆ. ಸ್ಪರ್ಧಿಗಳ ನಡುವಿನ ಕಿತ್ತಾಟ, ಬಡಿದಾಟ ಹಾಗೂ ಅವಾಚ್ಯ, ಅಶ್ಲೀಲ ಪದ ಪ್ರಯೋಗದಿಂದ ಕುಖ್ಯಾತಿಯಾಗಿರುವ ಈ ಕಾರ್ಯಕ್ರಮವನ್ನು ಚಾನೆಲ್‌ನವರು ತಕ್ಷಣಕ್ಕೆ ನಿಲ್ಲಿಸುವುದು ಸಮಾಜದ ದೃಷ್ಟಿಯಿಂದ ಒಳಿತೆನಿಸುತ್ತದೆ.


–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.





ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.


ಮಂಥನ

ಅಡುಗೆ ಅರಮನೆಯಲ್ಲಿ ಅರಸ–ಅರಸಿಯರಲ್ಲಿ ಪೈಪೋಟಿ!











ಮೈಸೂರು ಪಾಕು ಮೈಸೂರಿನ ಅಸ್ಮಿತೆಯ ಬಹುಮುಖ್ಯ ಭಾಗ. ಈ ಮಧುರ ಸಿಹಿಯನ್ನು ತಿಂದು, ತಿನ್ನಿಸಿ ಹಂಚಿ ಸಂಭ್ರಮಿಸುವ ಪರಿಪಾಠ ಇಂದಿಗೂ ಚಾಲ್ತಿಯಲ್ಲಿದೆ. ಪ್ರಪಂಚದಾದ್ಯಂತ ಜನಪ್ರಿಯವಾಗಿರುವ ಈ ಸಿಹಿಯ ಆವಿಷ್ಕಾರವನ್ನು ಮಾಡಿದ್ದು ಮೈಸೂರಿನ ಕಾಕಾಸುರ ಮಾದಪ್ಪನವರು. ಅರಮನೆಯ ಮುಖ್ಯ ಬಾಣಸಿಗರಾಗಿದ್ದ ಮಾದಪ್ಪನವರು ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಮಾಡಿ ಬಡಿಸಿದ ಈ ಸಿಹಿ ಮಹಾರಾಜರ ಅಚ್ಚುಮೆಚ್ಚಿನ ಸಿಹಿಯಾಗಿದ್ದು ಇತಿಹಾಸ. ಮೈಸೂರಿನ ಮಾರುಕಟ್ಟೆಯ ಬಳಿ ಇರುವ ಗುರು ಸ್ವೀಟ್ಸ್ ಇಂದಿಗೂ ಅಧಿಕೃತ ರುಚಿಯ ಮೈಸೂರು ಪಾಕು ದೊರೆಯುವ ತಾಣವಾಗಿ ವಿಶ್ವಪ್ರಸಿದ್ಧ.

ಹೀಗೆ ಹಲವು ತಿಂಡಿ ತಿನಿಸುಗಳು ಒಂದೊಂದು ಊರು, ಪ್ರಾಂತ್ಯ ಜಿಲ್ಲೆಯನ್ನು ಗುರುತಿಸುವ ಹೆರಿಟೇಜ್ ಮತ್ತು ಜಿ.ಐ ಟ್ಯಾಗ್‌ಗಳಂತಾಗಿ ಬಿಡುತ್ತವೆ. ಮದ್ದೂರು ವಡೆ, ಮುಳಬಾಗಿಲಿನ ದೋಸೆ, ಉಡುಪಿ ಖಾರ, ಮಲೆನಾಡಿನ ತೊಡೆದೇವು, ಅಕ್ಕಿರೊಟ್ಟಿ, ಕಡುಬು, ಹಲಸಿನ ಖಾದ್ಯಗಳು, ಬಂಗಾರಪೇಟೆಯ ಪಾನಿಪುರಿ, ಬಿಡದಿಯ ತಟ್ಟೆ ಇಡ್ಲಿ, ಬೆಳಗಾವಿಯ ಕುಂದಾ, ಹುಬ್ಬಳ್ಳಿಯ ಹೋಳಿಗೆ, ಉತ್ತರ ಕರ್ನಾಟಕದ ಮಿರ್ಚಿ ಮಂಡಕ್ಕಿ, ಜೋಳದ ರೊಟ್ಟಿ ರಂಜಕ, ಎಣ್ಣೆಗಾಯಿ ಅಥವಾ ತುಂಬುಗಾಯಿ, ಧಾರವಾಡದ ಪೇಡಾ, ಮಂಗಳೂರಿನ ಬಜ್ಜಿ, ನೀರುದೋಸೆ, ಪತ್ರೊಡೆ, ಕೋರಿ ರೊಟ್ಟಿ, ಮೀನಿನ ಖಾದ್ಯಗಳು, ಮಂಡ್ಯದ ರಾಗಿಮುದ್ದೆ ಬಸ್ಸಾರು, ಮೈಸೂರಿನ ಬಿಸಿಬೇಳೆಬಾತ್, ಚಿತ್ರಾನ್ನ, ಒತ್ತು ಶಾವಿಗೆ ಅಲ್ಲದೇ ನಮ್ಮದೇ ನೆಲದ ಕೇಸರಿಬಾತ್, ರವೆ ಉಂಡೆ, ನುಚ್ಚಿನುಂಡೆ, ಬಗೆ ಬಗೆಯ ದೋಸೆಗಳು, ಉಂಡೆಗಳು, ಉಪ್ಪಿಟ್ಟು, ಹಪ್ಪಳಗಳು, ಚುರುಮುರಿ, ಅವಲಕ್ಕಿ ಇನ್ನು ಭಾರತವನ್ನು ಪೂರ್ತಿಯಾಗಿ ತೆಗೆದುಕೊಂಡರೆ ಪ್ರತಿ ರಾಜ್ಯಗಳ ಪ್ರತಿ ವಿಶೇಷ ಖಾದ್ಯಗಳನ್ನು ತಿಂದು ಮುಗಿಸಲು ಇಡೀ ಜನ್ಮವೇ ಸಾಕಾಗುವುದಿಲ್ಲ.

ಪ್ರಪಂಚದ ಎಲ್ಲ ಖಂಡಗಳೂ ತಮ್ಮ ವಾತಾವರಣ, ಪ್ರಕೃತಿ, ಅಲ್ಲಿ ದೊರೆಯುವ ವಸ್ತುಗಳಿಗೆ ಅನುಗುಣವಾಗಿ ತಮ್ಮ ತಮ್ಮ ಪ್ರದೇಶಗಳ ಹವಾಗುಣಗಳಿಗೆ ಒಗ್ಗುವಂತೆ ಖಾದ್ಯಗಳನ್ನು ರೂಪಿಸಿಕೊಂಡಿರುತ್ತವೆ. ಈಗ ಮೈಸೂರು ಪಾಕಿನ ಕರ್ತೃ ಯಾರೆಂದು ನಮಗೆ ಗೊತ್ತು. ಆದರೆ ಪ್ರಪಂಚದಲ್ಲಿ ಇರುವ ಎಷ್ಟೋ ವಿಶೇಷ ಖಾದ್ಯಗಳನ್ನು ಮೊದಲಿಗೆ ಮಾಡಿದವರ್ಯಾರು, ಕಂಡುಹಿಡಿದವರ್ಯಾರು ಎಂದು ಹೇಳುವುದು ಅಸಾಧ್ಯವೇ ಸರಿ. ಈಗ ಮೈಸೂರು ಪಾಕನ್ನೇ ತೆಗೆದುಕೊಂಡರೆ, ಅದರಲ್ಲೂ ಇಂದು ಸ್ಪೆಷಲ್ ಎಂದು ಇನ್ನೊಂದು ವಿಧ ದೊರೆಯುತ್ತದೆ. ಖೋವಾ ಮೈಸೂರು ಪಾಕ್ ಮತ್ತು ಮಿಲ್ಕ್ ಕೇಕ್ ಮೈಸೂರು ಪಾಕ್ ಕೂಡಾ ದೊರೆಯುತ್ತಿದೆ. ಸಮಯದೊಂದಿಗೆ ತಿನಿಸುಗಳ Improvisation ಆಗಿದೆ ಹಾಗಾಗಿ ಎಂದೋ ಯಾರೋ ಅಚಾನಕ್ಕಾಗಿ, ಪ್ರಯತ್ನಪೂರ್ವಕವಾಗಿ, ಸವಾಲಿಗಾಗಿ, ಅಪ್ರಯತ್ನಪೂರ್ವಕವಾಗಿ, ಏನನ್ನೋ ಮಾಡಲು ಹೋಗಿ, ಅನಿವಾರ್ಯ ಸಂದರ್ಭಗಳಲ್ಲಿ ತಯಾರಿಸಿದ ತಿನಿಸುಗಳು ಇಂದು ಕಾಲಕಾಲಕ್ಕೆ ಬದಲಾಗಿ ನಾವು ಇಷ್ಟಪಟ್ಟು ಬಯಸಿ ತಿನ್ನುವ ಆಹಾರಗಳಾಗಿವೆ.

ಮತ್ತೆ ಏಕೆ ಅಡುಗೆಯ ವಿಷಯ ಬಂತೆಂದುಕೊಂಡಿರಾ... ಅಕ್ಟೋಬರ್ 20 ಅನ್ನು World Chef's Day ಎಂದು ಆಚರಿಸಲಾಗುತ್ತದೆ. World Association of Chefsನ ಮಾಜಿ ಅಧ್ಯಕ್ಷರೂ, ಪ್ರಸಿದ್ಧ ಬಾಣಸಿಗ ಮಾಸ್ಟರ್ ಚೆಫ್ ಡಾ. ಬಿಲ್ ಗಲ್ಘರ್ ಈ ದಿನವನ್ನು ಆಚರಿಸಲು ನಿರ್ಧರಿಸಿ ಎಲ್ಲರ ಮುಂದೆ ಪ್ರಸ್ತಾವನೆಯನ್ನು ಇಟ್ಟರು. ಬಾಣಸಿಗರು, ಸಮಾಜದ ಆರೋಗ್ಯ ಮತ್ತು ಸಾಮರಸ್ಯ ವೃದ್ಧಿಗೆ ನೀಡುವ ಕೊಡುಗೆಯನ್ನು ಅಲ್ಲಗಳೆಯಲಾಗದೆ ಎಲ್ಲರೂ ಒಪ್ಪಿದರು. 2004ರಿಂದ World Chef's Day ಅನ್ನು ಆಚರಿಸುವ ಪರಿಪಾಠ ಬೆಳೆದು ಬಂದಿತು. ಪ್ರತಿ ವರ್ಷ ಒಂದು ಘೋಷವಾಕ್ಯವನ್ನು ಇಟ್ಟುಕೊಳ್ಳುವ ಪರಿಪಾಠ ಇಲ್ಲೂ ಇದೆ. ಈ ಬಾರಿ 'Growing Great Chef's' ಎಂಬುದು ಘೋಷವಾಕ್ಯವಾಗಿದೆ. ಸಮಾಜಕ್ಕೆ ಉತ್ತಮ ಆಹಾರ ಸಂಸ್ಕೃತಿಯನ್ನು ಪರಿಚಯಿಸಿ ತನ್ಮೂಲಕ ಸದೃಢ ಸಮಾಜವನ್ನು ನಿರ್ಮಿಸುವುದು ಈ ದಿನಾಚರಣೆಯ ಮುಖ್ಯ ಉದ್ದೇಶ.

Will Durant ತನ್ನ Origin of Science ಕೃತಿಯಲ್ಲಿ, ಸ್ತ್ರೀಯನ್ನು ಮನುಕುಲದ ಮೊದಲ ವಿಜ್ಞಾನಿ, ವೈದ್ಯೆ ಎಂದು ಕರೆಯುತ್ತಾನೆ. ಅದು ನಿಜವೂ ತಾನೆ; ಅಡುಗೆಮನೆಯಲ್ಲಿಯೇ ತನ್ನ ಆಯುಷ್ಯದ ಅತೀ ಹೆಚ್ಚು ಭಾಗವನ್ನು ಕಳೆಯುವ ಸ್ತ್ರೀ, ಆಹಾರವೇ ಔಷಧ ಎಂಬುದನ್ನು ನಂಬಿ, ಋತುಗಳಿಗೆ ತಕ್ಕುದಾದ ಆಹಾರವನ್ನು ಕಾಳಜಿಯಿಂದ ತಯಾರಿಸಿ ಪ್ರೀತಿಯಿಂದ ಉಣಬಡಿಸಿ ಕುಟುಂಬದ ಆರೋಗ್ಯ ಕಾಪಾಡುತ್ತಾಳೆ. ಹಾಗಾಗಿ World Chef's Day ಯ ಮೊದಲ ಶುಭಾಶಯ ಅಮ್ಮನಿಗೆ, ಅಜ್ಜಿಗೆ, ಅಕ್ಕನಿಗೇ ಸಲ್ಲಬೇಕು ಅಲ್ಲವೇ? ಆದರೆ ಇದನ್ನು ವೈರುಧ್ಯವೆಂದಾದರೂ ಅನ್ನಿ ಅಥವಾ ವಿಪರ್ಯಾಸವೆನ್ನಿ, ಉತ್ತಮ ರುಚಿಕಟ್ಟಾದ ಅಡುಗೆಗೆ ನಾವು ನಳಪಾಕ ಎನ್ನುತ್ತೇವೆ!

ಹೌದು ಅಮ್ಮ ಮನೆಯ ಅಡುಗೆ ಮಾತ್ರ ಸೀಮಿತವಾದರೆ, ಅಡುಗೆ ಮಾಡುವುದನ್ನು ಉದ್ಯೋಗವಾಗಿ ತೆಗೆದುಕೊಂಡದ್ದು ಪುರುಷ! ಆದ್ದರಿಂದಲೇ ಬಾಣಸಿಗ ಪದಕ್ಕೆ ಸ್ತ್ರೀಲಿಂಗ ಸೂಚಕ ಪದವೇ ಇಲ್ಲ! ನಾನು ಇಲ್ಲಿ ಯಾವ ಸ್ತ್ರೀವಾದವನ್ನು ಪ್ರತಿಪಾದಿಸಲು ಹೊರಟಿಲ್ಲ, ಅಚ್ಚರಿ ಎನಿಸಿದ್ದನ್ನು ಹೇಳಿದೆ ಅಷ್ಟೇ.(ಬಾಣಸಿಗಳು ಎಂದೇನಾದರೂ ಇದೆಯೇ?). ಹಾಗೆ ನೋಡಿದರೆ ಹಿಂದಿನಿಂದಲೂ ನಮ್ಮ ಮನೆಗಳಲ್ಲಿ

> “ ಅಡುಗೆ ಮಾಡುವುದು ಅಷ್ಟೇನೂ ಗೌರವದ ವೃತ್ತಿಯಲ್ಲ ಎಂದುಕೊಂಡವರ ಯೋಚನೆಗಳು ಬದಲಾಗಿದೆ. ಇಂದು ವಿಶ್ವದೆಲ್ಲೆಡೆ ಎಲ್ಲ ವಿಶ್ವವಿದ್ಯಾನಿಲಯಗಳೂ ಚೆಫ್ ಕೋರ್ಸ್‌ಗಳನ್ನು ನಡೆಸುತ್ತವೆ. ನಮ್ಮ ಮೈಸೂರಲ್ಲಿಯೇ, ವಸ್ತುಪ್ರದರ್ಶನದ ಆವರಣದಲ್ಲಿ ಸರ್ಕಾರವೇ Food Craft Diploma Course ಅನ್ನು ಉಚಿತವಾಗಿ ಕಲಿಸುತ್ತಿದೆ. ಹಾಗೆ ಕಲಿತವರಿಗೆ ಸಣ್ಣ ಹೋಟೆಲ್‌ಗಳಿಂದ ಹಿಡಿದು, ಸ್ಟಾರ್ ಹೋಟೆಲ್‌ಗಳಲ್ಲಿ ಉತ್ತಮ ಸಂಬಳದ ಕೆಲಸ ದೊರೆಯುತ್ತಿವೆ.

ಗಂಡಸರು ಅಡುಗೆ ಮಾಡುತ್ತಿದ್ದಾರೆನ್ನಿ. ಮಡಿ ಮೈಲಿಗೆಯ ಆಚರಣೆ ಹೆಚ್ಚಿದ್ದ ಕಾಲದಲ್ಲಿ ಮನೆಯ ಹೆಂಗಸರು ಅಡುಗೆ ಮನೆಗೆ ಕಾಲಿಡದ ತಿಂಗಳ ಒಂದಷ್ಟು ದಿನಗಳಲ್ಲಿ ಗಂಡಸರು ಅನಿವಾರ್ಯವಾಗಿ ಅಡುಗೆ ಮಾಡುತ್ತಿದ್ದರು. ಅಲ್ಲಿಂದಲೇ ಉದ್ಯಮ ಆರಂಭಿಸಬಹುದೆಂಬ ಆತ್ಮವಿಶ್ವಾಸ ದೊರೆಯಿತೋ ಏನೋ!

ಭೀಮಸೇನ ನಳ ಮಹಾರಾಜರು ಮೀಸೆ ಹೊತ್ತ ಮಹನೀಯರೇ! ಅಲ್ಲವೇ? ನಳ ಮತ್ತು ಭೀಮ ಪುರಾಣಗಳಲ್ಲಿ ನಮಗೆ ದೊರೆಯುವ ಪಾಕ ಪ್ರವೀಣರು. ಇಬ್ಬರೂ ಶಾಪಗ್ರಸ್ತ ಸ್ಥಿತಿಯಲ್ಲಿದ್ದಾಗಲೇ ಅಡುಗೆಮನೆ ಸೇರಿ ಈ ಪಟ್ಟ ಗಳಿಸಿದ್ದು. ರಾಮ–ಕೃಷ್ಣರೂ ಅಲ್ಪ ಸ್ವಲ್ಪ ಅಡುಗೆ ಮಾಡುತ್ತಿದ್ದರಂತೆ! ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ಉಡುಪಿಯ ರಾಜನೇ ಕೃಷ್ಣನ ಆದೇಶದ ಮೇರೆಗೆ ಯುದ್ಧಭೂಮಿಯಲ್ಲಿ ಊಟೋಪಚಾರದ ಹೊಣೆ ಹೊತ್ತಿದ್ದನಂತೆ!

ಭಾರತದಲ್ಲಿ ಅಡುಗೆ ಪುಸ್ತಕಗಳ ವಿಧಾನ ಬಹಳ ಹಿಂದಕ್ಕೆ ಹೋಗುತ್ತದೆ. ಆಹಾರವೇ ಔಷಧ ಎಂದು ನಂಬಿದ್ದ ನಮ್ಮ ಪೂರ್ವಜರು ಅದನ್ನೇ ಪ್ರತಿಪಾದಿಸುತ್ತಾ ಅನೇಕ ಆಯುರ್ವೇದದ ಗ್ರಂಥಗಳಲ್ಲಿ ಹಲವು ಅಡುಗೆಗಳ ವಿಧಾನಗಳನ್ನು ವಿವರಿಸಿದ್ದಾರೆ. ಅವನ್ನೇ ಭಾರತದ ಮೊದಲ ಅಡುಗೆಯ ಪುಸ್ತಕಗಳೆನ್ನಬಹುದು! 12ನೆಯ ಶತಮಾನದಲ್ಲಿ ಕನ್ನಡದ ಕಲ್ಯಾಣದ ಚಾಲುಕ್ಯ ದೊರೆ 3ನೇ ಸೋಮೇಶ್ವರ ರಚಿಸಿರುವ ಮಾನಸೋಲ್ಲಾಸ ಕೃತಿ ನಮಗೆ ದೊರೆತಿದೆ. ಇದರಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿ ಅಡುಗೆಗಳ ಜೊತೆ ಹಲವು ವಿಷಯಗಳ ಬಗ್ಗೆ ಉಲ್ಲೇಖವಿದೆ. ನಮ್ಮ ಹರಿದಾಸರ ದೇವರ ನಾಮಗಳಲ್ಲಿ ನಮ್ಮ ದಾಸಾರು ಎಷ್ಟೋ ಖಾದ್ಯಗಳ ಪೂರ್ಣ ಪಾಕ ವಿಧಾನವನ್ನು ವಿವರಿಸಿದ್ದಾರೆ. ಇತ್ತೀಚೆಗೆ ಪ್ರಕಟವಾದ ಎನ್. ಕುಸುಮಾ ಮತ್ತು ಡಾ.ಶಾರದಾ.ಬಿ.ಎ ಅವರ ಹರಿದಾಸರ ಕೀರ್ತನೆಗಳಲ್ಲಿ ಉಪಚಾರ ಸಾಹಿತ್ಯ ಕೃತಿಯಲ್ಲಿ ಈ ಕುರಿತು ವಿವರವಾದ ಚಿತ್ರಣವಿದೆ.

ಈ ಪುಸ್ತಕಗಳ ರಚನಾಕಾರರಲ್ಲಿ ಹಲವರು ಬಾಣಸಿಗರಲ್ಲದಿದ್ದರೂ ಅಡುಗೆಯಲ್ಲಿ ಅತೀವ ಆಸಕ್ತಿ ಹೊಂದಿದವರಂತೂ ಹೌದು. ಇವರೆಲ್ಲಾ ಪುರುಷರೆ. 1670ರಲ್ಲಿ ಹನ್ನಾ ವೂಲಿ ಎಂಬ ಮಹಿಳೆ ಮೊದಲ ಬಾರಿಗೆ ಅಡುಗೆ ಪುಸ್ತಕವನ್ನು ಪ್ರಕಟಿಸುತ್ತಾಳೆ. ಭಾರತದಲ್ಲಿ ಎಸ್.ಮೀನಾಕ್ಷಿ ಅಮ್ಮಾಳ್ ಅವರು 1951ರಲ್ಲಿ 'ಸಮೈತು ಪಾರ್' ಪುಸ್ತಕವನ್ನು ತಮಿಳಿನಲ್ಲಿ ಪ್ರಕಟಿಸಿ ನಾಂದಿ ಹಾಡುತ್ತಾರೆ. ಬಾಣಸಿಗರು ಸಮಾಜದಲ್ಲಿನ ಆಹಾರ ಸಂಸ್ಕೃತಿಯನ್ನು ಬೆಳೆಸುವವರಷ್ಟೇ ಅಲ್ಲ ಅದನ್ನು ಕಾಪಿಡುವವರು ಸಹ. ಇತ್ತೀಚೆಗೆ ಹಲವು ಬಾಣಸಿಗರು ಹೊಸ ಹೊಸ ಅಡುಗೆಗಳನ್ನು ಕಲಿತು ಪ್ರಯೋಗ ಮಾಡುವುದಷ್ಟೇ ಅಲ್ಲ, ಅಳಿವಿನ ಅಂಚಿನಲ್ಲಿರುವ ಅನೇಕ ಪಾಕ ವಿಧಾನಗಳನ್ನು ಹುಡುಕಿ ಕಲಿತು ಮತ್ತೆ ಮುನ್ನೆಲೆಗೆ ತಂದು ಎಲ್ಲರಿಗೂ ಪರಿಚಯಿಸುತ್ತಿದ್ದಾರೆ. ಬಾಣಸಿಗರು ದೇಶ ದೇಶಗಳ ನಡುವಿನ ರಾಜಕೀಯ ಸಂಬಂಧ ವೃದ್ಧಿಗೂ ಕಾರಣರಾಗುತ್ತಾರೆ. ಭಾರತದಲ್ಲಿನ ರಾಷ್ಟ್ರಪತಿ ಭವನದಲ್ಲಿನ ಬಾಣಸಿಗರು ವಿದೇಶೀ ಅತಿಥಿಗಳ ರುಚಿಯನ್ನು ಅರಿತು ಅಡುಗೆ ತಯಾರಿಸಿ ದೇಶದ ಅಭಿಮಾನವನ್ನು ಕಾಯುತ್ತಾರೆ. ಅಮೆರಿಕದ ರಾಷ್ಟ್ರಪತಿ ಭವನದ ಬಾಣಸಿಗರಾದ ವಾಲ್ಟೆರ್ ಶೀಬ್ ಮತ್ತು ಆಂಡ್ರ್ಯೂ ಫ್ರೆಡ್‌ಮನ್ ಅವರ White House Chef; Eleven Years two Presidents One Kitchen ಪುಸ್ತಕ, ಇಂತಹ ಆಯಕಟ್ಟಿನ ಸ್ಥಳದಲ್ಲಿ ಕೆಲಸ ಮಾಡುವ ಬಾಣಸಿಗನ ತುಮುಲಗಳನ್ನು, ಸಂಕಷ್ಟಗಳನ್ನು ನಮ್ಮ ಮುಂದಿಡುತ್ತದೆ. The Butler ಚಿತ್ರ ಕೂಡಾ, 34 ವರ್ಷ ವೈಟ್‌ಹೌಸ್‌ನ ಬಾಣಸಿಗನಾಗಿದ್ದ ಯೂಜಿನ್ ಆಲೆನ್‌ನ ಜೀವನದಿಂದ ಪ್ರೇರಿತ, ಆಸಕ್ತಿಕರವಾಗಿದೆ.

ಟಿವಿ ಮತ್ತು ಜಾಲತಾಣಗಳು ಹೆಚ್ಚಾದ ಮೇಲೆ ಬಾಣಸಿಗರ ಅದೃಷ್ಟ ಖುಲಾಯಿಸಿತು. ಮಾತ್ರವಲ್ಲ, ರುಚಿಕರವಾದ ಒಳ್ಳೊಳ್ಳೆಯ ಅಡುಗೆಗಳನ್ನು ಕಲಿಯುವ ಹುಮ್ಮಸ್ಸಿರುವ ಸ್ತ್ರೀಯರಿಗೆ ಬಹಳ ಅನುಕೂಲವಾಯಿತು. ದೂರದರ್ಶನದಲ್ಲಿ ಭಾರತದ ಮೊದಲ ಅಡುಗೆಯ ಕಾರ್ಯಕ್ರಮ ನಡೆಸಿಕೊಟ್ಟ ಸಂಜೀವ್ ಕಪೂರ್ ಇತಿಹಾಸವನ್ನೇ ಸೃಷ್ಟಿಸಿದರು. ತಮ್ಮ ತಮ್ಮ ಮನೆಯ ಸಂಸ್ಕೃತಿಯ ಪ್ರಾಂತ್ಯದ ಅಡುಗೆಗಳನ್ನು ಮಾತ್ರ ತಿಳಿದಿದ್ದ, ಹೋಟೆಲಿನ ಮತ್ತು ಬೇರೆ ಬೇರೆ ಪ್ರಾಂತ್ಯದ ಅಡುಗೆಗಳ ಗುಟ್ಟುಗಳು ಬಹುತೇಕ ರಟ್ಟಾಗಿ ನಮ್ಮೆಲ್ಲರ ಅಡುಗೆಮನೆಗಳು ಹೊಸ ಹೊಸ ಅಡುಗೆಗಳಿಂದ ಘಮಘಮಿಸತೊಡಗಿದವು ಎಂಬುದು ಸುಳ್ಳಲ್ಲ. ಎಲ್ಲ ವಾಹಿನಿಗಳು ಅಡುಗೆ ಕಾರ್ಯಕ್ರಮಗಳನ್ನು ಪೈಪೋಟಿಯ ಮೇಲೆ ನಡೆಸಿದವು. ಹೊಸ ಹೊಸ ಚೆಫ್‌ಗಳ ಉದಯವಾಯಿತು. ವಿಕಾಸ್ ಖನ್ನ, ರನ್ ದೀಪ್ ಬ್ರಾರ್, ಮಧುರ್ ಜಾಫ್ರಿ, ತರಲಾ ದಲಾಲ್ (ಇವರ ಜೀವನ ಚಲನಚಿತ್ರವಾಗಿದೆ) ಹರ್ಪಾಲ್ ಸಿಂಗ್ ಸೋಖಿ, ವಿಶ್ವಕ್ಕೇ ಭಾರತೀಯ ಅಡುಗೆಗಳನ್ನು ಪರಿಚಯಿಸಿದರು. ವಿಶ್ವಮಟ್ಟದಲ್ಲಿ ಮಾಸ್ಟರ್ ಚೆಫ್ ಶೋ ವಿಜೇತ ಮಹಿಳೆಯರಾದ ಗರಿಮಾ ಅರೋರಾ ಪಂಕಜ್ ಬಢೋರಿಯಾ, ಶಿಪ್ರಾ ಖನ್ನಾ ಇತರರು ಮಹಿಳೆಯರಿಗೂ ಈ ಕ್ಷೇತ್ರ ಎಂಬುದನ್ನು ಪ್ರೂವ್ ಮಾಡಿದ್ದಾರೆ.

ನಮ್ಮ ಕರ್ನಾಟಕದಲ್ಲಿಯೇ, ಚಂದ್ರು, ಜಿಎಫ್‌ಸಿ ಗೌಡರು, ರಂಗೇಗೌಡರು, ಸಿಹಿಕಹಿ ಚಂದ್ರು ಇನ್ನೂ ಮುಂತಾದವರು ತಮ್ಮ ಬ್ರಾಂಡ್‌ಗಳನ್ನೇ ಸೃಷ್ಟಿಸಿಕೊಂಡಿದ್ದಾರೆ. ಮಹಿಳಾ ಚೆಫ್‌ಗಳಿಗೆ ಟಿ.ವಿಯಲ್ಲಿ ಅವಕಾಶ ಕಡಿಮೆ ಎಂದರೂ ತಪ್ಪಿಲ್ಲ. ಎಲ್ಲೋ ಮಧ್ಯೆ ಮಧ್ಯೆ ಬಂದು ಒಂದಷ್ಟು ಅಡುಗೆಗಳನ್ನು ಹೇಳಿಕೊಡುತ್ತಾರೆ. ಆದರೆ ಜಾಲತಾಣಗಳಲ್ಲಿ ಮಹಿಳೆಯರ ಅಡುಗೆ ಪೇಜ್‌ಗಳು ಅಸಂಖ್ಯ. ಹೆಬ್ಬಾರ್ಸ್ ಕಿಚನ್, ಸುಚಿತ್ರಾ ಕುಕಿಂಗ್, ರೇಖಾ ಅಡುಗೆ, ಶೆಟ್ಟೀಸ್ ಕಿಚನ್, ನೀಲೂ ಕುಕಿಂಗ್, ಮಂಜುಳಾ ಯಾದಲಂ, ಮಂಗಳೂರು ಕಿಚನ್ ಎಷ್ಟೊಂದು! ಲಕ್ಷಗಟ್ಟಲೆ ಫಾಲೋವರ್ಸ್‌ಗಳೊಂದಿಗೆ ಹಣವನ್ನೂ ಸಂಪಾದಿಸುತ್ತಿದ್ದಾರೆ. ಮೈಸೂರಿನಲ್ಲಿಯೇ ಅವಶ್ಯಕತೆ ಮತ್ತು ಆಸಕ್ತಿಯಿರುವ ಹೆಣ್ಣುಮಕ್ಕಳು ನಡೆಸುತ್ತಿರುವ ಎಷ್ಟೋ ಹೋಟೆಲ್‌ಗಳು, ಕೆಫೆಗಳು, ಕಾಫೀ ಟೀ ಜಾಯಿಂಟ್‌ಗಳಿವೆ. ಮನೆಯಿಂದಲೇ ಅವಶ್ಯಕತೆಯುಳ್ಳ ವಿದ್ಯಾರ್ಥಿಗಳಿಗೆ ಹಿರಿಯ ನಾಗರಿಕರಿಗೆ ಬುತ್ತಿ ಕಳಿಸುವ ವ್ಯವಹಾರ ನಡೆಸುವ ಹೆಂಗಸರು, ಗಂಡಸರು ಇದ್ದಾರೆ. ಮೈಸೂರಿನ ಸುಬ್ಬಣ್ಣ ನಟರೂ ಹೌದು ಪ್ರಸಿದ್ಧ ಬಾಣಸಿಗರೂ ಹೌದು. ಆಸಕ್ತಿಯುಳ್ಳ ಎಷ್ಟೋ ಪುರುಷರು ವೃತ್ತಿಪರ ಬಾಣಸಿಗರಂತೆ ದಿನಕ್ಕೊಂದು ಅಡುಗೆ ಮಾಡಿ ಅಪ್ಲೋಡ್ ಮಾಡುತ್ತಿದ್ದಾರೆ.

ಅಡುಗೆ ಮಾಡುವುದು ಅಷ್ಟೇನೂ ಗೌರವದ ವೃತ್ತಿಯಲ್ಲ ಎಂದುಕೊಂಡವರ ಯೋಚನೆಗಳು ಬದಲಾಗಿದೆ. ಇಂದು ವಿಶ್ವದೆಲ್ಲೆಡೆ ಎಲ್ಲ ವಿಶ್ವವಿದ್ಯಾನಿಲಯಗಳೂ ಚೆಫ್ ಕೋರ್ಸ್‌ಗಳನ್ನು ನಡೆಸುತ್ತವೆ. ನಮ್ಮ ಮೈಸೂರಿನಲ್ಲಿಯೇ, ವಸ್ತುಪ್ರದರ್ಶನದ ಆವರಣದಲ್ಲಿ ಸರ್ಕಾರವೇ Food Craft Diploma Course ಅನ್ನು ಉಚಿತವಾಗಿ ಕಲಿಸುತ್ತಿದೆ. ಹಾಗೆ ಕಲಿತವರಿಗೆ ಸಣ್ಣ ಹೋಟೆಲ್‌ಗಳಿಂದ ಹಿಡಿದು, ಸ್ಟಾರ್ ಹೋಟೆಲ್‌ಗಳಲ್ಲಿ ಉತ್ತಮ ಸಂಬಳದ ಕೆಲಸ ದೊರೆಯುತ್ತಿವೆ. ಮನೆಯಲ್ಲಿ ಇರುವ ಹೆಂಗಸರಿಗೆ ಅಡುಗೆಯಷ್ಟೇ ಬರುವುದು, ಅದರಿಂದೇನು ಆಗುತ್ತದೆ ಎಂದು ಆಡಿಕೊಳ್ಳುವ ಬಾಯಿಗಳಿಗೆ ಬೀಗ ಬೀಳುತ್ತಿವೆ. ಹಿಂದೆಯೂ ಮಹಿಳೆಯರು ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಮಸಾಲೆ ಪುಡಿಗಳನ್ನು ಮಾಡಿ ಮಾರಿ ಕುಟುಂಬವನ್ನು ದಡ ಸೇರಿಸುತ್ತಿದ್ದಳಾದರೂ, ಗೌರವಕ್ಕೆ ಚ್ಯುತಿಯಿತ್ತು. ಆದರೆ ಇಂದು ಪರಿಸ್ಥಿತಿ ಸುಧಾರಿಸಿದೆ. ಗಾಯಕಿಯಾಗಿದ್ದ ಮಾಲತಿ ಶರ್ಮ ಇಂದು ಆಡುಕಲೆ ಎಂಬ ಬ್ರಾಂಡ್‌ನ ಸಾರಥಿ! ಇನ್ನೂ ಎಷ್ಟೋ ಮಹಿಳಾ ಸ್ವ–ಉದ್ಯೋಗಿಗಳು ಅಡುಗೆಯನ್ನೇ ತಮ್ಮ ಉದ್ಯಮವನ್ನಾಗಿಸಿಕೊಂಡಿದ್ದಾರೆ. ಭಟ್ ಆಂಡ್ ಭಟ್ ಚಾನೆಲ್ ಅನ್ನು ನಡೆಸುತ್ತಿರುವ ಯುವಕ ಎಲ್ಲ ಯುವಕರಿಗೆ ಆದರ್ಶಪ್ರಾಯ. ಕಾಸರಗೋಡಿನ ಬಳಿಯಲ್ಲಿ ಪುಟ್ಟ ಹಳ್ಳಿಯ ಶುದ್ಧ ಪರಿಸರದಿಂದ ಸಾಂಪ್ರದಾಯಿಕ ಅಡುಗೆಗಳನ್ನು ಸಾಂಪ್ರದಾಯಿಕ ಶೈಲಿಯಲ್ಲಿಯಲ್ಲಿಯೇ ತಯಾರಿಸಿ ಪೋಸ್ಟ್ ಮಾಡುತ್ತಿದ್ದವ ಇಂದು ಅದೇ ಹೆಸರಿನ ಬ್ರಾಂಡ್ ಅಡಿಯಲ್ಲಿ ಉದ್ಯಮಿಯಾಗಿದ್ದಾನೆ.

ಇಂದಿನ ಸಿನಿಮಾ ಮತ್ತು ಧಾರಾವಾಹಿಗಳಲ್ಲೂ ಹೆಂಗಸರು ತಮ್ಮ ಕೈರುಚಿಯಿಂದಲೇ ಯಶಸ್ವೀ ಉದ್ಯಮಿಗಳಾಗಬಹುದು, ಚೆಫ್‌ಗಳಾಗಬಹುದು ಎಂಬ ಸಕಾರಾತ್ಮಕ ಯೋಚನೆ ಬಿತ್ತುತ್ತಿರುವುದು ಆಶಾದಾಯಕ ಪ್ರವೃತ್ತಿ. 'ಶ್ರೀರಸ್ತು ಶುಭಮಸ್ತು' ಧಾರಾವಾಹಿಯಲ್ಲಿ ಮಾಧವ, ಕನ್ನಡದ ಜನಪ್ರಿಯ ಧಾರಾವಾಹಿ 'ಭಾಗ್ಯಲಕ್ಷ್ಮಿ' ಹಿಂದಿಯ 'ಅನುಪಮಾ' ಅಲ್ಲದೆ, ಇತ್ತೀಚೆಗೆ ಬಂದ ಆಚಾರ್ ಅಂಡ್ ಕೋ ಕೂಡ ಅಡುಗೆ ಮಾಡುವುದು ಹೆಣ್ಣಿಗೆ ದೊರೆತಿರುವ ಅನನ್ಯ ಆಶೀರ್ವಾದ ಎಂಬುದನ್ನು ಹೇಳುತ್ತಿವೆ. ಕನ್ನಡ ಚಿತ್ರರಂಗದ ಸೂಪರ್ ಸ್ಟಾರ್ ಸುದೀಪ್ ಕೂಡಾ ಅಡುಗೆ ಬಹಳ ಚೆನ್ನಾಗಿ ಮಾಡುತ್ತಾರೆ! ನಮ್ಮ ನೆಚ್ಚಿನ ರಾಷ್ಟ್ರಪತಿಗಳಾಗಿದ್ದ ಡಾ. ಕಲಾಮ್ ಅವರೂ ಅಡುಗೆಯಲ್ಲಿ ನಿಷ್ಣಾತರಾಗಿದ್ದರು. ಇಂದು ಎಲ್ಲ ಗಂಡಸರೂ ಬಾಣಸಿಗರಾಗಲೇ ಬೇಕಿದೆ. ವಿವಿಧ ವೃತ್ತಿಗಳನ್ನರಸಿ ಬೇರೆ ಸ್ಥಳಗಳಿಗೆ ವಿದೇಶಗಳಿಗೆ ಹಾರುತ್ತಿರುವ ಮಕ್ಕಳು, ಹೆತ್ತವರನ್ನು ನೋಡಿಕೊಳ್ಳಲಾಗದ ಅನಿವಾರ್ಯ ಪರಿಸ್ಥಿತಿಯಲ್ಲಿರುತ್ತಾರೆ. ಗಂಡ–ಹೆಂಡತಿ ಇಬ್ಬರೇ ಇರುವ ಇಂದಿನ ಸಂದರ್ಭದಲ್ಲಿ ಹೆಂಡತಿಗೆ ಹುಷಾರು ತಪ್ಪಿದರೆ ಗಂಡ ಅಡುಗೆ ಮನೆಗೆ ಕಾಲಿಡಲೇಬೇಕು. ವರ್ಗಾವರ್ಗಿಯೂ ಬಾಣಸಿಗರನ್ನು ತಯಾರು ಮಾಡುವ ಒಂದು ವಿಧಾನ!


ಪ್ರಪಂಚವೇ ಅಂಗೈಗೆ ಬಂದಿರುವ ಈ ದಿನಗಳಲ್ಲಿ ತಿನ್ನುವುದು ಕೇವಲ ಹೊಟ್ಟೆ ತುಂಬುವುದಕ್ಕಾಗಿ ಎಂಬ ಆರ್ಷೇಯ ಆಲೋಚನೆ ಬದಲಾಗಿ, ಆಹಾರವನ್ನು ಆಸ್ವಾದಿಸುವುದಕ್ಕಾಗಿಯೇ ಪ್ರವಾಸ ಕೈಗೊಳ್ಳುವ ಅಭಿರುಚಿಯಾಗಿ ಬೆಳೆದಿದೆ. ಹೀಗಿರುವಾಗ, ಬಾಣಸಿಗ ಎನಿಸಿಕೊಳ್ಳುವುದು ಎಷ್ಟು ಗೌರವದ ವಿಷಯ ಎನ್ನುವುದು ನಿಮ್ಮ ಅರಿವಿಗೆ ಬಂದಿರುತ್ತದೆ. ಇಂತಹ ಸಂದರ್ಭದಲ್ಲಿ ನಮ್ಮ ಪಂಚೇಂದ್ರಿಯಗಳಿಗೂ ಗ್ರಾಸ ಒದಗಿಸಿ ನಮ್ಮ ಜೀವನಕ್ಕೆ ಸ್ವಾದ ತುಂಬುವ ಚೆಫ್‌ಗಳಿಗೆ ಅಭಿನಂದನೆ ಸಲ್ಲಿಸೋಣ. ಅನಿವಾರ್ಯವೋ ಅಗತ್ಯವೋ ಆಸೆಯೋ! ಒಟ್ಟಿನಲ್ಲಿ ಸೌಟು ಹಿಡಿದು ಅನ್ನಪೂರ್ಣೆಯರಾಗುವ ಸ್ತ್ರೀಯರಿಗೂ, ಪುರುಷ ಅನ್ನಪೂರ್ಣರಿಗೂ (ಪುರುಷ ಸರಸ್ವತಿ ಎನ್ನುತ್ತೇವಲ್ಲ ಹಾಗೆ!) ವಿಶ್ವ ಬಾಣಸಿಗರ ದಿನದ ಶುಭಾಶಯಗಳು.

ದೋಸ್ತಿ ಅಭ್ಯರ್ಥಿ ಸೋಲಿಸಲು ದೋಸ್ತಿಗಳೇ ನಿರ್ಧಾರ

ಚನ್ನಪಟ್ಟಣ ಉಪಚುನಾವಣೆ ಬಿಜೆಪಿ–ಜೆಡಿಎಸ್ ಮೈತ್ರಿ ಬಗ್ಗೆ ಹಿರಿಯ ಶಾಸಕ ತನ್ವೀರ್ ಸೇಟ್ ವ್ಯಂಗ್ಯ

ಮೈಸೂರು,ಅ.17(ಎಂಟಿವೈ)–ಚನ್ನಪಟ್ಟಣ ಉಪಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದಲ್ಲಿ ಟಿಕೆಟ್ ಗಿಟ್ಟಿಸಿಕೊಳ್ಳಲು ಉಭಯ ಪಕ್ಷಗಳ ನಾಯಕರು ಕಸರತ್ತು ನಡೆಸುತ್ತಿದ್ದು, ಯಾರಿಗೆ ಟಿಕೆಟ್ ಸಿಕ್ಕರೂ ಮೈತ್ರಿ ಪಕ್ಷಗಳ ಮುಖಂಡರೇ ಸೋಲಿಸಲು ಹವಣಿಸುತ್ತಿದ್ದಾರೆ ಎಂದು ಶಾಸಕ ತನ್ವೀರ್ ಸೇಠ್ ವ್ಯಂಗ್ಯವಾಡಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಸುತ್ತಿದ್ದಾರೆ. ಇದರಿಂದ ಮೈತ್ರಿ ಪಕ್ಷದಲ್ಲಿ ಬಿಕ್ಕಟ್ಟು ಉಂಟಾಗಿದೆ. ಒಬ್ಬರು ಕೈಯಲ್ಲಿ ಹಾರೆ ಹಿಡಿದಿದ್ದರೆ, ಮತ್ತೊಬ್ಬರು ಕೈಯಲ್ಲಿ ಗುದ್ದಲಿ ಹಿಡಿದು ನಿಂತಿದ್ದಾರೆ. ಯಾರಿಗೆ ಟಿಕೆಟ್ ಸಿಕ್ಕರೂ ಒಬ್ಬರು ಹಳ್ಳ ತೋಡುತ್ತಾರೆ. ಮತ್ತೊಬ್ಬರು ಮಣ್ಣು ಎಳೆಯುತ್ತಾರೆ. ಆ ಕಾರಣದಿಂದ ನಮ್ಮ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಷ್ಟ್ರ ರಾಜಕಾರಣವೇ ಬೇರೆ. ಚನ್ನಪಟ್ಟಣದ ಪರಿಸ್ಥಿತಿಯೇ ಬೇರೆ. ಉಪಚುನಾವಣೆಯಲ್ಲಿ ಚನ್ನಪಟ್ಟಣ ಬಹಳ ವಿಶೇಷವಾಗಿದೆ. ಶಿಗ್ಗಾವಿ, ಸಂಡೂರು ಒಂದು ರೀತಿಯಾದರೆ, ಚನ್ನಪಟ್ಟಣ ಅತ್ಯಂತ ಕುತೂಹಲ ಮೂಡಿಸಿದೆ. ಈಗಾಗಲೇ ಅಭ್ಯರ್ಥಿ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನ ಮಾಡಲಾಗಿದೆ. ಮೈತ್ರಿ ಅಭ್ಯರ್ಥಿ ಯಾರು, ಕಾಂಗ್ರೆಸ್‌ನಿಂದ ಯಾರು ಎಂಬುದು



ಪ್ರಶ್ನೆ. ಡಿಸಿಎಂ ನಾನೇ ಅಭ್ಯರ್ಥಿ ಅಂತ ಹೇಳಿದ್ದಾರೆ. ಆದಾಗ್ಯೂ ಪರಿಸ್ಥಿತಿಗೆ ಅನುಗುಣವಾಗಿ ಕಾಂಗ್ರೆಸ್ ಅಭ್ಯರ್ಥಿ ಹಾಕುವ ಕೆಲಸ ಮಾಡುತ್ತದೆ. ನಾಲ್ಕೈದು ದಿನದಲ್ಲಿ ಚನ್ನಪಟ್ಟಣ ಕಾಂಗ್ರೆಸ್ ಅಭ್ಯರ್ಥಿ ಘೋಷಣೆ ಆಗುತ್ತದೆ. ಡಿ.ಕೆ.ಸುರೇಶ್ ರಾಜಕೀಯವಾಗಿ ಮುಂದುವರಿಯಬೇಕಾದ ಅನಿವಾರ್ಯತೆ ಪಕ್ಷಕ್ಕೆ ಇದೆ. ಸಾಮಾಜಿಕ ನ್ಯಾಯದ ವಿಚಾರದಲ್ಲಿ ಶಿಗ್ಗಾವಿಯಲ್ಲಿ ಮುಸ್ಲಿಂ ಅಭ್ಯರ್ಥಿ ನಿಲ್ಲಿಸಿ ಎಂದು ಮನವಿ ಮಾಡಿದ್ದೇನೆ ಎಂದರು. ಬಿಜೆಪಿಯವರು ರಾಜಕಾರಣವನ್ನು ನೀಚ ಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಸರ್ಕಾರ ಕಾನೂನುಬದ್ಧವಾಗಿ ನಡೆದುಕೊಂಡಿದ್ದು, ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಒಂದು ಸಮುದಾಯವನ್ನು ಗುರಿಯಾಗಿ ಇಟ್ಟುಕೊಂಡು ಅಮಾಯಕರ ವಿರುದ್ಧ ಕೇಸ್ ಹಾಕಿತ್ತು. ಕೇವಲ ಒಂದು ಸಮುದಾಯದ ಹೆಸರು ಬಂದಾಗ ಬಿಜೆಪಿ ರಾಜಕೀಯ ಬೇಳೆ ಬೇಯಿಸಿ ಕೊಳ್ಳೋದು ತಪ್ಪು. ಹುಬ್ಬಳ್ಳಿ ಪ್ರಕರಣ ಮಾತ್ರವಲ್ಲ, ಇತರ ಪ್ರಕರಣಗಳ ಬಗ್ಗೆಯೂ ಮಾತಾಡಬೇಕಲ್ಲವೇ. ಕಾನೂನಾತ್ಮಕವಾಗಿ ನಾವು ನಡೆದುಕೊಂಡಿದ್ದು, ಆ ಕೇಸ್ ಈಗ ವಾಪಸ್ ಪಡೆದಿದ್ದೇವೆ. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ಮುಡಾ ಅಧ್ಯಕ್ಷ ಸ್ಥಾನಕ್ಕೆ ಕೆ.ಮರಿಗೌಡ ಆರೋಗ್ಯದ ಕಾರಣಕ್ಕೆ ರಾಜೀನಾಮೆ ಕೊಟ್ಟಿದ್ದೇನೆ ಎಂದಿದ್ದಾರೆ. ರಾಜೀನಾಮೆ ತನಿಖೆಗೆ ಒಳ್ಳೆಯದೇ. ಮರಿಗೌಡ ಸಿಎಂ ಆಪ್ತರು. ಪಾರದರ್ಶಕ ತನಿಖೆಗೆ ಸಹಕಾರಿ ಆಗಲಿ ಎಂದು ರಾಜೀನಾಮೆ ಕೊಟ್ಟಿದ್ದಾರೆ. ಮುಡಾದಿಂದ ಸಿಎಂಗೆ ಅಂಟಿರುವ ಕಳಂಕ ದೂರ ಆಗುತ್ತದೆ ಎಂದರು. 2021ರಲ್ಲಿ ಮುಡಾ ಸಭೆಗೆ ವಿರುದ್ಧವಾಗಿ 50:50 ಅನುಪಾತದಲ್ಲಿ ನಿವೇಶನ ಹಂಚಿಕೆ ತೀರ್ಮಾನ ಆಗಿದೆ. ಒಂದೇ ಸಭೆಯಲ್ಲಿ 50:50 ಅನುಪಾತದಡಿ 175 ಸೈಟ್ ಕೊಟ್ಟಿದ್ದಾರೆ. ಅದರಲ್ಲಿ ಸಿದ್ದರಾಮಯ್ಯ ಅವರ 14 ಸೈಟ್ ವಾಪಸ್ ಬಂದಿದೆ. ಉಳಿದ 161 ಸೈಟ್ ವಾಪಸ್ ಪಡೆಯಬೇಕು. ಎಲ್ಲ 175 ಸೈಟ್ ರದ್ದಾಗಬೇಕು. ಮುಡಾ ಸಭೆಯಲ್ಲಿ 50:50 ಅನುಪಾತದಲ್ಲಿ ಒಂದು ಸೈಟ್‌ಗೂ ಅನುಮೋದನೆ ಕೊಟ್ಟಿಲ್ಲ. ಅಕ್ರಮವಾಗಿ ಹಂಚಿಕೆಯಾಗಿರುವ ಎಲ್ಲಾ ನಿವೇಶನವನ್ನು ರದ್ದು ಮಾಡಬೇಕು ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವಾಲ್ಮೀಕಿ 'ರಾಮಾಯಣ' ಭಾರತೀಯರ ಜೀವನ ಸಂಸ್ಕೃತಿಯ ಪ್ರತಿಬಿಂಬ

ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ





ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಚಿತ್ರದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಎಂಎಲ್‌ಸಿ ಸಿ.ಎನ್.ಮಂಜೇಗೌಡ ಇನ್ನಿತರರಿದ್ದಾರೆ. ಎಡಚಿತ್ರದಲ್ಲಿ ಮೈಸೂರು ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದ ವಿವಿಧ ಜಾನಪದ ಕಲಾತಂಡಗಳೊಂದಿಗೆ ವಾಲ್ಮೀಕಿ ಭಾವಚಿತ್ರ ಹಾಗೂ ಪುತ್ಥಳಿಯನ್ನು ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರದವರೆಗೂ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಮೈಸೂರು, ಅ.17(ಎಂಟಿವೈ)– ರಾಮಾಯಣ, ಮಹಾಭಾರತ ಎಲ್ಲಾ ಕಾಲಘಟ್ಟಗಳಿಗೂ ಅನ್ವಯವಾಗುವ ಮಹಾಕಾವ್ಯಗಳು. ರಾಮಾಯಣವು ಭಾರತೀಯರ ಜೀವನ ಚರಿತ್ರೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮಹಾಕಾವ್ಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ಜಿಲ್ಲಾಡಳಿತ, ಜಿ.ಪಂ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗದ ಸಂಘಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಪ್ರತಿಮೆ ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ವಾಲ್ಮೀಕಿ ಕವಿಕುಲದ ಗುರುವಾಗಿ ಹಲವು ಕವಿ ಮತ್ತು ಸಾಹಿತಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಇಂದಿಗೂ ರಾಮಾಯಣ ಮಹಾಕಾವ್ಯವು ಜಗತ್ತಿನಲ್ಲಿ ಸತ್ವಯುತ ಮತ್ತು ಮೌಲ್ಯಯುತವಾದ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾಗಿದೆ ಎಂದು ತಿಳಿಸಿದರು.

ವಿಶ್ವದ ಎಲ್ಲಾ ದೇಶದಲ್ಲೂ ಮಹಾಕಾವ್ಯ ಸೃಷ್ಟಿಯಾಗಿಲ್ಲ. ಗ್ರೀಕ್, ರೋಮ್ ಹೊರತುಪಡಿಸಿದರೆ ನಮ್ಮ ದೇಶದಲ್ಲಿ ಮಾತ್ರ ಮಹಾಕಾವ್ಯಗಳು ರಚನೆಯಾಗಿವೆ. ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಕಟ್ಟಿಕೊಡುವ ದೃಷ್ಟಿಕೋನಗಳೇ ಬೇರೆ. ಈ ಮಹಾಕಾವ್ಯಗಳು ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿನಿಧಿಸುವ ಕೃತಿಗಳಾಗಿವೆ. ರಾಮಾಯಣದ ಪಾತ್ರಗಳು, ದೃಶ್ಯಗಳು ಇಂದಿಗೂ ನಮ್ಮನ್ನು ಕಾಡುತ್ತವೆ. ಮಹರ್ಷಿ ವಾಲ್ಮೀಕಿಯವರು ತಮ್ಮ ರಾಮಾಯಣ ಮಹಾಕಾವ್ಯದಲ್ಲಿ ಮನುಷ್ಯನ ಬದುಕಿನ ಎಲ್ಲಾ ಪರಿಪಾಲನೆಯನ್ನು ವಿಸ್ತಾರವಾಗಿ ತಿಳಿಸಿಕೊಟ್ಟಿದ್ದಾರೆ. ಪ್ರತಿಯೊಬ್ಬರ ಮನೆಯಲ್ಲಿಯೂ ರಾಮಾಯಣ ಇರಬೇಕು. ರಾಮಾಯಣದ ಒಟ್ಟಾರೆ ಸಾರಾಂಶವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಹಾಗೆಯೇ ಸಂವಿಧಾನ ಕೊಟ್ಟ ಎಲ್ಲಾ ಸೌಲಭ್ಯಗಳು ಎಸ್‌ಸಿ, ಎಸ್‌ಟಿ ಸಮುದಾಯದವರಿಗೆ ಸಿಗಬೇಕು ಎಂದರು.

ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗಾಗಿ ನಮ್ಮ ಸರ್ಕಾರ 9 ಸಾವಿರ ಕೋಟಿ ರೂ. ಮೀಸಲಿಟ್ಟಿದೆ. ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿ, ಶೋಷಿತ ಸಮಾಜವನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ನಮ್ಮ ಸಂವಿಧಾನವನ್ನು ಬಲಪಡಿಸುವಂತಹ ಕಾರ್ಯ ನಮ್ಮ ಸರ್ಕಾರದಲ್ಲಿ ಆಗುತ್ತಿದೆ ಎಂದರು.

ವಾಲ್ಮೀಕಿ ಅಮರಕವಿ: ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಬೇಡ ಕುಲಕ್ಕೆ ಸೇರಿದ ಮಹರ್ಷಿ ವಾಲ್ಮೀಕಿ ರಾಮಾಯಣ ಎಂಬ ಉತ್ಕೃಷ್ಟ ಮಹಾಕಾವ್ಯವನ್ನೇ ಬರೆದರು. ರಾಮನಾಮ ಉಚ್ಚಾರಣೆಯೇ ಬಾರದ ವಾಲ್ಮೀಕಿಯವರು ರಾಮಾಯಣವನ್ನೇ ರಚಿಸಿದರು. ರಾಮಾಯಣದಲ್ಲಿ 24,253 ಶ್ಲೋಕಗಳು, ಏಳು ಕಾಂಡಗಳಿರುವ ಈ ಕೃತಿಯು ಪ್ರಪಂಚಕ್ಕೆ ಅನ್ವಯವಾಗುತ್ತದೆ ಎಂದು ತಿಳಿಸಿದರು.

ಎಲ್ಲಿಯವರೆಗೆ ಭೂಮಿಯಲ್ಲಿ ಪರ್ವತ, ಸಮುದ್ರ, ನದಿಗಳಿರುತ್ತವೆಯೋ ಅಲ್ಲಿಯವರೆಗೂ ರಾಮಾಯಣ ಕಾವ್ಯ ಲೋಕದಲ್ಲಿ ಪ್ರಚಲಿತದಲ್ಲಿರುತ್ತದೆ. ಆದ್ದರಿಂದ ಸೂರ್ಯಚಂದ್ರರಿರುವವರೆಗೂ ರಾಮಾಯಣ ಮಹಾಕಾವ್ಯವು ಜಗತ್ತಿನಲ್ಲಿ ಅಮರಕಾವ್ಯವಾಗಿರುತ್ತದೆ. ಮತ್ತು ಇದನ್ನು ರಚಿಸಿರುವ ಮಹರ್ಷಿ ವಾಲ್ಮೀಕಿಯು ಅಮರ ಕವಿಯಾಗಿರುತ್ತಾರೆ ಎಂದು ಹೇಳಿದರು.

ವಾಲ್ಮೀಕಿ ಪ್ರತಿಮೆ ಸ್ಥಾಪನೆ: ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಈ ಬಾರಿ ಮೈಸೂರಿನಲ್ಲಿ ವಾಲ್ಮೀಕಿ ಪ್ರತಿಮೆ ಸ್ಥಾಪನೆಗೆ ಶಂಕುಸ್ಥಾಪನೆ ಮಾಡಿರುವುದು ನಮ್ಮ ಸೌಭಾಗ್ಯ. ನಮ್ಮ ಜೀವನದಲ್ಲಿ ಪ್ರತಿಯೊಬ್ಬರೂ ಪರೋಕ್ಷವಾಗಿ ವಾಲ್ಮೀಕಿಯವರ ತತ್ವಾದರ್ಶಗಳನ್ನು ಅನುಸರಿಸುತ್ತಿದ್ದೇವೆ. ವಾಲ್ಮೀಕಿಯವರು ನೀಡಿರುವ ರಾಮಾಯಣ ಮಹಾಕಾವ್ಯದ ಸಾರಾಂಶವನ್ನು ಪ್ರತಿಯೊಬ್ಬರೂ ತಿಳಿದುಕೊಂಡು ಅವರ ಸನ್ಮಾರ್ಗಗಳನ್ನು ಅನುಸರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಮಹರ್ಷಿ ವಾಲ್ಮೀಕಿ ಕುರಿತು ಮುಖ್ಯ ಭಾಷಣ ಮಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಮಹರ್ಷಿ ವಾಲ್ಮೀಕಿ ಸಮುದಾಯದ ವಿದ್ಯಾರ್ಥಿ ಕು.ಲಾವಣ್ಯ ಅವರಿಗೆ ಸರ್ಕಾರದಿಂದ ಒಂದು ಲಕ್ಷ ಪ್ರೋತ್ಸಾಹಧನದ ಚೆಕ್ ವಿತರಿಸಲಾಯಿತು. ಇದಕ್ಕೂ ಮುನ್ನ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮಹರ್ಷಿ ವಾಲ್ಮೀಕಿ ಭಾವಚಿತ್ರ ಹಾಗೂ ಪುತ್ಥಳಿಯನ್ನು ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರದವರೆಗೂ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿ.ಪಂ. ಸಿಇಒ ಕೆ.ಎಂ.ಗಾಯತ್ರಿ, ಎಸ್ಪಿ ವಿಷ್ಣುವರ್ಧನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅರುಣ್‌ಕುಮಾರ್, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಸಮನ್ವಯಧಿಕಾರಿ ಎಂ.ಕೆ.ಮಲ್ಲೇಶ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಮೈಸೂರು ಡಿಸಿ ಕಚೇರಿ ಮುಂದೆ 1.50 ಕೋಟಿ ವೆಚ್ಚದಲ್ಲಿ ವಾಲ್ಮೀಕಿ ಪ್ರತಿಮೆ ಸ್ಥಾಪನೆ

- ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪರಿಂದ ಶಂಕುಸ್ಥಾಪನೆ
- ಪರಿಶಿಷ್ಟ ಪಂಗಡ (ನಾಯಕ) ಸಮುದಾಯದ ಬಹುದಿನದ ಬೇಡಿಕೆ ಸದ್ಯವೇ ಸಾಕಾರ



ಮೈಸೂರಿನ ಸಿದ್ದಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶ್ರೀ ವಾಲ್ಮೀಕಿ ಮಹರ್ಷಿ ಪ್ರತಿಮೆ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಗುರುವಾರ ಶಂಕುಸ್ಥಾಪನೆ ನೆರವೇರಿಸಿದರು. ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಹರೀಶ್‌ಗೌಡ, ಸಿ.ಎನ್.ಮಂಜೇಗೌಡ ಇನ್ನಿತರರು ಉಪಸ್ಥಿತರಿದ್ದಾರೆ.

ಮೈಸೂರು, ಅ.17(ಎಂಟಿವೈ)– ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ 1.50 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶಂಕುಸ್ಥಾಪನೆ ನೆರವೇರಿಸಿದರು.

> **ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಷ್ಠಾಪಿಸಲು ಉದ್ದೇಶಿಸಿರುವ ಮಹರ್ಷಿ ವಾಲ್ಮೀಕಿ ಪ್ರತಿಮೆ ಐದು ಅಡಿ ಎತ್ತರವಿರುತ್ತದೆ. ಅರಳಿಮರದ ಕೆಳಗೆ ಕುಳಿತಿರುವ ಶೈಲಿಯಲ್ಲಿ ಪ್ರತಿಮೆ ಕೆತ್ತನೆ ರೂಪಿಸಲಾಗುತ್ತದೆ. ಅದಕ್ಕಾಗಿ ಸರ್ಕಾರ 1.50 ಕೋಟಿ ರೂ. ಬಿಡುಗಡೆ ಮಾಡಿದ್ದು, ಪ್ರತಿಮೆ ಯಾರಿಂದ ರೂಪಿಸಬೇಕು ಎಂಬುದನ್ನು ಇನ್ನು ನಿರ್ಧರಿಸಿಲ್ಲ.**

ಈ ವೇಳೆ ಮಾತನಾಡಿದ ಅವರು, ವಾಲ್ಮೀಕಿ ಪ್ರತಿಮೆಯನ್ನು ತಾಲೂಕು ಕಚೇರಿ ಮುಂದೆ ಸ್ಥಾಪಿಸುವಂತೆ ನಾಯಕ ಸಮುದಾಯ ಒತ್ತಾಯಿಸಿತ್ತು. ಆದರೆ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ತಾಲೂಕು ಕಚೇರಿ ಮುಂದೆ ನಿರ್ಮಿಸಲಾಗದು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಸ್ಥಾಪಿಸಲು ಉದ್ದೇಶಿಸಲಾಗಿದೆ. ಅದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮ್ಮತಿ ಸೂಚಿಸಿದ್ದು, ಇದಕ್ಕಾಗಿ 1.50 ಕೋಟಿ ರೂ.ಬಿಡುಗಡೆ ಮಾಡಿದ್ದಾರೆ. ಸಿದ್ಧರಾಮಯ್ಯ ಅವರಿಗೆ ದಲಿತರು, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಅಪಾರ ಕಾಳಜಿ ಇದೆ. ಪ್ರತಿ ವರ್ಷ ಜಯಂತಿ ಆಚರಿಸುವ ವೇಳೆ ನಾಯಕ ಸಮುದಾಯ ವಾಲ್ಮೀಕಿ ಪ್ರತಿಮೆ ವಿಚಾರ ಪ್ರಸ್ತಾಪಿಸಿ ಬೇಸರ ವ್ಯಕ್ತಪಡಿಸುತ್ತಿದ್ದರು. ಈಗ ಅದರ ಕೊರತೆಯನ್ನು ನೀಗಿಸಿದ್ದೇವೆ ಎಂದರು.

ಮಹರ್ಷಿ ವಾಲ್ಮೀಕಿ ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ. ಮನುಕುಲಕ್ಕೆ ಆದಿಕವಿ, ಮಾನವ ಕುಲಕ್ಕೆ ಆದರ್ಶಪ್ರಾಯವಾದ ಮಹಾಪುರುಷರು. ಅವರ ಚಿಂತನೆ, ಆದರ್ಶವನ್ನು ಇಂದಿನ ಯುವ ಪೀಳಿಗೆ ಪಾಲಿಸಬೇಕು. ತತ್ವ, ಸಿದ್ಧಾಂತ ಮತ್ತು ಮೌಲ್ಯದ ನಡುವೆ ನಾವೆಲ್ಲರೂ ಸಾಗಬೇಕು ಎನ್ನುವುದನ್ನು ತಮ್ಮ ಕಾವ್ಯದಲ್ಲಿ ಅರ್ಥಪೂರ್ಣವಾಗಿ ಹೇಳಿದ್ದಾರೆ. 4 ಲಕ್ಷದ 8,200 ಪುಟಗಳ ಎಂಟು ಅಧ್ಯಾಯ ಇರುವ ರಾಮಾಯಣ ಜಗತ್ತಿನಲ್ಲೇ ಮಹಾಗ್ರಂಥವಾಗಿದೆ. ರಾಮಾಯಣ ಪೂಜೆ ಮಾಡುವ ವಸ್ತುವಲ್ಲ. ಅದೊಂದು ಬದುಕಿನ ವಿಕಾಸ ಮತ್ತು ಬದಲಾವಣೆಗೆ ದಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಸಮುದಾಯ ಭವನ ನಿರ್ಮಾಣ: ಶಾಸಕ ತನ್ವೀರ್ ಸೇಠ್ ಮಾತನಾಡಿ, ಕ್ಯಾತಮಾರನಹಳ್ಳಿ ಬಡಾವಣೆಯ ಹುಲಿಯಮ್ಮನ ದೇವಾಲಯದ ಬಳಿ ಸಮುದಾಯ ಭವನ ನಿರ್ಮಿಸಲು ಉದ್ದೇಶಿಸಲಾಗಿದೆ. ನಾಯಕ ಸಮುದಾಯದ ಬಹುದಿನಗಳ ಕನಸು ನನಸಾಗಲಿದೆ. ರಾಜಕಾರಣ ಮತ್ತು ಅಧಿಕಾರ ಶಾಶ್ವತವಲ್ಲ. ಜನರ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವ ಕೆಲಸ ಮಾಡಿದ್ದೇವೆ. ನಮ್ಮ ಕ್ಷೇತ್ರದಲ್ಲಿ ನಾಯಕ ಸಮುದಾಯದವರು ಅತೀ ಹೆಚ್ಚು ಜನರಿದ್ದಾರೆ. ಹುಲಿಯಮ್ಮನ ದೇವಸ್ಥಾನ ಟ್ರಸ್ಟ್‌ಗೆ ಸೇರಿದ ಜಾಗದಲ್ಲಿ ಎರಡು ಎಕರೆಯಲ್ಲಿ ಸಮುದಾಯ ಭವನ ನಿರ್ಮಿಸಲಾಗುತ್ತಿದೆ. ಈ ಯೋಜನೆ ಮೂಲಕ ನಾಯಕ ಸಮುದಾಯಕ್ಕೆ ಏನಾದರೂ ಕೊಡುಗೆಗಳನ್ನು ನೀಡಲು ಸಾಧ್ಯ. ಸಾಮಾಜಿಕ ಬದ್ಧತೆಯಿಂದ ತೆಗೆದುಕೊಂಡ ಕೆಲಸಗಳನ್ನು ಪೂರ್ಣ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಅನಿಲ್ ಚಿಕ್ಕಮಾದು, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಯೋಜನಾಧಿಕಾರಿ ಮಲ್ಲೇಶ್, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಶಿವಕುಮಾರ್, ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಕರ್ನಾಟಕ ರಾಜ್ಯ ನಾಯಕ ಯುವಸೇನೆ ಅಧ್ಯಕ್ಷ ದೇವರಾಜ್ ಟಿ.ಕಾಟೂರ್, ಎಸ್ಪಿ ಎನ್.ವಿಷ್ಣುವರ್ಧನ್, ಮಾಜಿ ಉಪ ಮೇಯರ್ ಶಾಂತಕುಮಾರಿ ಮತ್ತಿತರರು ಹಾಜರಿದ್ದರು.

ಬಿಜೆಪಿ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



ಮೈಸೂರಿನ ಬಿ.ಜೆ.ಪಿ ಕಚೇರಿಯಲ್ಲಿ ಶ್ರೀ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ವಸಂತಕುಮಾರ್, ಬಿ.ಎಂ.ರಘು, ಡಿ.ಮಹೇಶ್‌ನಾಯಕ, ಮಂಜು, ಮೈಕೋ ರಾಜೇಶ್, ಕಿಶೋರ್, ಪ್ರದೀಪ್, ಭಾನುಪ್ರಕಾಶ್, ಜೋಗಿ ಮಂಜು, ಕೃಷ್ಣನಾಯಕ, ಸಿದ್ದರಾಜು ಮತ್ತಿತರರು ಉಪಸ್ಥಿತರಿದ್ದರು.

ಜೆಡಿಎಸ್ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು. ಜೆಡಿಎಸ್ ನಗರ ಅಧ್ಯಕ್ಷ ಕೆ.ಟಿ.ಚಲುವೇಗೌಡ, ಮಾಜಿ ಮಹಾಪೌರರಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ಭಾಗ್ಯಮ್ಮ, ಮುಖಂಡರಾದ ಎಚ್.ಕೆ. ರಾಮು, ನಗರ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್, ನಗರ ಮಹಿಳಾ ಅಧ್ಯಕ್ಷೆ ಪ್ರೇಮಾಶಂಕರೇಗೌಡ, ಮಹಿಳಾ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ನಗರ ಎಸ್‌ಟಿ ಮೋರ್ಚಾ ಅಧ್ಯಕ್ಷ ಮಧುವನ ಚಂದ್ರು, ನಗರ ಹಿಂದುಳಿದ ವರ್ಗದ ಅಧ್ಯಕ್ಷ ಕುಮಾರ್, ನಗರ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಪಿ.ಮಂಜುನಾಥ್, ನರಸಿಂಹರಾಜ ಬ್ಲಾಕ್ ಅಧ್ಯಕ್ಷ ರಿಜ್ವಾನ್, ನಗರ ಮಹಾ ಪ್ರಧಾನ ಕಾರ್ಯದರ್ಶಿ ಗಂಗಾಧರ್‌ಗೌಡ, ಶೇಖರ್, ಚಾಮರಾಜ ಮಹಿಳಾ ಅಧ್ಯಕ್ಷೆ ಲಕ್ಷ್ಮಿ, ಬಬಿತಾ, ಎಚ್.ಡಿ.ಕುಮಾರಸ್ವಾಮಿ ಅಭಿಮಾನಿ ಬಳಗದ ನಗರಾಧ್ಯಕ್ಷ ಆನಂದ್ ಇನ್ನಿತರರಿದ್ದರು.

ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ



ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ತಮ್ಮ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ ಆಚರಿಸಿದರು. ಈ ವೇಳೆ ಮುಖಂಡರಾದ ಜಿ.ಸೋಮಶೇಖರ್, ಶ್ರೀಧರ್, ವಿಜಯ್‌ಕುಮಾರ್, ಕೃಷ್ಣ, ರವಿಶಂಕರ್, ಜೋಗಿ ಮಹೇಶ್, ಮಂಜುನಾಥ್, ಶಂಕರ್, ವೀಣಾ, ಲೀಲಾ ಪಂಪಾಪತಿ, ಮಹ್ಮದ್ ಫಾರೂಕ್, ರವಿಶಂಕರ್, ವಿನಯ್‌ಕುಮಾರ್, ಮಹದೇವೇಗೌಡ, ವೆಂಕಟೇಶ್, ನಾಸೀರ್, ಕಲೀಂ ಷರೀಫ್, ಶಾದಿಖ್ ಉಲ್ಲಾ ರೆಹಮಾನ್, ಆರ್.ಹೆಚ್.ಕುಮಾರ್, ಹರೀಶ್, ಮಧುರಾಜ್, ಭಾಗ್ಯ ಚಂದ್ರಶೇಖರ್, ರಾಘವೇಂದ್ರ ಸಂತೋಷ್, ಅರುಣ್, ಗಂಗಾಧರ್, ಪುಟ್ಟಸ್ವಾಮಿ, ಚಿಕ್ಕಲಿಂಗು, ಮಹೇಶ್, ಧನಂಜಯ, ರಾಕೇಶ್, ರವೀಶ್ ಮತ್ತಿತರರಿದ್ದರು.

ಮಹರ್ಷಿ ವಾಲ್ಮೀಕಿ ಜಯಂತಿ



ಮೈಸೂರಿನ ಚಾಮರಾಜಪುರಂನಲ್ಲಿ ಅಹಿಂದ ಸಂಘಟನೆ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಮುಖಂಡರಾದ ನಜರ್‌ಬಾದ್ ನಟರಾಜ್, ರಾಘವೇಂದ್ರ, ವರುಣ ಮಹದೇವ್, ಎಸ್.ಎನ್.ರಾಜೇಶ್, ರವಿಚಂದ್ರ, ಹಡಜನ ಕನಕಮೂರ್ತಿ, ಮಂಜುನಾಥ್, ಶಫಿ, ಮಹದೇವ್, ಸಾಲುಂಡಿ ಮಹದೇವ್, ಚಂದ್ರು, ಕೋಟೆಹುಂಡಿ ಶಿವಪ್ಪ, ಪ್ರಕಾಶ್, ರಾಮಚಂದ್ರು ಇನ್ನಿತರರು ಹಾಜರಿದ್ದರು.

ತಿರುಮಕೂಡಲಿನಲ್ಲಿ ವಾಲ್ಮೀಕಿ ಜಯಂತಿ



ವರುಣ ವಿಧಾನಸಭಾ ಕ್ಷೇತ್ರದ ಹೊಸ ತಿರುಮಕೂಡಲಿನಲ್ಲಿ ವಾಲ್ಮೀಕಿ ಪುರುಷರ ಸ್ವಸಹಾಯ ಸಂಘದ ವತಿಯಿಂದ ಸಿಹಿ ಹಂಚುವ ಮೂಲಕ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಬೈರಾಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ವಾಲ್ಮೀಕಿ ಸಂಘದ ನಿರ್ದೇಶಕರಾದ ಮಹದೇವ, ಮಧು, ಶೇಖರ್, ಚಂದ್ರಶೇಖರ್, ಪುಟ್ಟಮಾದು, ಮಲ್ಲಿಕಾ, ನಾಗಣ್ಣ, ಮಹದೇವ್ ಮತ್ತಿತರರಿದ್ದಾರೆ.

ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆಯಿಂದ ವಾಲ್ಮೀಕಿ ಜಯಂತಿ; ಸಾಧಕರಿಗೆ ಸನ್ಮಾನ



ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ವತಿಯಿಂದ ಮೈಸೂರು ವಿವಿ ಸಂಜೆ ಕಾಲೇಜು ಎದುರು ಗುರುವಾರ ನಡೆದ ವಾಲ್ಮೀಕಿ ಜಯಂತಿಯಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಅ. 17– ನಾವು ಈಗಲೂ ಪ್ರಸ್ತಾಪಿಸುವ ರಾಮರಾಜ್ಯ ಪರಿಕಲ್ಪನೆಗೆ ಮಹರ್ಷಿ ವಾಲ್ಮೀಕಿ ರಚಿಸಿರುವ ರಾಮಾಯಣ ಮಹಾಕಾವ್ಯ ಕಾರಣ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಹೇಳಿದರು.

ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ವತಿಯಿಂದ ವಿವಿ ಸಂಜೆ ಕಾಲೇಜು ಎದುರು ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೇಟೆಗಾರನಾಗಿದ್ದ ವಾಲ್ಮೀಕಿ ನಂತರ ಮನಃಪರಿವರ್ತನೆ ಮಾಡಿಕೊಂಡು ಈ ಮಹಾಕಾವ್ಯ ರಚಿಸುವ ಮೂಲಕ ಭಾರತೀಯ ಸಂಸ್ಕೃತಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಇವತ್ತಿಗೂ ರಾಮರಾಜ್ಯದ ಬಗ್ಗೆ ಮಾತನಾಡುತ್ತಿದ್ದೇವೆ ಎಂದರೆ ಇದಕ್ಕೆ ರಾಮಾಯಣ ಕಾರಣ ಎಂದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ವಾಲ್ಮೀಕಿಯವರು ಕೇವಲ ರಾಮಾಯಣ ರಚಿಸಲಿಲ್ಲ. ಈ ಮಹಾಗ್ರಂಥದಲ್ಲಿ ಒಂದು ಪಾತ್ರವಾಗಿಯೂ ಇದ್ದಾರೆ. ತಮ್ಮ ಆವಾಸಸ್ಥಾನದಲ್ಲಿಯೇ ಸೀತೆಗೆ ಆಶ್ರಯ ನೀಡಿದ್ದಲ್ಲದೇ, ಅವರಿಬ್ಬರ ಮಕ್ಕಳಿಗೆ ಲವ–ಕುಶ ಎಂದು ನಾಮಕರಣ ಮಾಡಿದವರು ಎಂದರು.

ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ಮಾತನಾಡಿ, ವಾಲ್ಮೀಕಿ ಅವರ ರಾಮಾಯಣ ಆಧರಿಸಿ ಬರೆದ ಕೃತಿಗಳಿಗೆ ಕನ್ನಡ ಹಾಗೂ ತೆಲುಗಿನಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಅಷ್ಟೊಂದು ಅದ್ಭುತವಾದ ಶಕ್ತಿ ಈ ಮಹಾಕಾವ್ಯಕ್ಕೆ ಇದೆ. ಇವತ್ತು ಕೂಡ ರಾಮಾಯಣ ಹಾಗೂ ಮಹಾಭಾರತ ದೇಶದ ಶ್ರೇಷ್ಠ ಗ್ರಂಥಗಳಾಗಿವೆ ಎಂದರು.

ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಕೆ.ಸಿ.ಮಹದೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈವಿವಿ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್. ಮಹದೇವಮೂರ್ತಿ, ಯುವರಾಜ ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಎಂ.ಕೆ. ಮಹೇಶ್, ಮಾನಸ ಗಂಗೋತ್ರಿ ಸಮಾಜ ಕಾರ್ಯ ವಿಭಾಗದ ಪ್ರಾಧ್ಯಾಪಕಿ ಡಾ.ಜ್ಯೋತಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್.ಸಪ್ನಾ, ವೇದಿಕೆಯ ಅಧ್ಯಕ್ಷ ಆರ್.ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಸಹ ಕಾರ್ಯದರ್ಶಿ ಯೋಗೇಶ್, ಸಂಚಾಲಕ ವಿವೇಕ್, ಖಜಾಂಚಿ ಗಣೇಶ್, ನಿರ್ದೇಶಕರಾದ ಡಾ.ನವೀನ್‌ಕುಮಾರ್, ಚಿದಾನಂದ, ಲೋಕೇಶ್, ಅಭಿಷೇಕ್, ರಿಷಿರಾಜ್, ಮಂಜುನಾಥ್, ಯೋಗೇಶ್ ಇದ್ದರು.

ರೈಲ್ವೆ ಕಾರ್ಯಾಗಾರದಲ್ಲಿ ವಾಲ್ಮೀಕಿ ಜಯಂತಿ



ಮೈಸೂರು ಕೇಂದ್ರೀಯ ರೈಲ್ವೆ ಕಾರ್ಯಾಗಾರದಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ,ಅ.17– ಹೊಸಹಳ್ಳಿ ಫೀಡರ್‌ನಲ್ಲಿ ತುರ್ತು ಕಾರ್ಯನಿರ್ವಹಣೆ ಕೆಲಸ ಹಮ್ಮಿಕೊಂಡಿರುವುದರಿಂದ ಅ.19 ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ನಗರದ ಕೆಲವೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ನಗರ ಪ್ರದೇಶಗಳಾದ ಸುಭಾಷ್‌ನಗರ, ಅಶೋಕನಗರ, ವಿದ್ಯಾನಗರ, ವಿ.ವಿ. ರೋಡ್, ಹೊಸಹಳ್ಳಿ, ವಿನಾಯಕ ಬಡಾವಣೆ, ನೂರು ಅಡಿ ರೋಡ್, ನೆಹರುನಗರ, ಹಾಲಹಳ್ಳಿ, ಹೌಸಿಂಗ್ ಬೋರ್ಡ್ 1 & 2ನೇ ಹಂತ, ದ್ವಾರಕನಗರ, ಗಾಂಧಿನಗರ, NGO'S layout, ಶ್ರೀರಾಮನಗರ, ಕಾವೇರಿ ನಗರ 1&2 ನೇ ಹಂತ, ಚಂದ್ರ ದರ್ಶನ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ ಎರಡನೇ ಹಂತ, ಶಂಕರನಗರ, ಕ್ಯಾತುಂಗೆರೆ ಬಡಾವಣೆ, ಶಂಕರಪ್ಪ ಬಡಾವಣೆ, ವಿಮ್ಸ್ ಆಸ್ಪತ್ರೆ ಹಾಗೂ ಗ್ರಾಮಾಂತರ ಪ್ರದೇಶಗಳಾದ ಕಾರಸವಾಡಿ, ಮಂಗಲ, ಹನಿಯಂಬಾಡಿ, ಚೀರನಹಳ್ಳಿ, ಹೆಬ್ಬಕವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಬೇವಿನಹಳ್ಳಿ, ಹುಲ್ಲುಕೆರೆ, ಎ. ಹುಲಿಕೆರೆ, ಪಿ.ಹುಲಿಕೆರೆ. ಮತ್ತು ಐ.ಪಿ ಮಾರ್ಗಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಅಭಿಯಂತರರ ಪ್ರಕಟಣೆ ತಿಳಿಸಿದೆ.

ವಾಲ್ಮೀಕಿಯಂತೆ ಜ್ಞಾನ ಭಂಡಾರ ಬೆಳೆಸಿಕೊಳ್ಳಬೇಕು


ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮಂಡ್ಯ: ಮಹರ್ಷಿ ವಾಲ್ಮೀಕಿಯು ಬಹಳ ಜ್ಞಾನ ಭಂಡಾರವನ್ನು ಹೊಂದಿ ಮಹಾ ಗ್ರಂಥ ರಾಮಾಯಣವನ್ನು ರಚಿಸಿದ್ದಾರೆ. ಆದ್ದರಿಂದ ಜೀವನದಲ್ಲಿ ಪ್ರತಿಯೊಬ್ಬರ ಮಕ್ಕಳು ಸಹ ವಾಲ್ಮೀಕಿಯಂತಹ ಜ್ಞಾನ ಭಂಡಾರವನ್ನು ಬೆಳೆಸಿಕೊಳ್ಳಬೇಕು ಎಂದು ಶಾಸಕ ರವಿಕುಮಾರ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಚೇರಿ ಕಾವೇರಿ ಸಭಾಂಗಣದಲ್ಲಿ ನಡೆದ ಮಂಡ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ವಾಲ್ಮೀಕಿ ಎಂದಾಕ್ಷಣ ನಮ್ಮೆಲ್ಲ ನೆನಪಾಗುವುದೇ ರಾಮಾಯಣ ಕಾವ್ಯ. ವಾಲ್ಮೀಕಿ ಯಾವುದೇ ಗುರುಕುಲಕ್ಕೆ ಹೋಗಿ ಗುರುಗಳಿಂದ ಪಾಠ ಕಲಿತವರಲ್ಲ. ಏಕೆಂದರೆ ಹಿಂದಿನ ಕಾಲದಲ್ಲಿ ಶೂದ್ರರಿಗೆ ಯಾವುದೇ ವೈದಿಕರು ವಿದ್ಯೆ ನೀಡುತ್ತಿರಲಿಲ್ಲ. ಶೂದ್ರರಾಗಿ ಹುಟ್ಟಿದ ವಾಲ್ಮೀಕಿ ಅವರು ಯಾವುದೇ ಗುರುವಿನ ಸಹಾಯ ಪಡೆಯದೆ ರಾಮಾಯಣವೆಂಬ ಮಹಾಗ್ರಂಥವನ್ನು ರಚಿಸಿ ಕೀರ್ತಿ ಮಹರ್ಷಿ ವಾಲ್ಮೀಕಿ ಅವರದ್ದಾಗಿದೆ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಭರತ ಖಂಡಕ್ಕೆ ರಾಮಾಯಣವೆಂಬ ಗ್ರಂಥವನ್ನು ಪರಿಚಯಿಸಿದ ಮಹರ್ಷಿ ವಾಲ್ಮೀಕಿ ಅವರ ವ್ಯಕ್ತಿತ್ವದಲ್ಲಿ ಅಡಗಿರುವ ಮೌಲ್ಯಗಳನ್ನು ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ತಮ್ಮ ಮಕ್ಕಳಿಗೂ ತಿಳಿಸಬೇಕು ಎಂದು ಅವರು ತಿಳಿಸಿದರು.

ಪ್ರಪಂಚದ ಮೊದಲ ಮಹಾಕಾವ್ಯ ರಾಮಾಯಣ ಎಂಬ ಮಾತಿದ್ದು, ರಾಮಾಯಣವನ್ನು ರಚಿಸಿದ ವಾಲ್ಮೀಕಿಯವರನ್ನು ಆದಿಕವಿ, ಮೊದಲ ಕವಿ ಎಂದು ಕರೆಯಲಾಗುತ್ತದೆ. ರಾಮಾಯಣ ಮಹಾಕಾವ್ಯವು ಸುಮಾರು 24,000 ಶ್ಲೋಕಗಳನ್ನು ಒಳಗೊಂಡಿದ್ದು, ಈ ಮಹಾಕಾವ್ಯದ ನೆಲೆಗಟ್ಟನ್ನು ದೇಶದ ಎಲ್ಲಾ ಭಾಷೆಯಲ್ಲಿಯೂ ರಾಮಾಯಣ ಕಾವ್ಯವು ರಚಿತವಾಗಲು ಮಹರ್ಷಿ ವಾಲ್ಮೀಕಿ ಅವರು ಕಾರಣರಾಗಿದ್ದಾರೆ. ಕುವೆಂಪು ಹಾಗೂ ಪಂಪ ಕವಿಗಳು ಸೇರಿದಂತೆ ಇನ್ನಿತರೆ ಕವಿಗಳು ರಾಮಾಯಣವನ್ನು ಬರೆಯಲು ವಾಲ್ಮೀಕಿಯ ಸಂಸ್ಕೃತ ಭಾಷೆಯ ರಾಮಾಯಣ ಮೂಲಾಧಾರವಾಗಿದೆ ಎಂದರು.

ಅಂದಿನ ಕಾಲದಲ್ಲಿ ಶೂದ್ರ ಜನಾಂಗದಲ್ಲಿ ಹುಟ್ಟಿದ ವಾಲ್ಮೀಕಿಯು ಇಡೀ ವಿಶ್ವದ ಜನ ಮನ ಗೆಲ್ಲುವಂತಹ ಮಹಾಕಾವ್ಯವನ್ನು ರಚಿಸಿರುವುದು ಅವರ ಸಾಧನೆಯಾಗಿದೆ. ವಾಲ್ಮೀಕಿಯು ರತ್ನಾಕರರಾಗಿ ಹುಟ್ಟಿ ಮಹರ್ಷಿ ವಾಲ್ಮೀಕಿಯಾಗಿ ವಿಶ್ವವನ್ನು ಗೆದ್ದಿದ್ದಾರೆ ಎಂದರು.

ಕುವೆಂಪುರವರು ವಾಲ್ಮೀಕಿ ಮಹರ್ಷಿ ಅವರನ್ನು ಕುರಿತು ಭರತ ಖಂಡದಲ್ಲಿ ವಾಲ್ಮೀಕಿಯವರು ಜನಿಸಿರುವುದು ಒಂದು ಭಾಗ್ಯವಾಗಿದೆ ಎಂದಿದ್ದಾರೆ. ಕಾಳಿದಾಸ ಕವಿಯು ಕವಿಗಳ ಕವಿ ಯಾರೆಂದರೆ ಅದು ವಾಲ್ಮೀಕಿ ಮಹರ್ಷಿಯವರು ಎಂದು ಹೇಳಿರುವುದು ವಾಲ್ಮೀಕಿಯವರಿಗೆ ಮತ್ತಷ್ಟು ಗೌರವ ತಂದು ಕೊಡುತ್ತದೆ. ಆದ್ದರಿಂದ ನಾವೆಲ್ಲರೂ ಕೂಡ ಕೇವಲ ಒಂದು ದಿನಕ್ಕೆ ಮಹರ್ಷಿ ವಾಲ್ಮೀಕಿಯವರನ್ನು ಸೀಮಿತಗೊಳಿಸದೆ ಅವರನ್ನು ಪ್ರತಿನಿತ್ಯವೂ ನೆನೆಯುವ ಕೆಲಸವಾಗಬೇಕು ಎಂದರು.

ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸಿಫ್ ಮಾತನಾಡಿದರು. ಪ್ರಸ್ತುತ ಜಗತ್ತಿನಲ್ಲಿ ನಂಬಿಕೆಯ ಕೊರತೆ ಇದೆ. ಜೀವನದಲ್ಲಿ ನಂಬಿಕೆ ಎಂಬುದು ಬಹಳ ಮುಖ್ಯವಾದದ್ದು. ರಾಮಾಯಣದಲ್ಲಿ ಬರುವ ಸೀತೆಯು ರಾಮನ ಮೇಲೆ ಇಟ್ಟಿದ್ದ ನಂಬಿಕೆ, ಗುರುಗಳು ಲವಕುಶರ ಮೇಲೆ ಇಟ್ಟಿದ್ದಂತಹ ನಂಬಿಕೆಯು ನಮ್ಮ ಮಧ್ಯೆ ಇರಬೇಕು ಎಂದು ತಿಳಿಸಿದರು.

ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು




ಭಾರತೀನಗರ.ಅ.17– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಇಲ್ಲಿಗೆ ಸಮೀಪದ ಮೆಳ್ಳಹಳ್ಳಿ ಬಳಿ ಸಂಭವಿಸಿದೆ.

ಬಿದರ ಹೊಸಹಳ್ಳಿ ಗ್ರಾಮದ ಶಂಕರೇಗೌಡ ಮಧುಸೂದನ್(32) ಮೃತ ದುರ್ದೈವಿ.

ಈತ ಶ್ರೀಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ಹಾಗಾಗಿ ಕೆ.ಎಂ.ದೊಡ್ಡಿಯಲ್ಲಿ ಮನೆ ಮಾಡಿಕೊಂಡಿದ್ದ. ಕೆಲಸ ಮುಗಿಸಿಕೊಂಡು ಕೆಎಂ.ದೊಡ್ಡಿಗೆ ಬರುತ್ತಿದ್ದಾಗ ಯಾವುದೋ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಮೆಳ್ಳಹಳ್ಳಿ ಬಳಿ ಇರುವ ಸೇತುವೆ ಬಳಿ ಬಿದ್ದಿದ್ದಾನೆ. ತಕ್ಷಣ ಅಕ್ಕಪಕ್ಕದವರು ಈತನನ್ನು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ತರಲು ಪ್ರಯತ್ನಿಸಿದ್ದಾರೆ. ಅಷ್ಟರಲ್ಲಾಗಲೇ ಮೃತ ಪಟ್ಟಿದ್ದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಕೆ.ಎಂ. ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ.

ಮಂಡ್ಯ ಟು ಇಂಡಿಯಾ; ಇಂದಿನಿಂದ, ಉದ್ಯೋಗ ಮೇಳ



ಮಂಡ್ಯ: ಕೇಂದ್ರದ ಭಾರೀ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವರು ಹಾಗೂ ಕ್ಷೇತ್ರದ ಸಂಸದರೂ ಆಗಿರುವ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ನಗರದಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದ್ದು, ಸುಮಾರು 150ಕ್ಕೂ ಹೆಚ್ಚು ಉದ್ಯೋಗದಾತ ಕಂಪನಿಗಳು ಭಾಗಿಯಾಗಲಿವೆ.

ಈ ಬಗ್ಗೆ ಸ್ವತಃ ಕೇಂದ್ರ ಸಚಿವ ಕುಮಾರಸ್ವಾಮಿ ಮಾಹಿತಿ ನೀಡಿದ್ದು, ದೇಶದ ಉದ್ದಗಲಕ್ಕೂ ಇರುವ 150ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಉದ್ಯೋಗ ಮೇಳಕ್ಕೆ ಬರಲಿದ್ದು, ಈ ಭಾಗದ ಮೂರು ಸಾವಿರಕ್ಕೂ ಹೆಚ್ಚು ನಿರುದ್ಯೋಗಿ ಯುವ ಜನರಿಗೆ ಉದ್ಯೋಗ ಕೊಡಿಸುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದ್ದಾರೆ.


ಮಂಡ್ಯ ಟು ಇಂಡಿಯಾ ಎನ್ನುವ ಘೋಷವಾಕ್ಯದೊಂದಿಗೆ ಉದ್ಯೋಗ ಮೇಳ ನಡೆಯುತ್ತಿದ್ದು, ಮಂಡ್ಯದ ಇತಿಹಾಸದಲ್ಲಿಯೇ ಇದೊಂದು ಮೈಲುಗಲ್ಲು ಆಗಲಿದೆ. ರೈತಾಪಿ ಜನರ ಮಕ್ಕಳಿಗೆ ಉದ್ಯೋಗ ಕಲ್ಪಿಸಬೇಕು ಎನ್ನುವುದು ನನ್ನ ಮಹದಾಸೆ ಆಗಿದ್ದು, ಈ ಮೂಲಕ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಮೇಕಾನ್, ಭಾರತೀಯ ಉಕ್ಕು ಪ್ರಾಧಿಕಾರ (SAIL), ರಾಷ್ಟ್ರೀಯ ಖನಿಜಾಭಿವೃದ್ಧಿ ನಿಗಮ (NMDC), ಲೈಲೋಡ್ಸ್ ಮೆಟಲ್ಸ್, ಭಾರತ್ ಹೆವಿ ಎಲೆಕ್ಟ್ರಿಕಲ್ (BHEL), ಜಿಂದಾಲ್ ಸ್ಟೀಲ್ ಸೇರಿದಂತೆ 150ಕ್ಕೂ ಪ್ರತಿಷ್ಠಿತ ಕಂಪನಿಗಳು ಉದ್ಯೋಗ ಮೇಳದಲ್ಲಿ ನೇರ ನೇಮಕಾತಿ ಮಾಡಿಕೊಳ್ಳುತ್ತಿವೆ.

ನಾಳೆ ಹಾಗೂ ನಾಡಿದ್ದು (ಅಕ್ಟೋಬರ್ 18–19) ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಉದ್ಯೋಗ ಮೇಳ ನಡೆಯಲಿದೆ. ಆಸಕ್ತ ಯುವ ಜನರು ಉದ್ಯೋಗ ಮೇಳದಲ್ಲಿ ಪಾಲ್ಗೊಂಡು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಚಿವರು ಮನವಿ ಮಾಡಿದ್ದಾರೆ.

ನಿತ್ಯವೂ ನೂರಾರು ಜನರು ನನ್ನ ಮನೆಯ ಬಳಿಗೆ ಬಂದಾಗ ನನ್ನ ಕೈಲಾದ ಸಹಾಯ ಮಾಡಿದ್ದೇನೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಮೇಲುಕೋಟೆಯಲ್ಲಿ ಸರಣಿ ಕಳ್ಳತನ





ಮೇಲುಕೋಟೆ, ಅ.17–ಪಟ್ಟಣದಲ್ಲಿ ಒಂದೇ ರಾತ್ರಿಯಲ್ಲಿ ಆರು ಮನೆಗಳಲ್ಲಿ ಸರಣಿಗಳ್ಳತನ ನಡೆದಿದ್ದು, ನಿವಾಸಿಗಳು ಆತಂಕಗೊಂಡಿದ್ದಾರೆ.

ಮೇಲುಕೋಟೆ ಒಕ್ಕಲಿಗರ ಬೀದಿಯಲ್ಲಿ ಬೀಗ ಹಾಕಿರುವ ಮನೆಗಳನ್ನೇ ಟಾರ್ಗೆಟ್ ಮಾಡಿರುವ ಕಳ್ಳರು ರಾತ್ರಿ ವೇಳೆ ಮುಂಬಾಗಿಲಿನ ಬೀಗ ಒಡೆದು ಒಳನುಗ್ಗಿ, ಮನೆಯ ಬೀರುಗಳನ್ನು ಜಜ್ಜಿ ಚಿನ್ನಾಭರಣ ಮತ್ತು ನಗದು ದೋಚಿದ್ದಾರೆ. ಮನೆಗಳ ಲಾಕರ್‌ನಲ್ಲಿದ್ದ ಚಿನ್ನಾಭರಣ, ದಾಖಲೆಗಳನ್ನು ಚೀಲದಲ್ಲಿ ತುಂಬಿಕೊಂಡು ಹೋಗಿ ಪಾಳು ಮನೆಯೊಂದರ ಬಳಿ ಪರಿಶೀಲಿಸಿರುವ ಕಳ್ಳರು ಬೆಲೆಬಾಳುವ ವಸ್ತುಗಳನ್ನು ದೋಚಿ ದಾಖಲೆಗಳನ್ನು ಬಿಸಾಕಿಹೋಗಿದ್ದಾರೆ ಎನ್ನಲಾಗಿದೆ.

ಮೇಲುಕೋಟೆಯ ಒಕ್ಕಲಿಗರ ಬೀದಿ ರೈತಭವನದ ಪಕ್ಕದ ಲೇ ತಮ್ಮಣ್ಣೇಗೌಡರ ಪತ್ನಿ ಕೆಂಪಮ್ಮ, ನಂಜುಂಡೇಗೌಡರ ಮಗ ಈರೇಗೌಡ, ಲೀಲಾವತಿ, ಸವಿತಾ ಸಮಾಜದ ಬೀದಿಯ ಮರಿಯಮ್ಮ, ಮೂಡಲಬಾಗಿಲು ರುಕ್ಮಿಣಿ, ಬಸವರಾಜು ಅವರ ಮನೆಗಳಲ್ಲಿ ಸರಣಿ ಕಳ್ಳತನವಾಗಿದೆ.

ಕೆಂಪಮ್ಮ ಅವರ ಮನೆಯಲ್ಲಿ ಕುರಿ ಮಾರಿ ಇಟ್ಟ ನಗದು 35 ಸಾವಿರ, ಒಂದು ಚಿನ್ನದ ಉಂಗುರ ಹಾಗೂ ಸಣ್ಣಪುಟ್ಟ ಆಭರಣಗಳು, ಮೂಡಲಬಾಗಿಲ ರುಕ್ಮಿಣಿಯ ಮನೆಯಲ್ಲಿ 10 ಸಾವಿರ ನಗದು ಹಾಗೂ 20 ಸಾವಿರ ಮೌಲ್ಯದ ಬೆಳ್ಳಿ ಸಾಮಗ್ರಿಗಳು ಕಳುವಾಗಿವೆ ಎಂದು ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರಿನಲ್ಲಿ ತಿಳಿಸಲಾಗಿದೆ.

ಮೇಲುಕೋಟೆಯಲ್ಲಿ ಪೊಲೀಸ್ ಬೀಟ್ ಹೆಚ್ಚಿಸಿ ಕಳ್ಳತನ ಪ್ರಕರಣ ನಡೆಯದಂತೆ ತಡೆಯಲು ಸಾರ್ವಜನಿಕರು ಕೋರಿದ್ದಾರೆ. ಚೆಲುವನಾರಾಯಣಸ್ವಾಮಿ ಮತ್ತು ಯೋಗ ನರಸಿಂಹಸ್ವಾಮಿ ದೇವಾಲಯಗಳಿಗೂ ರಾತ್ರಿಯ ವೇಳೆ ಹೆಚ್ಚಿನ ಭದ್ರತೆ ನೀಡಬೇಕೆಂದೂ ಒತ್ತಾಯಿಸಿದ್ದಾರೆ.

ಇ-ಸ್ಕಾಲರ್‌ಶಿಪ್ ಯೋಜನೆಯಡಿ ಅರ್ಜಿ ಆಹ್ವಾನ

ಮಂಡ್ಯ,ಅ.17– ಸಾಮಾಜಿಕ ನ್ಯಾಯ ಸಚಿವಾಲಯ ಮತ್ತು ವಿಕಲಾಂಗ ವ್ಯಕ್ತಿಗಳ ಸಬಲೀಕರಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ನ್ಯಾಷನಲ್ ಇ–ಸ್ಕಾಲರ್‌ಶಿಪ್ ಯೋಜನೆಯಡಿ ವಿಕಲಚೇತನ ವಿದ್ಯಾರ್ಥಿಗಳು ಸ್ಕಾಲರ್‌ಶಿಪ್ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿಕಲಚೇತನ ಪ್ರೀ ಮೆಟ್ರಿಕ್, ಪೋಸ್ಟ್ ಮೆಟ್ರಿಕ್ ಹಾಗೂ ಟಾಪ್ ಕ್ಲಾಸ್ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನಾಂಕವಾಗಿದ್ದು, ಆನ್‌ಲೈನ್ ವೆಬ್‌ಸೈಟ್ https://scholarship.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿಕಲಚೇತನರ ವಿದ್ಯಾರ್ಥಿಗಳು NSP (National Scholarship Portal) ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಎಲ್ಲಾ ಶಾಲಾ ಕಾಲೇಜುಗಳ ಮುಖ್ಯಸ್ಥರುಗಳನ್ನು ಸಂಪರ್ಕಿಸುವುದು ಎಂದು ಮಂಡ್ಯ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್‌ನಲ್ಲಿ ಕಾವೇರಿ ಮಾತೆಯ ವೈಭವದ ಉತ್ಸವ, ರಥೋತ್ಸವ



ಶ್ರೀರಂಗಪಟ್ಟಣ, ಅ.17– ತಾಲೂಕಿನ ಕೆಆರ್‌ಎಸ್‌ನಲ್ಲಿ ಗುರುವಾರ ಶ್ರೀಕಾವೇರಿ ಮಾತೆಯ ಉತ್ಸವ ಮತ್ತು ರಥೋತ್ಸವ ವೈಭವದಿಂದ ನಡೆಯಿತು. ಅಣೆಕಟ್ಟೆಯ ದಕ್ಷಿಣ ದ್ವಾರದಲ್ಲಿ ಕಾವೇರಿ ನೀರಾವರಿ ನಿಗಮದ ಸಿಬ್ಬಂದಿ ಪೂಜೆ ಸಲ್ಲಿಸುವ ಮೂಲಕ ಶ್ರೀ ಕಾವೇರಿ ಮಾತೆಯ ಉತ್ಸವ ಮೂರ್ತಿಯನ್ನು ಬರಮಾಡಿದರು.

ಬೃಂದಾವನದಲ್ಲಿರುವ ಶ್ರೀ ಕಾವೇರಿ ಮಾತೆಗೆ ಪಂಚಾಮೃತ ಅಭಿಷೇಕ ಸಲ್ಲಿಸಿ ವಿವಿಧ ಹೂಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು. ನಂಜನಗೂಡಿನ ಪುರೋಹಿತರಾದ ನಂಜುಂಡಸ್ವಾಮಿ ನೇತೃತ್ವದಲ್ಲಿ ನವಗ್ರಹ ಮತ್ತು ಗಣಪತಿ, ಕಾವೇರಿ ಹೋಮ–ಹವನ ನಡೆಯಿತು. ಪೂರ್ಣಾಹುತಿ, ಮಹಾಮಂಗಳಾರತಿ ನಂತರ ಮೀನ ಲಗ್ನದಲ್ಲಿ ಶ್ರೀ ಕಾವೇರಿ ಮಾತೆಯ ಉತ್ಸವ ಮೂರ್ತಿಯನ್ನು ರಥದಲ್ಲಿರಿಸಿ ಶ್ರೀ ಕಾವೇರಿ ಮಾತಾ ಪ್ರತಿಮೆ ಮುಂಭಾಗದ ಕಾರಂಜಿಯ ಸುತ್ತ ಮೂರು ಬಾರಿ ಪ್ರದಕ್ಷಿಣೆ ಮಾಡಿಸಲಾಯಿತು.

ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಜಯಂತ್, ಸಹಾಯಕ ಕಾರ್ಯಪಾಲಕ ಅಭಿಯಂತರ ಕಿಶೋರ್ ಕುಮಾರ್, ಲೋಹಿತ್, ಕೆ.ಆರ್.ಸಾಗರ ಕಾ.ನೀ.ನಿಗಮದ ಇಂಜಿನಿಯರ್‌ಗಳಾದ ಲೋಹಿತ್, ಅಭಿಲಾಷ್, ಅಕಿಬ್ ಜಾವಿದ್ ಕೆ.ಆರ್.ಸಾಗರ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಪ್ಪ, ಖಜಾಂಚಿ ನಾಗೇಶ್, ಕಾವೇರಿ ನೀರಾವರಿ ನಿಗಮದ ಅಭಿಯಂತರರು, ಸಿಬ್ಬಂದಿಗಳು, ಕೆ.ಆರ್.ಸಾಗರ ಗ್ರಾ.ಪಂ ಸದಸ್ಯರು, ಗ್ರಾಮಸ್ಥರು, ವಿವಿಧ ಇಲಾಖೆಯ ಸಿಬ್ಬಂದಿಗಳು, ಇತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

'ತೀರ್ಥ ಸ್ವರೂಪಿಣಿ' ಕಾವೇರಿ ದರ್ಶನ

ವಿವಿಧ ಪೂಜಾ ವಿಧಿಗಳನ್ನು ನೆರವೇರಿಸಿದರು. ಮಂತ್ರ ಘೋಷಗಳೊಂದಿಗೆ ಕಾವೇರಿ ಮಾತೆಗೆ ಮಹಾ ಆರತಿ ಸಲ್ಲಿಸಿದರು. ತೀರ್ಥೋದ್ಭವ ಸಂದರ್ಭ ಪವಿತ್ರ ಕುಂಡಿಕೆಯಿಂದ ತೀರ್ಥ ಹೊರ ತೆಗೆದು ಮೊದಲಿಗೆ ಭಾಗಮಂಡಲದ ಶ್ರೀ ಭಗಂಡೇಶ್ವರನ ಸನ್ನಿಧಿಗೆ ಕೊಂಡೊಯ್ಯಲಾಯಿತು. ಇದೇ ವೇಳೆ ಅರ್ಚಕ ವೃಂದ ಸುತ್ತಲೂ ನೆರೆದಿದ್ದ ಭಕ್ತರ ಮೇಲೂ ತೀರ್ಥ ಪ್ರೋಕ್ಷಣೆ ಮಾದರು.

ಭಕ್ತರ ನೂಕುನುಗ್ಗಲು ತಡೆಯಲು ಪವಿತ್ರ ಕೊಳ ಮತ್ತು ಕುಂಡಿಕೆಯ ಸುತ್ತಲೂ ಬಿದಿರು ಮತ್ತು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಅಲ್ಲದೆ, ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭದ್ರತಾ ಕ್ರಮ ಕೈಗೊಳ್ಳಲಾಗಿತ್ತು. ತೀರ್ಥೋದ್ಭವಕ್ಕೆ ಕ್ಷಣಗಣನೆ ಆರಂಭವಾಗುತ್ತಿದ್ದಂತೆಯೇ ಪವಿತ್ರ ಕೊಳದ ಸುತ್ತಲೂ ಭಕ್ತರ ಸಂಖ್ಯೆ ಏರ ತೊಡಗಿತು. ಇನ್ನೇನು ತೀರ್ಥೋದ್ಭವ ಸನ್ನಿಹಿತವಾಗುತ್ತಿದ್ದಂತೆಯೇ ಏಕಾಏಕಿ ಭಕ್ತ ಸಮೂಹ ಪವಿತ್ರ ಕೊಳಕ್ಕೆ ಧುಮುಕುವ ಮೂಲಕ ಕಾವೇರಿ ಮಾತೆಗೆ ಭಕ್ತಿ ಪ್ರದರ್ಶಿಸಿದರು. ಬಳಿಕ ಬಿಂದಿಗೆಗಳಲ್ಲಿ ತೀರ್ಥ ತುಂಬಿಕೊಂಡರು. ಜಿಲ್ಲೆ ಸೇರಿದಂತೆ ಮೈಸೂರು, ಮಂಡ್ಯ, ಮದ್ದೂರು, ಬೆಂಗಳೂರು, ನೆರೆಯ ಕೇರಳ, ತಮಿಳುನಾಡು ಸೇರಿದಂತೆ ವಿವಿಧೆಡೆಗಳಿಂದ ಸಹಸ್ರಾರು ಭಕ್ತರು ಪವಿತ್ರ ಕ್ಷೇತ್ರಕ್ಕೆ ಆಗಮಿಸಿದ್ದರು. ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಪಿಂಡ ಪ್ರದಾನ, ಕೇಶ ಮುಂಡನ ಮತ್ತಿತರ ಸಾಂಪ್ರದಾಯಿಕ ಪೂಜಾ ವಿಧಿವಿಧಾನಗಳು ನಡೆದವು. ಭಾಗಮಂಡಲದಿಂದ ತಲಕಾವೇರಿಗೆ ಕೆಎಸ್‌ಆರ್‌ಟಿಸಿ ಬಸ್ ಸೇವೆ ಒದಗಿಸಲಾಗಿತ್ತು. ತಲಕಾವೇರಿಯಲ್ಲಿ ಕೊಡಗು ಏಕೀಕರಣ ರಂಗದ ವತಿಯಿಂದ ಎಲ್ಲಾ ಭಕ್ತರಿಗೂ ಬೆಳಗಿನ ಉಪಹಾರ, ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ತೀರ್ಥೋದ್ಭವವನ್ನು ಭಕ್ತರು ವೀಕ್ಷಿಸಲು ಅನುಕೂಲವಾಗುವಂತೆ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಿ ಅದರ ನೇರ ಪ್ರಸಾರ ಮಾಡಲಾಗಿತ್ತು.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕ ಡಾ.ಮಂತರ್‌ಗೌಡ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಭಾಗಮಂಡಲ ತಕ್ಕ ಮುಖ್ಯಸ್ಥ ಬಳ್ಳಡ್ಕ ಅಪ್ಪಾಜಿ, ತಲಕಾವೇರಿ ತಕ್ಕ ಮುಖ್ಯಸ್ಥ ಕೋಡಿ ಮೋಟಯ್ಯ, ಕಿರಿಕೊಡ್ಲಿ ಮಠದ ಶ್ರೀ ಸದಾಶಿವಸ್ವಾಮೀಜಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಭಾಗಮಂಡಲ ದೇವಾಲಯ ವ್ಯವಸ್ಥಾಪನ ಸಮಿತಿ ಇಓ ಚಂದ್ರಶೇಖರ್, ಮತ್ತಿತರ ಗಣ್ಯರು ತೀರ್ಥೋದ್ಭವ ಪವಿತ್ರ ಕ್ಷಣಕ್ಕೆ ಸಾಕ್ಷಿಯಾದರು.

ಹಲವು ರಾಜ್ಯಗಳ ರಾಜ್ಯಪಾಲರ ಬದಲಾವಣೆ

ಗೋವಾ ಗವರ್ನರ್ ಪಿಎಸ್ ಶ್ರೀಧರನ್ ಪಿಳ್ಳೈ ಮತ್ತು ಜುಲೈ 15, 2021 ರಿಂದ ಅಧಿಕಾರದಲ್ಲಿರುವ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಮೂರು ವರ್ಷಗಳಿಗೂ ಹೆಚ್ಚು ಅವಧಿಯನ್ನು ಪೂರ್ಣಗೊಳಿಸಿದ್ದಾರೆ. ಮಧ್ಯಪ್ರದೇಶದ ರಾಜ್ಯಪಾಲ ಮಂಗುಭಾಯ್ ಸಿ ಪಟೇಲ್ ಉತ್ತರಾಖಂಡದ ರಾಜ್ಯಪಾಲ ಗುರ್ಮಿತ್ ಸಿಂಗ್ ಅವರ ಬದಲಾವಣೆ ಸಾಧ್ಯತೆಯಿದೆ. ಉತ್ತರ ಪ್ರದೇಶದ ಗವರ್ನರ್ ಆನಂದಿಬೆನ್ ಪಟೇಲ್ ಕೂಡ ಐದು ವರ್ಷಗಳನ್ನು ಪೂರೈಸಿದ್ದಾರೆ. ತಮಿಳುನಾಡಿನ ಆರ್.ಎನ್.ರವಿ ಮತ್ತು ಗೋವಾದ ಪಿ.ಎಸ್.ಶ್ರೀಧರನ್ ಪಿಳ್ಳೈ ಕೂಡ ಮೂರು ವರ್ಷಗಳ ಕಾಲ ಅವಧಿ ಪೂರೈಸಿದ್ದಾರೆ ಜಮ್ಮು ಮತ್ತು ಕಾಶ್ಮೀರ ಮತ್ತು ಹರಿಯಾಣದಲ್ಲಿ ಹೊಸ ಸರ್ಕಾರಗಳ ರಚನೆಯ ನಂತರ ಇಲ್ಲವೇ ಮಹಾರಾಷ್ಟ್ರ ಮತ್ತು ಜಾರ್ಖಂಡ್‌ನಲ್ಲಿ ವಿಧಾನಸಭಾ ಚುನಾವಣೆಯ ನಂತರ ಪುನರ್ರಚನೆ ನಡೆಯಬಹುದು ಎಂದು ಮೂಲಗಳು ತಿಳಿಸಿವೆ. ಲೋಕಸಭೆ ಚುನಾವಣೆಗೆ ಸ್ಪರ್ಧಿಸದ ಬಿಜೆಪಿಯ ಹಿರಿಯ ನಾಯಕರನ್ನು ಗವರ್ನರ್ ಅಥವಾ ಲೆಫ್ಟಿನೆಂಟ್ ಗವರ್ನರ್ ಸ್ಥಾನಗಳಿಗೆ ಪರಿಗಣಿಸುವ ಸಾಧ್ಯತೆಯೂ ಇದೆ. ಮಾಜಿ ಸಂಸದರಾದ ಅಶ್ವಿನಿ ಚೌಬೆ, ವಿಕೆ ಸಿಂಗ್ ಮತ್ತು ಮುಖ್ತಾರ್ ಅಬ್ಬಾಸ್ ನಖ್ವಿ ಅವರ ಹೆಸರುಗಳೂ ಕೇಳಿಬರುತ್ತಿವೆ.

ವಿಸರ್ಜನೆಗೆ ಸರ್ಕಾರದ ಚಿಂತನೆ

ಮುಡಾ ಅಧ್ಯಕ್ಷ ಜವಾಬ್ದಾರಿ ನಿರ್ವಹಿಸಲಿದ್ದಾರೆ. ಈ ಸಂಬಂಧ ನಾಳೆ(ಅ.18) ಸರ್ಕಾರ ಅಧಿಸೂಚನೆ ಹೊರಡಿಸುವ ಸಾಧ್ಯತೆ ಇದೆ. ನಿರ್ಗಮಿತ ಅಧ್ಯಕ್ಷ ಕೆ.ಮರೀಗೌಡರನ್ನು ಹೊರತುಪಡಿಸಿದರೆ ಪ್ರಸ್ತುತ ಮುಡಾ ಮಂಡಳಿಯಲ್ಲಿ ಶಾಸಕರಾದ ಸಿದ್ದರಾಮಯ್ಯ, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಎಹೆಚ್.ವಿಶ್ವನಾಥ್, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು.ಜಿ.ಮಾದೇಗೌಡ, ದಿನೇಶ್ ಗೂಳಿಗೌಡ ಸದಸ್ಯರಾಗಿದ್ದಾರೆ.

ಹೋಬಳಿಗೊಂದು ವಸತಿ ಶಾಲೆ

ಅನುಗುಣವಾಗಿ ಆಯವ್ಯಯದಲ್ಲಿ ಹಣ ಮೀಸಲಿಟ್ಟ ಮೊದಲ ಸರ್ಕಾರ ನಮ್ಮದು, ತಳಹಂತದ ಸಮುದಾಯಗಳಿಗೆ ವಸತಿ ಶಾಲೆಗಳನ್ನು ಆರಂಭಿಸಿದ್ದು ನಾವು. ಪರಿಶಿಷ್ಟ ಜಾತಿಯ ಎಲ್ಲಾ ವಸತಿ ಶಾಲೆ ಹಾಗೂ ರಾಯಚೂರು ವಿಶ್ವವಿದ್ಯಾಲಯಕ್ಕೆ ಮಹರ್ಷಿ ವಾಲ್ಮೀಕಿ ಹೆಸರು ಇಡಲಾಗುವುದು. ಶಾಕುಂತಲಾ ನಾಟಕ ಬರೆದ ಕಾಳಿದಾಸ ಕುರುಬ ಸಮುದಾಯದವರು, ಮಹಾಭಾರತ ಬರೆದ ವ್ಯಾಸರು ಬೆಸ್ತ ಸಮುದಾಯದವರು, ರಾಮಾಯಣ ಬರೆದ ಮಹರ್ಷಿ ವಾಲ್ಮೀಕಿ ಸಮುದಾಯದವರು, ದರೋಡೆ ಮಾಡಿಕೊಂಡು ಓಡಾಡುತ್ತಿದ್ದ ವಾಲ್ಮೀಕಿ ರಾಮಾಯಣ ಬರೆಯಲು ಸಾಧ್ಯವಾ ಎಂದು ಕತೆ ಕಟ್ಟಿ ಸುಳ್ಳು ಹೇಳಿದರು. ತಳಹಂತದ ಸಮುದಾಯಗಳು, ಶೂದ್ರರು ಶಿಕ್ಷಣ, ಸಂಸ್ಕೃತ ಕಲಿಯುವುದು ನಿಷಿದ್ಧವಾಗಿತ್ತು, ಆದರೆ, ಸಂಸ್ಕೃತ ಕಲಿತು ಶ್ಲೋಕಗಳ ಮೂಲಕ ವಾಲ್ಮೀಕಿ ಜಗತ್ಪ್ರಸಿದ್ಧ ರಾಮಾಯಣ ಮಹಾಕಾವ್ಯ ಬರೆದಿದ್ದು ಹೆಮ್ಮೆಯ ಸಂಗತಿ. ಶಿಕ್ಷಣ ಕಲಿಯುವ ಅವಕಾಶ ಸಿಕ್ಕಾಗ ಇವರೆಲ್ಲಾ ಕಲಿತರು, ಬರೆದರು, ಜಗತ್ತಿಗೇ ಪ್ರೇರಣೆಯಾದರು, ಸಮಪಾಲು, ಸಮಬಾಳು, ಸಮಾನ ಅವಕಾಶಗಳ ಬಗ್ಗೆ ವಾಲ್ಮೀಕಿ ಹೇಳಿದ್ದರು, ರಾಮಾಯಣದ ರಾಮರಾಜ್ಯ ಅಂದರೆ ಸಮಪಾಲಿನ, ಸಮಾನ ಅವಕಾಶಗಳ ರಾಜ್ಯ ಎಂದರ್ಥ ಎಂದರು.

ಸ್ಥಳ ಇನ್ನು ನಿರ್ಧರಿಸಿಲ್ಲ

ಪ್ರಗತಿಯಲ್ಲಿದೆ. ಸಿದ್ದರಾಮಯ್ಯ ಹಾಗೂ ಪಾರ್ವತಿ ಅವರಿಗೆ ನಾಳೆಯೇ ಸಮನ್ಸ್ ನೀಡಬಹುದು ಇಲ್ಲವೇ 20 ದಿನ ಕಳೆದು ನೀಡಬಹುದು. ಈ ಬಗ್ಗೆ ಖಚಿತವಾಗಿ ಈಗಲೇ ಏನನ್ನು ಹೇಳಲು ಸಾಧ್ಯವಿಲ್ಲ ಎಂದರು.

ಮುಡಾ ಹಗರಣದಲ್ಲಿ ಎ1 ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎ2 ಆರೋಪಿ ಬಿ.ಎಂ.ಪಾರ್ವತಿ ಅವರನ್ನು ಲೋಕಾಯುಕ್ತರು ಸದ್ಯಕ್ಕೆ ವಿಚಾರಣೆ ಮಾಡುವುದು ಅನುಮಾನವಾಗಿದೆ. ಹಾಗಾಗಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ಅವರಿಗೆ ಸದ್ಯಕ್ಕೆ ರಿಲೀಫ್ ಸಿಕ್ಕಿದೆ. ಲೋಕಾಯುಕ್ತ ಅಧಿಕಾರಿಗಳಿಗೆ ದಾಖಲಾತಿ ಸಂಗ್ರಹ ದೊಡ್ಡ ತಲೆ ನೋವಾಗಿದ್ದು, ತನಿಖೆಗೆ ಅವಶ್ಯವಿರುವ ದಾಖಲಾತಿಗಳು ಲಭ್ಯವಾಗುತ್ತಿಲ್ಲ.

ತನಿಖಾ ವರದಿಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಬೇಕಿರುವ ಕಾರಣ ಲೋಕಾಯುಕ್ತರು ತನಿಖೆಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಆದರೆ ಕೆಲವು ಅಗತ್ಯ ದಾಖಲಾತಿಗಳು ಇಲ್ಲದಿರುವಾಗ ತನಿಖಾ ವರದಿ ಅಪೂರ್ಣವಾಗುತ್ತದೆ. ಇದರಿಂದ ಅಗತ್ಯವಿರುವ ದಾಖಲಾತಿಗಳನ್ನು ಸಂಗ್ರಹಿಸುವುದು ಲೋಕಾಯುಕ್ತ ಅಧಿಕಾರಿಗಳಿಗೆ ದೊಡ್ಡ ಸವಾಲಾಗಿದೆ. ಈ ನಿಟ್ಟಿನಲ್ಲಿ ಮುಡಾ, ಕಂದಾಯ ಇಲಾಖೆ, ಸರ್ವೆ ಇಲಾಖೆ, ಭೂ ದಾಖಲೆ ಇಲಾಖೆ, ಸಬ್ ರಿಜಿಸ್ಟಾರ್ ಕಚೇರಿ ಸೇರಿದಂತೆ ಇತರೆಡೆಯಿಂದ ದಾಖಲಾತಿ ಸಂಗ್ರಹಿಸುವಲ್ಲಿ ಮಗ್ನರಾಗಿದ್ದಾರೆ. ಒಂದು ವೇಳೆ ಕೆಲವು ದಾಖಲಾತಿ ಸಿಗದಿದ್ದರೆ ಮುಂದೇನು ಮಾಡುವುದು ಎಂಬ ಚಿಂತೆ ಲೋಕಾಯುಕ್ತರನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಅವರಿಗೆ ಸಮನ್ಸ್ ನೀಡದೇ ಇರಲು ಅಧಿಕಾರಿಗಳು ತೀರ್ಮಾನಿಸಿದ್ದಾರೆ.

ಮೊದಲು ಎಲ್ಲಾ ದಾಖಲಾತಿಗಳನ್ನು ಕ್ರೂಢೀಕರಿಸಿ ಎಲ್ಲವೂ ಪಕ್ಕಾ ಆದ ನಂತರ ಎ1 ಮತ್ತು ಎ2 ಆರೋಪಿಗಳನ್ನು ವಿಚಾರಣೆ ಮಾಡಲು ತೀರ್ಮಾನ ಮಾಡಿದ್ದಾರೆ.

ಒಟ್ಟಾರೆ ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿ ಈಗ ಚಟುವಟಿಕೆಯ ಕೇಂದ್ರವಾಗಿದೆ. ಲೋಕಾಯುಕ್ತ ಎಸ್ಪಿ ಉದೇಶ್ ಸೇರಿದಂತೆ ಎಲ್ಲಾ ಸಿಬ್ಬಂದಿ ಬೆಳಿಗ್ಗೆಯಿಂದ ರಾತ್ರಿ ತನಕ ಕಚೇರಿಯಲ್ಲೇ ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿದ್ದಾರೆ.

ಚನ್ನಪಟ್ಟಣ ಜೆಡಿಎಸ್‌ಗೆ ಬಿಡೋಣ

ಬಸವರಾಜ ಬೊಮ್ಮಾಯಿ, ಆರ್.ಅಶೋಕ್‌ಗೆ ಯಡಿಯೂರಪ್ಪ ಕಿವಿಮಾತು



ಬೆಂಗಳೂರು, ಅ.17(ಕೆಎಂಶಿ)– ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಪರ ನಿಲ್ಲುವುದು ಬೇಡ, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಡೋಣ ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರಿಗೆ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಇಂದಿಲ್ಲಿ ಕಿವಿಮಾತು ಹೇಳಿದ್ದಾರೆ.

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ನಾವು ಮತ್ತು ಜೆಡಿಎಸ್ ಪ್ರತಿಷ್ಠೆಯಾಗಿ ತೆಗೆದುಕೊಂಡು ಹೋರಾಟ ಮಾಡೋಣ, ಒಗ್ಗಟ್ಟಿನಿಂದ ಕೆಲಸ ಮಾಡಿ ಎಲ್ಲಾ ಕ್ಷೇತ್ರಗಳನ್ನೂ ನಮ್ಮದಾಗಿಸಿಕೊಳ್ಳೋಣ ಎಂದಿದ್ದಾರೆ. ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕ ಆರ್.ಅಶೋಕ್, ಬಸವರಾಜ ಬೊಮ್ಮಾಯಿ ಸೇರಿದಂತೆ ರಾಜ್ಯ ನಾಯಕರು, ಚನ್ನಪಟ್ಟಣದಿಂದ ಯೋಗೇಶ್ವರ್ ಅವರಿಗೆ ಟಿಕೆಟ್ ನೀಡಬೇಕು, ಜೆಡಿಎಸ್‌ಗೆ ಬಿಟ್ಟುಕೊಡುವುದು ಬೇಡ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಮನವಿ ಮಾಡಿದ್ದರು. ಈ ಬೆಳವಣಿಗೆ ನಂತರ ಅಶೋಕ್ ಮತ್ತು ಬೊಮ್ಮಾಯಿ ಅವರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಸಮಾಲೋಚನೆ ನಡೆಸಿ ಯೋಗೇಶ್ವರ್ ಪರ ನಿಂತಿದ್ದರು.

ಚುನಾವಣಾ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆ ಯಡಿಯೂರಪ್ಪ ಅವರು, ಅಶೋಕ್ ಮತ್ತು ಬೊಮ್ಮಾಯಿ ಅವರನ್ನು ಪ್ರತ್ಯೇಕವಾಗಿ ಕರೆಸಿಕೊಂಡು, ಬಿಜೆಪಿ ಮತ್ತು ಜೆಡಿಎಸ್ ಮತ್ತಷ್ಟು ಬಲವಾಗಿ ಒಂದುಗೂಡಬೇಕು, ಅವರ ಕ್ಷೇತ್ರದಲ್ಲಿ ನಮ್ಮ ಹಸ್ತಕ್ಷೇಪ ಬೇಡ ಎಂದ ನಂತರ ತಮ್ಮ ನಿಲುವು ಬದಲಾಯಿಸಿದ್ದಾರೆ. ಇಂದು ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, ಅವರು ನಮ್ಮ ಹಿರಿಯ ನಾಯಕರು, ಸಹಜವಾಗಿ ಭೇಟಿ ಮಾಡುತ್ತೇವೆ, ಚುನಾವಣೆ ಬಗ್ಗೆ ಬಂದು ಮಾತನಾಡು ಎಂದಿದ್ದರು, ಮಾತಾಡಿದ್ದೇನೆ. ಶಿಗ್ಗಾಂವಿ ಕ್ಷೇತ್ರದ ಬಗ್ಗೆಯೂ ಚರ್ಚೆ ನಡೆಯಿತು ಎಂದರು.

ಚುನಾವಣೆ ತಯಾರಿ ಸಿದ್ಧತೆ ಬಗ್ಗೆ ಹೇಳಿದ್ದೇನೆ. ಅಭ್ಯರ್ಥಿ ಆಯ್ಕೆ ಬಗ್ಗೆಯೂ ಚರ್ಚೆ ಆಗಿದೆ, ಅಂತಿಮವಾಗಿ ಯಾರಿಗೇ ಟಿಕೆಟ್ ಕೊಟ್ಟರೂ ಗೆಲ್ಲಿಸಬೇಕು ಎಂಬ ತೀರ್ಮಾನ ಆಗಿದೆ. ದೆಹಲಿಗೆ ಅಕ್ಟೋಬರ್ 19ರ ನಂತರ ತೆರಳಲಿದ್ದು ಎಲ್ಲ ಮೂರು ಕ್ಷೇತ್ರಗಳಲ್ಲೂ ಗೆಲ್ಲುವುದಕ್ಕೆ ಪ್ರಯತ್ನ ಮಾಡೋಣ ಎಂದಿದ್ದಾರೆ. ಚನ್ನಪಟ್ಟಣ ಟಿಕೆಟ್ ಕುರಿತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿ ಹೈಕಮಾಂಡ್ ತೀರ್ಮಾನ ಮಾಡುತ್ತಾರೆ ಎಂದರು.

ಡಾ.ಕೆ.ಲೀಲಾಪ್ರಕಾಶ್ ಪ್ರವಚನ ಕಾರ್ಯಕ್ರಮ

ಮೈಸೂರು, ಅ. 17– ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಮತ್ತು ಉತ್ತಿಷ್ಠ ಭಾರತ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಅ. 19 ರಂದು ಸಂಜೆ 5 ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯ ಸಾಹಿತ್ಯ ಕಟ್ಟೆಯಲ್ಲಿ ಆದಿಗುರು ಶ್ರೀ ಶಂಕರಾಚಾರ್ಯರ ಮೋಹ ಮುದ್ಗರ ಕುರಿತು ಸಂಸ್ಕೃತ ವಿದುಷಿ ಡಾ. ಕೆ. ಲೀಲಾಪ್ರಕಾಶ್ ಅವರಿಂದ ಪ್ರವಚನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಉದ್ಘಾಟಿಸುವರು. ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು ಪ್ರಾಂಶುಪಾಲ ಪಿ. ಸತ್ಯನಾರಾಯಣ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್ ಭಾಗವಹಿಸುವರು. ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಸಂಚಾಲಕ ಸಿ.ಎನ್. ಕೇಶವಪ್ರಕಾಶ್, ಉತ್ತಿಷ್ಠ ಭಾರತ ಪ್ರತಿಷ್ಠಾನ ಕಾರ್ಯದರ್ಶಿ ಎಂ.ವಿ. ನಾಗೇಂದ್ರಬಾಬು ಮತ್ತು ಸಂಚಾಲಕ ಎನ್. ಅನಂತ ಉಪಸ್ಥಿತರಿರುವರು.

ಸುಸ್ಥಿರ ಸಮಾಜ ನಿರ್ಮಾಣಕ್ಕೆ ಉತ್ಪನ್ನ–ಸೇವೆಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು ಅಗತ್ಯ

ವಿಶ್ವ ಗುಣಮಟ್ಟ ದಿನಾಚರಣೆಯಲ್ಲಿ ಉದ್ಯಮಿ ಎಂ.ಜಿ.ಬೈಂದೂರ್ ಅಭಿಮತ

ಮೈಸೂರು,ಅ.17(ಪಿಎಂ)– ನ್ಯಾಯೋಚಿತ ಮತ್ತು ಹೆಚ್ಚು ಸುಸ್ಥಿರ ಸಮಾಜ ನಿರ್ಮಿಸಲು ಉತ್ಪನ್ನ ಮತ್ತು ಸೇವೆಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು ಅಗತ್ಯ ಎಂದು ಮೈಸೂರಿನ ಮುಹೋರ್‌ಪಿ ಸೈಂಟಿಫಿಕ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಎಂ.ಜಿ.ಬೈಂದೂರ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಗುರುವಾರ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ 'ವಿಶ್ವ ಗುಣಮಟ್ಟ ದಿನಾಚರಣೆ'ಯಲ್ಲಿ ಅವರು ಮಾತನಾಡಿದರು.

ವಿಶ್ವ ಗುಣಮಟ್ಟದ ದಿನವು ಉತ್ಪನ್ನ ಮತ್ತು ಸೇವೆಗಳಲ್ಲಿ ಪ್ರಮಾಣೀಕೃತ ಮೌಲ್ಯದ ಬಗ್ಗೆ ನೀತಿ ನಿರೂಪಕರು, ಉದ್ಯಮಿಗಳು ಹಾಗೂ ಗ್ರಾಹಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಲಿದೆ. ವಿಶ್ವ ಗುಣಮಟ್ಟದ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 14ರಂದು ಆಚರಿಸಲಾಗುತ್ತದೆ. ಆ ಮೂಲಕ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಕ್ರಮಗಳನ್ನು ವಿನ್ಯಾಸಗೊಳಿಸಿದ ವೃತ್ತಿಪರರ ಕಾರ್ಯಕ್ಕೆ ಗೌರವ ಸೂಚಿಸಲಾಗುತ್ತಿದೆ ಎಂದು ತಿಳಿಸಿದರು. ಇಂಟರ್‌ನ್ಯಾಷನಲ್ ಇಲೆಕ್ಟ್ರೋಟೆಕ್ನಿಕಲ್ ಕಮಿಷನ್ (ಐಇಸಿ), ಇಂಟರ್‌ನ್ಯಾಷನಲ್ ಆರ್ಗನೈಸೇಷನ್ ಫಾರ್ ಸ್ಟ್ಯಾಂಡರ್ಡೈಸೇಷನ್ (ಐಎಸ್‌ಓ), ಇಂಟರ್‌ನ್ಯಾಷನಲ್ ಟೆಲಿಕಮ್ಯುನಿಕೇಷನ್ ಯೂನಿಯನ್ (ಐಟಿಯು),


ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಗುರುವಾರ ಉದ್ಯಮಿ ಎಂ.ಜಿ.ಬೈಂದೂರ್ ವಿಶ್ವ ಗುಣಮಟ್ಟ ದಿನಾಚರಣೆ ಕುರಿತು ಮಾತನಾಡಿದರು.

ಇನ್ಸ್ಟಿಟ್ಯೂಟ್ ಆಫ್ ಇಲೆಕ್ಟ್ರಿಕಲ್ ಅಂಡ್ ಇಲೆಕ್ಟ್ರಾನಿಕ್ಸ್ ಎಂಜಿನಿಯರ್ಸ್ (ಐಇಇಇ) ಮತ್ತು ಇಂಟರ್‌ನೆಟ್ ಎಂಜಿನಿಯರ್ ಟಾಸ್ಕ್ ಫೋರ್ಸ್ (ಐಇಟಿಎಫ್) ಸೇರಿದಂತೆ ಮೊದಲಾದ ಸಂಘಟನೆಗಳ ಮೂಲಕ ತಜ್ಞರು ಗುಣಮಟ್ಟದ ಮಾನದಂಡಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ ಎಂದರು.

1946ರಲ್ಲಿ 25 ದೇಶಗಳ ಪ್ರತಿನಿಧಿಗಳು ಲಂಡನ್‌ನಲ್ಲಿ ಮೊದಲ ಬಾರಿಗೆ ಸಮ್ಮೇಳನ ನಡೆಸುವ ಮೂಲಕ ವಿಶ್ವ ಗುಣಮಟ್ಟ ದಿನಾಚರಣೆಗೆ ನಾಂದಿ ಹಾಡಿದರು. ಆ ಬಳಿಕ ಐಎಸ್‌ಓ ಸ್ಥಾಪನೆಗೊಂಡಿತು. ಅದಾಗ್ಯೂ 1970ರವರೆಗೆ ವಿಶ್ವ ಗುಣಮಟ್ಟ ದಿನದ ಆಚರಣೆ ಚಾಲ್ತಿಗೆ ಬಂದಿರಲಿಲ್ಲ ಎಂದು ತಿಳಿಸಿದರು.

ಗುಣಮಟ್ಟಕ್ಕೆ ಸಂಬಂಧಿಸಿದಂತೆ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸುವ ಉದ್ದೇಶದಿಂದ ಪ್ರತಿವರ್ಷ ಒಂದು ಶೀರ್ಷಿಕೆಯಡಿ ಸದರಿ ದಿನಾಚರಣೆ ನಡೆಸಲಾಗುತ್ತಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಅಂತಾರಾಷ್ಟ್ರೀಯ ಗುಣಮಟ್ಟ ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಅಭಿವ್ಯಕ್ತಿಗೊಳಿಸುವ ನಿಟ್ಟಿನಲ್ಲಿ ಪ್ರತಿ ವರ್ಷ ಒಂದು ಶೀರ್ಷಿಕೆ ಆಯ್ಕೆ ಮಾಡಲಾಗುತ್ತದೆ. ಸಾರ್ವಜನಿಕ ಮತ್ತು ಖಾಸಗಿ ವಲಯ, ಸರ್ಕಾರ, ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಸೇರಿದಂತೆ ಎಲ್ಲಾ ಪಾಲುದಾರರು ಸಮನ್ವಯತೆ ಬಗೆಗಿನ ಪ್ರಾಮುಖ್ಯತೆಯನ್ನು ಒತ್ತಿ ಹೇಳುವ ರೀತಿಯಲ್ಲಿ ಶೀರ್ಷಿಕೆ ನೀಡಲಾಗುತ್ತದೆ ಎಂದರು.

ಎಐ (ಕೃತಕ ಬುದ್ಧಿಮತ್ತೆ) ಮೂಲಕ ಉದ್ಯಮ, ನಾವಿನ್ಯತೆ ಮತ್ತು ಮೂಲಸೌಕರ್ಯ ಸಾಧಿಸುವ ಸಂದೇಶವನ್ನು ಈ ವರ್ಷದ ಶೀರ್ಷಿಕೆ ಒಳಗೊಂಡಿದೆ. ಆ ಮೂಲಕ ಎಐ ತಂತ್ರಜ್ಞಾನದ ಸುರಕ್ಷಿತ ಮತ್ತು ಜವಾಬ್ದಾರಿಯುತ ಬಳಕೆಯ ಅಗತ್ಯತೆಯನ್ನು ಒತ್ತಿ ಹೇಳಲಾಗಿದೆ ಎಂದು ತಿಳಿಸಿದರು. ಇಂಜಿನಿಯರ್‌ಗಳ ಸಂಸ್ಥೆ ಮೈಸೂರು ಘಟಕದ ಮಾಜಿ ಅಧ್ಯಕ್ಷರಾದ ಬಿ.ಎಸ್.ಪ್ರಭಾಕರ್, ಎ.ಎಸ್.ಸತೀಶ್, ಕಾರ್ಯದರ್ಶಿ ಡಾ.ಎಸ್.ಎ. ಮೋಹನ್‌ಕೃಷ್ಣ ಮತ್ತಿತರರು ಹಾಜರಿದ್ದರು.

ಚಾಮುಂಡಿಬೆಟ್ಟದ ಸುತ್ತಮುತ್ತ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಬ್ರೇಕ್ ಹಾಕಿ; ಬೆಟ್ಟದ ತಪ್ಪಲು ಕಾಂಕ್ರೀಟ್ ಕಾಡಾಗುವುದ ತಪ್ಪಿಸಿ

ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಆಗ್ರಹ

- ಅಪಾರ್ಟ್‌ಮೆಂಟ್ ಹಾವಳಿ ಬೆಟ್ಟದ ಸೌಂದರ್ಯಕ್ಕೆ ಧಕ್ಕೆ
- ಕೇರಳದ ವೈನಾಡುವಿನಲ್ಲಿ ಆದಂತೆ ಭೂ ಕುಸಿತ ಆತಂಕ
- ಪರಿಸರ ಫಾರ್ಮ್ ಹೌಸ್ ನಿರ್ಮಿಸಿದರೆ ಆಕ್ಷೇಪವಿಲ್ಲ
- ಇಂತದಕ್ಕೆಲ್ಲಾ ಅನುಮತಿ ಕೊಟ್ಟ ಅಧಿಕಾರಿ ಅಮಾನತು ಮಾಡಿ

ಮೈಸೂರು, ಅ.17(ಬಿಎಲ್‌ಯು)– ಹಸಿರಿನಿಂದ ಕಂಗೊಳಿಸುತ್ತಿರುವ ಪಾರಂಪರಿಕ ಹಾಗೂ ಐತಿಹಾಸಿಕ ಮಹತ್ವವಿರುವ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲು ಕಾಂಕ್ರೀಟ್ ಕಾಡಾಗುವುದನ್ನು ತಡೆಗಟ್ಟಲು ಉದ್ದೇಶಿತ ಎಂಟು ಅಂತಸ್ತು ಅಪಾರ್ಟ್‌ಮೆಂಟ್ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸುವಂತೆ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡಿಬೆಟ್ಟದ ಪಾದದಲ್ಲಿ ನಿರ್ಮಾಣವಾಗುತ್ತಿರುವ ಅಪಾರ್ಟ್‌ಮೆಂಟ್ ಕಾಮಗಾರಿಗೆ ಕಡಿವಾಣ ಹಾಕದಿದ್ದರೆ ಇದೇ ರೀತಿಯ ಹಲವು ಗಗನ ಚುಂಬಿ ಕಟ್ಟಡಗಳು ತಲೆ ಎತ್ತಿ, ಚಾಮುಂಡಿಬೆಟ್ಟದಲ್ಲಿ ಕೊಡಗು ಹಾಗೂ ವೈನಾಡುವಿನಂತೆ ಭೂಕುಸಿತ ದುರಂತ ಸಂಭವಿಸಲಿದೆ ಎಂದು ಎಚ್ಚರಿಸಿದರು.

ಚಾಮುಂಡಿಬೆಟ್ಟದ ಪಾದದಲ್ಲಿರುವ ಮಹಾರಾಣ ಪ್ರತಾಪ ಸಿಂಗ್ ರಸ್ತೆಯಲ್ಲಿ ಹೆಸರಾಂತ ಖಾಸಗಿ ವಸತಿ ನಿರ್ಮಾಣ ಸಂಸ್ಥೆ ಅಪಾರ್ಟ್‌ಮೆಂಟ್ (ಬೃಹತ್ ವಸತಿ ಸಮುಚ್ಚಯ) ನಿರ್ಮಿಸುತ್ತಿದೆ. ಸಿಎಆರ್ ಮೈದಾನದಿಂದ ತಾವರೆಕಟ್ಟೆಗೆ ಹೋಗುವ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಈ ಕಟ್ಟಡದಿಂದ ಚಾಮುಂಡಿಬೆಟ್ಟದ ಸೌಂದರ್ಯ ಮಾಸಿ ಹೋಗುತ್ತದೆ. ಬೃಹತ್ ವಸತಿ ಸಮುಚ್ಚಯ ನಿರ್ಮಾಣವಾಗದೆ ಬೆಟ್ಟದ ಅಸ್ತಿತ್ವಕ್ಕೆ ದೊಡ್ಡ ಗಂಡಾಂತರ ಎದುರಾಗಲಿದೆ ಎಂದು ರಘು ಕೌಟಿಲ್ಯ ಎಚ್ಚರಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಬಿಜೆಪಿ ಅಲ್ಪ ಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ನಗರ ಪ್ರಧಾನ ಕಾರ್ಯದರ್ಶಿ ಮಹೇಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಬೆಟ್ಟದ ಪಾದಕ್ಕೆ ಕಂಟಕ!!: ವಾಹನ ನಿಲುಗಡೆಗೆ ನೆಲ ಅಂತಸ್ತು ನಿರ್ಮಿಸಲು ಕನಿಷ್ಠ 30 ಅಡಿ ಆಳ ಭೂಮಿ ಅಗೆಯಬೇಕು. ಪಿಲ್ಲರ್‌ಗಾಗಿ ಕನಿಷ್ಠ ಎಂಟತ್ತು ಅಡಿಪಾಯ ಹಾಕಬೇಕು. ಡ್ರಿಲ್ಲಿಂಗ್ ಯಂತ್ರ ಬಳಸಿ ಭೂಮಿ ಅಗೆಯುವ ಸಂದರ್ಭದಲ್ಲಿ ಕಂಪನ ಉಂಟಾಗುತ್ತದೆ. ಇದರಿಂದ ಸಹಜವಾಗಿಯೇ ಚಾಮುಂಡಿಬೆಟ್ಟದ ಪಾದದ ಭೂಮಿ ಸಡಿಲಗೊಳ್ಳುತ್ತದೆ. ಬೆಟ್ಟದ ಪಾದದ ಮಣ್ಣು ಸಡಿಲಗೊಂಡ ಸಂದರ್ಭದಲ್ಲಿ ಭೂ ಕುಸಿತ ಉಂಟಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಈಗಾಗಲೇ ಚಾಮುಂಡಿಬೆಟ್ಟದ ಸುತ್ತಮುತ್ತ ಎಕರೆಗಟ್ಟಲೆ ಭೂಮಿಯನ್ನು ಬಹಳಷ್ಟು ಜನರು ತಮ್ಮದಾಗಿಸಿಕೊಂಡಿದ್ದಾರೆ. ಇದರಲ್ಲಿ ಕೆಲವರ ದಾಖಲೆ ಅಧಿಕೃತವಾಗಿದ್ದರೆ, ಮತ್ತೆ ಕೆಲವರದ್ದು ಅನಧಿಕೃತವಾಗಿದ್ದು, ಭೂಮಿ ಅತಿಕ್ರಮಿಸಿಕೊಂಡಿದ್ದಾರೆ. ಚಾಮುಂಡಿಬೆಟ್ಟದ ಸುತ್ತಮುತ್ತ ಜಮೀನು ಮಾಲೀಕರು ಫಾರ್ಮ್ ಹೌಸ್ ನಿರ್ಮಿಸಿಕೊಳ್ಳಲು ನಮ್ಮ ಅಭ್ಯಂತರವಿಲ್ಲ. ಆದರೆ ಕಟ್ಟಡಗಳು ನಿರ್ಮಾಣವಾಗಬಾರದು ಎಂದರು.

ಆದರೆ ಈಗ ಮಹಾರಾಣ ಪ್ರತಾಪ್ ಸಿಂಗ್ ರಸ್ತೆಯಲ್ಲಿ ಈ ಅಪಾರ್ಟ್‌ಮೆಂಟ್ ನಿರ್ಮಿಸಿದರೆ ಸುತ್ತಮುತ್ತಲು ಇದೇ ರೀತಿಯ ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗುತ್ತವೆ. ಇದರಿಂದ ಇಡೀ ಚಾಮುಂಡಿಬೆಟ್ಟದ ಸುತ್ತ ಮುತ್ತ ಕಾಂಕ್ರೀಟ್ ಕಾಡು ನಿರ್ಮಾಣವಾಗುತ್ತದೆ.

ಐತಿಹಾಸಿಕ ಹಾಗೂ ಪಾರಂಪರಿಕ ಮಹತ್ವವಿರುವ ಚಾಮುಂಡಿಬೆಟ್ಟ ಈಗ ಹಸಿರಿನಿಂದ ಕಂಗೊಳಿಸುತ್ತಿದೆ. ದೇಶ–ವಿದೇಶದ ಪ್ರವಾಸಿಗರನ್ನು ಅತ್ಯಾಕರ್ಷಿಸುತ್ತಿದೆ. ಆದರೆ ಈಗ ಇಂತಹ ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾದರೆ ಚಾಮುಂಡಿಬೆಟ್ಟದ ಮೂಲ ಸ್ವರೂಪಕ್ಕೆ ಧಕ್ಕೆ ಉಂಟಾಗುತ್ತದೆ ಎಂದು ರಘು ಕೌಟಿಲ್ಯ ಎಚ್ಚರಿಸಿದರು.

ಸಂರಕ್ಷಿತ ಅರಣ್ಯವಾಗಿ ಘೋಷಿಸಿ: ಸರ್ಕಾರ ಈಗಾಗಲೇ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ತಂದಿದೆ. ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿರುವ ಪ್ರಾಧಿಕಾರದ ಮೂಲಕ ಚಾಮುಂಡಿಬೆಟ್ಟದ ಸುತ್ತಲಿನ ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಣೆ ಮಾಡಬೇಕು. ಈ ಮೂಲಕ ಬೆಟ್ಟದ ಸುತ್ತಲಿನ 3 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡ ತಲೆ ಎತ್ತದಂತೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ರಘು ಕೌಟಿಲ್ಯ ಆಗ್ರಹಿಸಿದರು.

ಚಾಮುಂಡಿಬೆಟ್ಟ ಹಾಗೂ ಸುತ್ತಲಿನ ಪ್ರದೇಶವನ್ನು ಪಾರಂಪರಿಕ ಸ್ಥಳವೆಂದು ಈಗಾಗಲೇ ಘೋಷಣೆ ಮಾಡಲಾಗಿದೆ. ಇಂತಹ ಸ್ಥಳ ಮತ್ತು ರಸ್ತೆಯಲ್ಲಿ ಕಟ್ಟಡ ನಿರ್ಮಿಸಲು ಸರ್ಕಾರದಿಂದ ರಚನೆಯಾಗಿರುವ ಪಾರಂಪರಿಕ ರಕ್ಷಣಾ ಸಮಿತಿ ಅನುಮತಿ ಕಡ್ಡಾಯವಾಗಿದೆ. ಆದರೆ ನಗರಪಾಲಿಕೆ ಮತ್ತು ಮುಡಾ ಅಧಿಕಾರಿಗಳು ಪಾರಂಪರಿಕ ಸಮಿತಿ ಅನುಮತಿ ಪಡೆಯದೆಯೇ ಕಟ್ಟಡ ಹಾಗೂ ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡಿದ್ದು, ಹಿಂದಿನ ಜಿಲ್ಲಾಧಿಕಾರಿ ಈ ಬಗ್ಗೆ ನಿಗಾ ವಹಿಸಿಲ್ಲ ಎಂದು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ಹಾಲಿ ಜಿಲ್ಲಾಧಿಕಾರಿಗಳು 8 ಅಂತಸ್ತಿನ ಬೃಹತ್ ವಸತಿ ಸಮುಚ್ಚಯ ನಿರ್ಮಾಣ ಕಾರ್ಯ ತಡೆಯಬೇಕು. ಜೊತೆಗೆ ಕಟ್ಟಡ ನಿರ್ಮಾಣಕ್ಕೆ ನೀಡಿರುವ ಪರವಾನಗಿಯನ್ನು ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

ಚಾಮುಂಡಿಬೆಟ್ಟ ರಸ್ತೆಯಲ್ಲಿ ವಿಶ್ವ ವಿದ್ಯಾನಿಲಯ ನಿರ್ಮಿಸುತ್ತಿರುವ ಕಟ್ಟಡ ನಿರ್ಮಾಣ ಕಾರ್ಯವನ್ನು ಕೂಡ ಸ್ಥಗಿತಗೊಳಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಅಧಿಕಾರಿಗಳ ಅಮಾನತಾಗಬೇಕು: ಕಾನೂನು ನಿಯಮಗಳನ್ನು ಉಲ್ಲಂಘಿಸಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಅನುಮತಿ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಅವರನ್ನು ಅಮಾನತು ಮಾಡಬೇಕು ಎಂದು ರಘು ಕೌಟಿಲ್ಯ ಆಗ್ರಹಿಸಿದರು.

ಬಿಜೆಪಿ ಅಲ್ಪ ಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ನಗರ ಪ್ರಧಾನ ಕಾರ್ಯದರ್ಶಿ ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಟ್ಟಡ ನಿರ್ಮಾಣ ಸ್ಥಗಿತಗೊಳಿಸದಿದ್ದರೆ ಕಾನೂನು ಹೋರಾಟ

ಚಾಮುಂಡಿಬೆಟ್ಟದ ಮಹಾರಾಣ ಪ್ರತಾಪ್ ಸಿಂಗ್ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಅಪಾರ್ಟ್‌ಮೆಂಟ್ ಸೇರಿದಂತೆ ಇತರೆ ಕಟ್ಟಡಗಳ ನಿರ್ಮಾಣ ಕಾರ್ಯ ತಡೆಯದಿದ್ದರೆ ನ್ಯಾಯಾಲಯದ ಮೂಲಕ ಕಾನೂನು ಹೋರಾಟ ಮಾಡಲಾಗುವುದು ಎಂದು ರಘು ಕೌಟಿಲ್ಯ ಎಚ್ಚರಿಸಿದರು.

ಚಾಮುಂಡಿಬೆಟ್ಟದ ಸುತ್ತಲಿನ ಪ್ರದೇಶದಲ್ಲಿ ಕಾಂಕ್ರೀಟ್ ಕಾಡು ನಿರ್ಮಿಸುತ್ತಿರುವ ಬಗ್ಗೆ ಜನರಲ್ಲಿ ಪರಿಣಾಮಕಾರಿ ಜಾಗೃತಿ ಮೂಡಿಸಲಾಗುವುದು. ಚಾಮುಂಡಿಬೆಟ್ಟದ ಅಸ್ತಿತ್ವಕ್ಕೆ ಅಪಾಯವಾದರೆ ಇಡೀ ಮೈಸೂರು ನಗರ ಪ್ರಾಕೃತಿಕ ವಿಕೋಪ ಎದುರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಚಾಮುಂಡಿಬೆಟ್ಟದ ಹಸಿರು ಸಂರಕ್ಷಿಸುವ ಕರೆಗೆ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕ ಧ್ವನಿಗೂಡಿಸಬೇಕು ಎಂದು ಮನವಿ ಮಾಡಿದರು.

ಈ ಮೂಲಕ ಸರ್ಕಾರದ ಮೇಲೆ ಒತ್ತಡ ತಂದು ಕಟ್ಟಡ ನಿರ್ಮಾಣ ಕಾರ್ಯ ಸ್ಥಗಿತ ಮಾಡುವ ಪ್ರಯತ್ನ ಮಾಡಲಾಗುವುದು. ಒಂದು ವೇಳೆ ಇದಕ್ಕೆ ಸರ್ಕಾರ ಸ್ಪಂದಿಸದಿದ್ದರೆ ಕಟ್ಟಡ ನಿರ್ಮಾಣ ಕಾರ್ಯ ತಡೆಯುವ ನಿಟ್ಟಿನಲ್ಲಿ ನ್ಯಾಯಾಲಯದ ಮೂಲಕ ಕಾನೂನು ಹೋರಾಟ ಮಾಡುತ್ತೇನೆ ಎಂದು ರಘು ಕೌಟಿಲ್ಯ ತಿಳಿಸಿದರು. ಮೈಸೂರಿನ ಪಾರಂಪರಿಕ ಕಟ್ಟಡಗಳು ಇತ್ತೀಚಿಗೆ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಕೇಂದ್ರ ಸರ್ಕಾರದ ಅಧೀನದಲ್ಲಿರುವ ಕಟ್ಟಡಗಳನ್ನು ಹೊರತುಪಡಿಸಿ ರಾಜ್ಯ ಸರ್ಕಾರ ಹಾಗೂ ಮೈಸೂರು ರಾಜವಂಶಸ್ಥರ ಅಧೀನದಲ್ಲಿರುವ ಪಾರಂಪರಿಕ ಕಟ್ಟಡಗಳು ಸೂಕ್ತ ನಿರ್ವಹಣೆ ಇಲ್ಲದೆ ಸೊರಗುತ್ತಿವೆ. ಈ ಹಿನ್ನೆಲೆ ಮೈಸೂರಿನ ಎಲ್ಲಾ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಚಾಮರಾಜೇಂದ್ರ ಮೃಗಾಲಯ ಸ್ಥಳಾಂತರ ಮಾಡಿ

ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯವನ್ನು ಸೂಕ್ತ ಪ್ರದೇಶಕ್ಕೆ ಸ್ಥಳಾಂತರ ಮಾಡಬೇಕು ಎಂದು ರಘು ಕೌಟಿಲ್ಯ ಆಗ್ರಹಿಸಿದರು. ಮೃಗಾಲಯದ ಸುತ್ತಲಿನ ರಸ್ತೆಯಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತಿವೆ. ಇದರಿಂದ ವಾಹನಗಳ ಹೊಗೆ ಮೃಗಾಲಯದೊಳಗಿರುವ ಪ್ರಾಣಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು. ಮೃಗಾಲಯದ ಸುತ್ತಲಿನ ವಾಹನಗಳ ಸಂಚಾರದಿಂದ ಪ್ರಾಣಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವುದು ಸಹಜವಾಗಿಯೇ ವನ್ಯಜೀವಿ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಕಾಯ್ದೆಯನ್ನು ಪಾಲಿಸಬೇಕಾದ ಮೃಗಾಲಯವೇ ಇದನ್ನು ಉಲ್ಲಂಘನೆ ಮಾಡುತ್ತಿದೆ ಎಂದರು. ವಾಹನಗಳ ಹಾರ್ನ್‌ನಿಂದ ಪ್ರಾಣಿಗಳಿಗೆ ತೊಂದರೆ ಆಗದಂತೆ ಮೃಗಾಲಯದ ಸುತ್ತಲಿನ ರಸ್ತೆಯನ್ನು ನಿಶ್ಯಬ್ಧ ವಲಯವೆಂದು ಪೊಲೀಸ್ ಇಲಾಖೆ ಘೋಷಣೆ ಮಾಡಿದೆ. ಇದೇ ರೀತಿ ಪ್ರಾಣಿಗಳಿಗೆ ತೊಂದರೆ ಆಗದಂತೆ ಮೃಗಾಲಯವನ್ನು ಕೂಡ ಸೂಕ್ತ ಪ್ರದೇಶಕ್ಕೆ ಸ್ಥಳಾಂತರ ಮಾಡಬೇಕೆಂದು ರಘು ಕೌಟಿಲ್ಯ ಸರ್ಕಾರವನ್ನು ಆಗ್ರಹಿಸಿದರು.

ಮುಡಾ ನಿವೇಶನ ಹಗರಣ: ಹಿಂದಿನ ಇಬ್ಬರು ಆಯುಕ್ತರ ವಿರುದ್ಧವೂ ಕ್ರಮಕ್ಕೆ ಶಾಸಕ ಶ್ರೀವತ್ಸ ಆಗ್ರಹ



ಮೈಸೂರು,ಅ.17(ಎಂಟಿವೈ)– ಮುಡಾ ನಿವೇಶನ ಹಗರಣಕ್ಕೆ ಸಂಬಂಧಿಸಿದಂತೆ ಅದರ ಅಧ್ಯಕ್ಷರಾಗಿದ್ದ ಕೆ.ಮರೀಗೌಡರ ತಲೆದಂಡವಾಗಿದ್ದು, ಈ ಹಿಂದೆ ಆಯುಕ್ತರಾಗಿದ್ದ ಇಬ್ಬರು ಅಧಿಕಾರಿಗಳ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಟಿ.ಎಸ್. ಶ್ರೀವತ್ಸ ಒತ್ತಾಯಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಡಾ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಈ ಹಿಂದೆ ಆಯುಕ್ತರಾಗಿದ್ದ ಡಿ.ಬಿ.ನಟೇಶ್, ಜಿ.ಟಿ.ದಿನೇಶ್ ಕುಮಾರ್ ಅವರನ್ನು ರಕ್ಷಣೆ ಮಾಡಲಾಗಿದೆ. ಕೂಡಲೇ ರಾಜ್ಯ ಸರ್ಕಾರ ಇಬ್ಬರನ್ನೂ ವಜಾ ಮಾಡಬೇಕು. ಈಗಾಗಲೇ ಕೆ.ಮರೀಗೌಡರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಹಿಂದಿನ ಇಬ್ಬರೂ ಆಯುಕ್ತರೂ ಹಗರಣದಲ್ಲಿ ಭಾಗಿಯಾಗಿರುವುದರಿಂದ ಅವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು. ಇವರ ತಲೆ ದಂಡ ಯಾವಾಗ? ಎಂದು ಪ್ರಶ್ನಿಸಿದರು.

ಮುಡಾ ಹಗರಣದ ಸಮಗ್ರ ತನಿಖೆಗಾಗಿ ಸಿಎಂಗೆ ಮನವಿ ಸಲ್ಲಿಸಲಾಗಿದೆ. 50:50 ಅನುಪಾತದಲ್ಲಿ ಮಂಜೂರಾದ ಸೈಟ್‌ಗಳು ಬೇರೆಯವರಿಗೆ ಪರಭಾರೆ ಆಗುತ್ತಿವೆ. 2020ರಿಂದ 2024ರ ವರೆಗಿನ 50:50 ಅನುಪಾತದ ಸೈಟ್‌ಗಳ ಮಂಜೂರಾತಿ ರದ್ದತಿ ಕೋರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದೇನೆ. ತಾಂತ್ರಿಕ ಸಮಿತಿ ವರದಿ ಜಾರಿ ಹಾಗೂ ಹಿಂದಿನ ಇಬ್ಬರು ಆಯುಕ್ತರ ವಜಾಕ್ಕೂ ಆಗ್ರಹಿಸಿದ್ದೇನೆ. ಸಿಎಂ ಅವರು 'ತನಿಖೆ ನಡೆಯುತ್ತಿದೆ. ಮಾರಾಟಕ್ಕೆ ಅವಕಾಶ ಕೊಡಲ್ಲ' ಎಂದು ಹೇಳಿದ್ದಾರೆ ಎಂದು ಶ್ರೀವತ್ಸ ತಿಳಿಸಿದರು.

ಕೆ.ಮರೀಗೌಡ ತಲೆದಂಡದಿಂದ ಮೊದಲ ಹಂತದಲ್ಲಿ ನಮಗೆ ಗೆಲುವು ಸಿಕ್ಕಿದೆ. ಹಗರಣದಲ್ಲಿ ಸಿಎಂ ಕೂಡ ಭಾಗಿಯಾಗಿದ್ದರೂ ಅವರಿಗೇ ಮನವಿ ಸಲ್ಲಿಸಿರುವೆ. ಅವರಿಂದ ನ್ಯಾಯ ಸಿಗದಿದ್ದರೆ ರಾಜ್ಯಪಾಲರಿಗೆ ಮನವಿ ಸಲ್ಲಿಸುವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಮ್ಮ ಪ್ರಕಾರ 50:50 ಅನುಪಾತದಡಿ 14,000ಕ್ಕೂ ಹೆಚ್ಚು ನಿವೇಶನಗಳನ್ನು ನೀಡಲಾಗಿದೆ. ಅದೆಲ್ಲವನ್ನು ವಾಪಸ್ ಪಡೆಯಬೇಕು. ತನಿಖೆ ನಂತರ ಅವುಗಳನ್ನು ಅರ್ಹರಿಗೆ ಕೊಡಬೇಕು. 50:50 ಅನುಪಾತದ ನಿವೇಶನಗಳು ಅಷ್ಟೇ ಅಲ್ಲ, ಬದಲಿ ನಿವೇಶನ ಹಂಚಿಕೆಯಲ್ಲೂ ಮುಡಾದಲ್ಲಿ ಭಾರೀ ಅಕ್ರಮ ನಡೆದಿದೆ. ಬೇರೆ ಬೇರೆ ರಾಜಕಾರಣಿಗಳ ಹೆಸರೂ ಕೇಳಿಬರುತ್ತಿದೆ. ತನಿಖೆ ಮಾಡಿ, ತಪಿತಸ್ಥರಿಗೆ ಶಿಕ್ಷೆ ಆಗಲಿ ಎಂದು ಆಗ್ರಹಿಸಿದರು.

ಅಕ್ರಮವಾಗಿ ಹಂಚಿಕೆಯಾಗಿರುವ 4,500 ಸೈಟ್‌ಗಳ ಬಗ್ಗೆಯೂ ನಮ್ಮ ಹೋರಾಟ ಇದೆ. ಮೊದಲು 50:50 ಅನುಪಾತದ ನಿವೇಶನ ರದ್ದು ಮಾಡಿದರೆ, ನಂತರ ಅವರ ಪ್ರತಿಕ್ರಿಯೆ ಗೊತ್ತಾಗುತ್ತದೆ ಎಂದರು.

ಅ.21, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ಸಂವಾದ ಕಾರ್ಯಕ್ರಮ

ಮೈಸೂರು,ಅ.17–ಮೈಸೂರಿನ ಕೃಷಿಕ್ ಸರ್ವೋದಯ ಸಂಸ್ಥೆಯು ಅ.21ರಂದು ಸಂಜೆ 5 ಗಂಟೆಗೆ ಐಎಎಸ್, ಕೆಎಎಸ್ ಪ್ರಿಲಿಮ್ಸ್ ಪರೀಕ್ಷೆಗೆ ಕ್ರ್ಯಾಶ್ ಕೋರ್ಸ್ ಮತ್ತು ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಭವನದಲ್ಲಿ ಒಂದು ದಿನದ ಉಚಿತ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಸಂಸ್ಥೆ ಅಧ್ಯಕ್ಷ ಡಾ.ಎನ್.ಎಸ್. ರಾಮೇಗೌಡ ಭಾಗವಹಿಸಿ ಅಭ್ಯರ್ಥಿಗಳಿಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಲಿದ್ದಾರೆ. ಆಸಕ್ತರು ಅ.20ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8296031570, 7892845218 ಸಂಪರ್ಕಿಸಬಹುದು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು: ಬನ್ನಿಮಂಟಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಅ.18ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಸಿದ್ದಲಿಂಗಪುರ, ಕಳಸ್ತವಾಡಿ, ನಾಗನಹಳ್ಳಿ, ಲಕ್ಷ್ಮಿಪುರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿ



ಮೈಸೂರು, ಅ. 17– ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಬಡ ವಿದ್ಯಾವಂತ ನಿರುದ್ಯೋಗಿ ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿ ಮತ್ತು ಉದ್ಯೋಗ ವಿಕಸನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತರಬೇತಿಯ ಅವಧಿ 3 ತಿಂಗಳು ಇರುತ್ತದೆ. ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ತರಗತಿ ನಡೆಯಲಿದ್ದು, ಬಿಪಿಓ, ಕಂಪ್ಯೂಟರ್ ಕೌಶಲ್ಯ, ಕಮ್ಯುನಿಕೇಶನ್ ಕೌಶಲ್ಯ ಉಚಿತ ತರಬೇತಿ ನೀಡಲಾಗುವುದು. ಕನಿಷ್ಠ ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಆಗಿರಬೇಕು. ವಯಸ್ಸು: 18ರಿಂದ 35 ವರ್ಷ ಒಳಗಿರಬೇಕು, ಆರ್ಥಿಕವಾಗಿ ಹಿಂದುಳಿದ ವಿದ್ಯಾವಂತ ಬಡ ಯುವತಿಯರು ಸದರಿ ತರಬೇತಿಗೆ ಅರ್ಹತೆ ಹೊಂದಿರುತ್ತಾರೆ. ತರಬೇತಿಯು ಅ.21 ರಿಂದ ಪ್ರಾರಂಭವಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 6364867818, 9113806615 ಸಂಪರ್ಕಿಸಬಹುದು ಎಂದು ಸಂಸ್ಥೆಯ ಮೈಸೂರು ವಿಭಾಗೀಯ ಮುಖ್ಯಸ್ಥ ಶಿವರಾಜು ತಿಳಿಸಿದ್ದಾರೆ.

ಅ.22ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಅ. 17–ಪೂಜ್ಯ ಶ್ರೀ ಶ್ರೀ ರವಿಶಂಕರ್ ಗುರುದೇವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಅ.22ರಿಂದ 26ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ವರೆಗೆ ಎರಡು ಅವಧಿಯಲ್ಲಿ ನಡೆಯಲಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ 94804 76825, 9483589825 ಸಂಪರ್ಕಿಸಬಹುದು.

ಪ್ರವಾಸಿಗರ ಆಕರ್ಷಿಸುತ್ತಿದೆ 'ಕಿನ್ನಾಳ ಕಲಾ' ಮಳಿಗೆ





ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಿನ್ನಾಳ ಕಲೆ ಅನಾವರಣಗೊಳಿಸಿರುವ 'ಕಿನ್ನಾಳ ಕಲಾ' ಮಳಿಗೆ ಪ್ರವಾಸಿಗರ ನೆಚ್ಚಿನ ಆಕರ್ಷಣೆಯಾಗಿ ಎಲ್ಲರ ಕಣ್ಮನ ಸೆಳೆಯುತ್ತಿದೆ.

ಕಿನ್ನಾಳ ಕಲೆಯ ಕಲಾಕೃತಿಗಳಿಂದಲೇ ನಿರ್ಮಾಣಗೊಂಡಿರುವ ಕಿನ್ನಾಳ ಕಲಾ ಮನೆಯ ಮಳಿಗೆ ದಸರಾ ವಸ್ತುಪ್ರದರ್ಶನದಲ್ಲಿ ವಿಶೇಷ ಆಕರ್ಷಣೆ. ಮಳಿಗೆ ಮುಂದಿರುವ ಎತ್ತರದ ಕಾಮಧೇನು, ಆಂಜನೇಯ, ದೇವಲೋಕದಲ್ಲಿನ ದೇವಾನು ದೇವತೆಗಳ ಕಲಾಕೃತಿಗಳು ನಯನ ಮನೋಹರವಾಗಿವೆ. ಮಳಿಗೆಯೊಳಗೆ ಕಿನ್ನಾಳ ಕಲೆಯನ್ನು ಕಲಿಯುವ ವಿಧಾನಗಳನ್ನು ತಿಳಿಸುವ ಜೊತೆಗೆ ನಾಡಿನ ಕಲೆ–ಸಂಸ್ಕೃತಿಯನ್ನು ಅನಾವರಣಗೊಳಿಸಲಾಗಿದೆ.

ಮೈಸೂರು, ಅ.17(ಎಂಕೆ)– ಸುಂದರ, ಅಂದ–ಚೆಂದದ ಕಿನ್ನಾಳ ಕಲೆಯ ಅನಾವರಣ... ಕರ್ನಾಟಕದ ಕರಕುಶಲ ಕಲೆಯ ತವರೂರಿನ ಪರಿಚಯ ತಿಳಿಯಲು ತಪ್ಪದೇ ಇಲ್ಲೊಮ್ಮೆ ಬನ್ನಿ....!

ಮೈಸೂರು ದಸರಾ ಮಹೋತ್ಸವದ ದೀರ್ಘಕಾಲದ ಆಕರ್ಷಣೆಯಾದ ದಸರಾ ವಸ್ತುಪ್ರದರ್ಶನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಿನ್ನಾಳ ಕಲೆ ಅನಾವರಣಗೊಳಿಸಿರುವ 'ಕಿನ್ನಾಳ ಕಲಾ' ಮಳಿಗೆ ಪ್ರವಾಸಿಗರ ನೆಚ್ಚಿನ ಆಕರ್ಷಣೆಯಾಗಿ ಎಲ್ಲರ ಕಣ್ಮನ ಸೆಳೆಯುತ್ತಿದೆ.

ರಾಜ್ಯದ ಕೊಪ್ಪಳ ಜಿಲ್ಲೆಯಲ್ಲಿರುವ ಕಿನ್ನಾಳ ಗ್ರಾಮದ ಕಿನ್ನಾಳ ಕಲೆಯು ವಿಶಿಷ್ಟವಾದ ಜಾನಪದ ಕಲಾ ಮತ್ತು ಸಾಂಪ್ರದಾಯಿಕ ಮರದ ಕರಕುಶಲ ಕಲಾಕೃತಿಗಳಿಗೆ ಪ್ರಸಿದ್ಧಿಯಾಗಿದೆ. ವಿಜಯನಗರ ಸಾಮ್ರಾಜ್ಯ ಕಾಲದ(ಸುಮಾರು 15ರಿಂದ 16ನೇ ಶತಮಾನ) ಚಿತ್ರ–ಶಿಲ್ಪ ಶೈಲಿಯಿಂದ ಅಭಿವೃದ್ಧಿ ಹೊಂದಿದ ವಿಶಿಷ್ಟ ಕಲಾ ಪ್ರಕಾರವಾದ ಮತ್ತು ವೈವಿಧ್ಯಮಯವಾದ ಕಿನ್ನಾಳ ಕಲೆಯನ್ನು ತನ್ನ ಒಡಲಲ್ಲಿಟ್ಟುಕೊಂಡ ಕಿನ್ನಾಳ ಪಟ್ಟಗ್ರಾಮ ಮರದ ಕೆತ್ತನೆಗಳಿಗೆ ಹೆಸರುವಾಸಿಯಾಗಿದೆ.

ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಕನಕಗಿರಿ, ಇಳಕಲ್, ಗದಗ, ಹರಪ್ಪನಹಳ್ಳಿ, ಲಕ್ಷ್ಮೇಶ್ವರ, ಹಾವೇರಿ, ಗೋಕಾಕ ಮೊದಲಾದ ಕಡೆಗಳಲ್ಲಿ ಕಿನ್ನಾಳ ಕಲಾವಿದರ ಚಿತ್ರಗಾರ ಕುಟುಂಬಗಳು ನೆಲೆಸಿವೆಯಾದರೂ ಕಿನ್ನಾಳ ಗ್ರಾಮ ತನ್ನದೇ ಆದಂತಹ ವಿಶಿಷ್ಟವಾದ ಶೈಲಿ ಹಾಗೂ ಪರಂಪರೆಯಿಂದ ಚಿರಪರಿಚಿತವಾಗಿದೆ. ಕಿನ್ನಾಳ ಕಲೆಯು ಆಟಿಕೆಗಳು, ಧಾರ್ಮಿಕ ವಿಗ್ರಹಗಳು, ಅಲಂಕಾರಿಕ ಮತ್ತು ಗೃಹೋಪಯೋಗಿ ವಸ್ತುಗಳಿಗೆ ಪ್ರಸಿದ್ಧವಾಗಿದ್ದು, ದಸರಾ ವಸ್ತುಪ್ರದರ್ಶನದಲ್ಲಿ ಕಿನ್ನಾಳ ಕಲೆಯನ್ನು ಕಣ್ತುಂಬಿಕೊಳ್ಳುವ ಅವಕಾಶ ನೀಡಲಾಗಿದೆ.

ತಯಾರಿಕೆ ಕುರಿತು ಮಾಹಿತಿ: ಕಿನ್ನಾಳ ಕಲೆಯ ಮಳಿಗೆಯಲ್ಲಿ ಕಿನ್ನಾಳ ಕಲೆಯ ಬೊಂಬೆಗಳನ್ನು ತಯಾರಿಸುವ ಕುರಿತು ಹಂತ ಹಂತವಾಗಿ ಮಾಹಿತಿ ನೀಡಲಾಗಿದೆ. ಮೊದಲನೇ ಹಂತದಲ್ಲಿ ಮಾಡಬೇಕಾದ ಕಲಾಕೃತಿಗಳ ಮಾದರಿಗಳನ್ನು ಹುಣಸೆ ಬೀಜದ ಪುಡಿ, ಸೆಣಬಿನ ನಾರು ಮತ್ತು ಬೇವಿನ ಮರದ ಪುಡಿಯನ್ನು ಬಳಸಿ ಆವೆ ಮಣ್ಣಿನ ಹದಕ್ಕೆ ತರುವುದು. ಈ ಹಂತವನ್ನು 'ಕೀಟ' ಎಂದು ಕರೆಯುವುದು ವಾಡಿಕೆ. ಎರಡನೇ ಹಂತದಲ್ಲಿ ಕಲಾಕೃತಿಗಳ ಒಳಹೂರಣಕ್ಕಾಗಿ ಆಯುರ್ವೇದ ಗುಣಗಳಿರುವ ಹಗುರವಾದ ಪೋಳಕಿ ಮರವನ್ನು(White Sanders Tree)ಬಳಸಿ ಪ್ರಾಥಮಿಕ ಹಂತದ ಆಕೃತಿಯನ್ನು ಸಿದ್ದಪಡಿಸುವುದು.

ಮೂರನೇ ಹಂತದಲ್ಲಿ ಮಿಶ್ರಣ ಮಾಡಿದ ಕೀಟವನ್ನು ಮರದ ಆಕೃತಿಗೆ ಲೇಪಿಸಿ, ಬಿಸಿಲಿನಲ್ಲಿ ಹದವಾಗಿ ಒಣಗಿಸಿದ ನಂತರ ಹತ್ತಿ ಬಟ್ಟೆ ಹಾಕುವುದು. 4ನೇ ಹಂತದಲ್ಲಿ ಸೀಮೆಸುಣ್ಣದ ಪುಡಿ ಮತ್ತು ಅಂಟನ್ನು ಬಳಸಿ ಮೂರ್ತಿಯನ್ನು ರಚಿಸಲಾಗುವುದು. ನಂತರ ಮೆರಗು ಕಾಗದದಲ್ಲಿ ಉಜ್ಜಿ ಮೂರ್ತಿಗಳ ಮೇಲ್ಪದರ ನುಣುಪಾಗಿ ಕಾಣುವಂತೆ ಉತ್ತಮ ಆಕಾರವನ್ನು ನೀಡುವುದು. ಐದನೇ ಹಂತದಲ್ಲಿ ಮೂರ್ತಿಗಳ ಬಿಡಿಭಾಗಗಳನ್ನು ಜೋಡಿಸಿ ಅಂತಿಮ ರೂಪ ನೀಡುವುದು. ಕಡೆಯ ಹಂತದಲ್ಲಿ ನುರಿತ ಹಾಗೂ ಹಿರಿಯ ಕಲಾವಿದರಿಂದ ಕಿನ್ನಾಳ ಕಲಾಕೃತಿಗಳಿಗೆ ನೈಸರ್ಗಿಕ ಬಣ್ಣ, ಸಿಂಥೆಟಿಕ್ ಬಣ್ಣ ಹಾಗೂ ಚಿನ್ನದ ಬಣ್ಣವನ್ನು ಉಪಯೋಗಿಸಿ ಮೂರ್ತಿಗಳನ್ನು ಚೆನ್ನಾಗಿ ಕಾಣುವಂತೆ ಮಾಡುವ ವಿಧಾನಗಳನ್ನು ತಿಳಿಸಲಾಗಿದೆ.

ದೇಶ – ವಿದೇಶ


ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ವಿರುದ್ಧ ಬಂಧನ ವಾರೆಂಟ್



ಢಾಕಾ: ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿಗಳ ನೇತೃತ್ವದ ಕ್ರಾಂತಿಯಿಂದ ಅಧಿಕಾರದಿಂದ ಕೆಳಗಿಳಿದ ನಂತರ ಆಗಸ್ಟ್‌ನಲ್ಲಿ ಭಾರತಕ್ಕೆ ಪಲಾಯನವಾಗಿದ್ದ ಮಾಜಿ ಪ್ರಧಾನಿ ಶೇಖ್ ಹಸೀನಾಗೆ ಬಾಂಗ್ಲಾದೇಶದ ನ್ಯಾಯಾಲಯವೊಂದು ಬಂಧನ ವಾರಂಟ್‌ಗೆ ಆದೇಶಿಸಿದೆ. ಅವರನ್ನು ಬಂಧಿಸಿ ನ.18 ರಂದು ಹಾಜರುಪಡಿಸುವಂತೆ ನ್ಯಾಯಾಲಯ ಆದೇಶಿಸಿದೆ ಎಂದು ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿಯ ಮುಖ್ಯ ಪ್ರಾಸಿಕ್ಯೂಟರ್ ಮೊಹಮ್ಮದ್ ತಾಜುಲ್ ಇಸ್ಲಾಂ ತಿಳಿಸಿದರು.

ತನ್ನ ರಾಜಕೀಯ ವಿರೋಧಿಗಳ ಸಾಮೂಹಿಕ ಬಂಧನ, ಕಾನೂನುಬಾಹಿರ ಹತ್ಯೆ ಸೇರಿದಂತೆ ವ್ಯಾಪಕವಾದ ಮಾನವ ಹಕ್ಕುಗಳ ಉಲ್ಲಂಘನೆಯೊಂದಿಗೆ ಹಸೀನಾ ಅವರ 15 ವರ್ಷಗಳ ಆಳ್ವಿಕೆ ಅಂತ್ಯಗೊಂಡಿತ್ತು. 77 ವರ್ಷದ ಹಸೀನಾ ಬಾಂಗ್ಲಾದೇಶದಿಂದ ಪಲಾಯನ ಮಾಡಿದ ನಂತರ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ನವದೆಹಲಿಯ ಮಿಲಿಟರಿ ವಾಯು ನೆಲೆಯಲ್ಲಿ ಕೊನೆಯ ಬಾರಿಗೆ ಅವರು ಕಾಣಿಸಿಕೊಂಡಿದ್ದರು. ಬಾಂಗ್ಲಾದೇಶ ಆಕೆಯ ರಾಜತಾಂತ್ರಿಕ ಪಾಸ್‌ಪೋರ್ಟ್ ಹಿಂತೆಗೆದುಕೊಂಡಿದೆ.

ಬಿಹಾರದಲ್ಲಿ ಕಳ್ಳಭಟ್ಟಿ ದುರಂತ; 24 ಮಂದಿ ಸಾವು



ಬಿಹಾರ: ಬಿಹಾರದ ಸಿವಾನ್ ಜಿಲ್ಲೆಯಲ್ಲಿ ನಡೆದ ನಕಲಿ ಮದ್ಯ ದುರಂತದಲ್ಲಿ 20 ಮಂದಿ ಸಾವನ್ನಪ್ಪಿದ್ದು, ಹಲವರು ಅಸ್ವಸ್ಥರಾಗಿದ್ದಾರೆ. ಇದರೊಂದಿಗೆ ಛಾಪ್ರದಲ್ಲಿಯೂ ನಕಲಿ ಮದ್ಯ ಸೇವಿಸಿ ನಾಲ್ವರು ಸಾವನ್ನಪ್ಪಿದ್ದು, ಹಲವರು ಅಸ್ವಸ್ಥಗೊಂಡಿದ್ದಾರೆ. ಸಿವಾನ್ ಜಿಲ್ಲೆಯ ಜಿಲ್ಲೆಯ ಭಗವಾನ್‌ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮಧಾರ್ ಗ್ರಾಮದಲ್ಲಿ ಪಾಲಿಥಿನ್ ಮಿಶ್ರಿತ ಮದ್ಯ ಸೇವಿಸಿ ಜನರ ಆರೋಗ್ಯ ಹದಗೆಡಲಾರಂಭಿಸಿದೆ. ವಾಂತಿ, ಭೇದಿ ಮತ್ತು ದೃಷ್ಟಿ ನಷ್ಟದ ದೂರುಗಳ ನಂತರ ಅನೇಕ ಜನರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಈ ಪೈಕಿ 20 ಮಂದಿ ಸಾವನ್ನಪ್ಪಿದ್ದಾರೆ. 4 ಜನರು ದೃಷ್ಟಿ ಕಳೆದುಕೊಂಡಿದ್ದಾರೆ ಎಂದು ವರದಿಯಾಗಿದೆ.

ಮೃತರು ಅಂಗಡಿಯೊಂದರಲ್ಲಿ ಜಮಾಯಿಸಿ ಸಂಜೆ ತಡವಾಗಿ ಮದ್ಯ ಸೇವಿಸಿದರು. ಎಲ್ಲರೂ ಮನೆಗೆ ತಲುಪಿದ ನಂತರ ದೃಷ್ಟಿ ದೋಷ, ವಾಂತಿ ಮತ್ತು ಹೊಟ್ಟೆ ನೋವು ಕಾಣಿಸಿಕೊಂಡಿದೆ. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮತ್ತೊಂದೆಡೆ, ಸರನ್ ಜಿಲ್ಲೆಯ ಮಸ್ರಖ್ ಪೊಲೀಸ್ ಠಾಣೆ ವ್ಯಾಪ್ತಿಯ ಇಬ್ರಾಹಿಂಪುರ ಗ್ರಾಮದಲ್ಲಿ ನಕಲಿ ಮದ್ಯ ಸೇವಿಸಿ 4 ಜನರ ಜೀವವನ್ನು ಕಳೆದುಕೊಂಡಿದ್ದಾರೆ.

ಗಾಜಾದಲ್ಲಿ ಇಸ್ರೇಲ್ ದಾಳಿಯಲ್ಲಿ ಸತ್ತವರ ದೇಹವನ್ನು ನಾಯಿಗಳು ತಿನ್ನುತ್ತಿವೆ



ಗಾಜಾ: ಗಾಜಾದ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯಲ್ಲಿ ಮೃತಪಟ್ಟವರ ದೇಹವನ್ನು ಹಸಿದ ನಾಯಿಗಳು ತಿನ್ನುತ್ತಿವೆ ಎನ್ನುವ ಮಾಹಿತಿ ಲಭ್ಯವಾಗಿದೆ. ಅಧಿಕಾರಿಯೊಬ್ಬರು ಮಾತನಾಡಿ, ಅವರ ಸಹೋದ್ಯೋಗಿಯೊಬ್ಬರು ಉತ್ತರ ಗಾಜಾದಲ್ಲಿ ಕೊಲ್ಲಲ್ಪಟ್ಟಿದ್ದರು, ಪ್ಯಾಲೆಸ್ತೀನಿಯನ್ನರು ಶವಗಳನ್ನು ಸ್ವೀಕರಿಸಿದ್ದರು. ಆದರೆ ಶವಗಳ ಮೇಲೆ ಪ್ರಾಣಿಗಳು ಕಚ್ಚಿರುವ ಗುರುತುಗಳು ಕೂಡ ಇದ್ದವು ಎಂದು ತಿಳಿಸಿದ್ದಾರೆ. ಶವಗಳನ್ನು ಬೀದಿನಾಯಿಗಳು ತಿನ್ನುತ್ತಿವೆ. ಹೀಗಾಗಿ ಯಾರ ಶವ ಎಂದು ಗುರುತು ಹಿಡಿಯುವುದು ಕೂಡ ಕಷ್ಟವಾಗಿದೆ ಎಂದು ಹೇಳಿದ್ದಾರೆ. ಕಳೆದ ವರ್ಷ ಅ.7ರಂದು ಇಸ್ರೇಲಿ ಪಟ್ಟಣಗಳ ಮೇಲೆ ಹಮಾಸ್ ದಾಳಿ ಮಾಡಿದ ನಂತರ ಇಸ್ರೇಲ್ ಗಾಜಾದಲ್ಲಿ ಮಿಲಿಟರಿ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಇದರ ಪರಿಣಾಮವಾಗಿ 1,206 ಜನರು ಸಾವನ್ನಪ್ಪಿದರು. ಇಸ್ರೇಲ್ ಮತ್ತು ಹಮಾಸ್ ನಡುವೆ ಯುದ್ಧ ಆರಂಭವಾಗಿ ಅ.7ಕ್ಕೆ ಒಂದು ವರ್ಷ ಕಳೆದಿದೆ. ನಿರಂತರವಾಗಿ ನಡೆಯುತ್ತಿರುವ ದಾಳಿಯಲ್ಲಿ ಈವರೆಗೂ 42 ಸಾವಿರ ಪ್ಯಾಲೆಸ್ಟೈನಿಯನ್ನರು ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.

ಸುಪ್ರೀಂಕೋರ್ಟ್‌ನ ಮುಂದಿನ ಸಿಜೆಐ ಆಗಿ ಸಂಜೀವ್ ಖನ್ನಾ ಹೆಸರು ಶಿಫಾರಸು



ನವದೆಹಲಿ: ಸುಪ್ರೀಂಕೋರ್ಟ್‌ನ ಮುಂದಿನ ಮುಖ್ಯ ನ್ಯಾಯಮೂರ್ತಿಯನ್ನಾಗಿ ಸುಪ್ರೀಂ ಕೋರ್ಟ್‌ನ ಎರಡನೇ ಅತ್ಯಂತ ಹಿರಿಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರ ಹೆಸರನ್ನು ಕೇಂದ್ರ ಕಾನೂನು ಸಚಿವಾಲಯಕ್ಕೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಶಿಫಾರಸು ಮಾಡಿದ್ದಾರೆ.

ಈ ಶಿಫಾರಸನ್ನು ಕೇಂದ್ರ ಅಂಗೀಕರಿಸಿದರೆ ನ್ಯಾ.ಸಂಜೀವ್ ಖನ್ನಾ ಸುಪ್ರೀಂಕೋರ್ಟ್‌ನ 51ನೇ ಮುಖ್ಯ ನ್ಯಾಯಮೂರ್ತಿ ಆಗಲಿದ್ದಾರೆ. ಸಿಜೆಐ ಚಂದ್ರಚೂಡ್ ಅವರು ನ.10ರಂದು ನಿವೃತ್ತರಾಗುತ್ತಾರೆ. ನ್ಯಾಯಮೂರ್ತಿ ಖನ್ನಾ ಅವರು ಮೇ 13, 2025ರಂದು ನಿವೃತ್ತಿ ಹೊಂದಲಿದ್ದಾರೆ. ಒಂದು ವೇಳೆ ಅವರ ನೇಮಕವಾದರೆ ಆರು ತಿಂಗಳು ಮಾತ್ರ ಹುದ್ದೆಯಲ್ಲಿರುತ್ತಾರೆ. ಮೇ 14, 1960ರಂದು ಜನಿಸಿದ ಖನ್ನಾ ಅವರು ದೆಹಲಿ ವಿವಿಯ ಕಾನೂನು ಕೇಂದ್ರದಲ್ಲಿ ಕಾನೂನು ಅಧ್ಯಯನ ಮಾಡಿ, 1983ರಲ್ಲಿ ದೆಹಲಿಯ ಬಾರ್ ಕೌನ್ಸಿಲ್‌ನಲ್ಲಿ ವಕೀಲರಾಗಿ ನೋಂದಾಯಿಸಿಕೊಂಡಿದ್ದರು. ಸ್ವಲ್ಪ ಸಮಯದ ನಂತರ, ಅವರು ಸಾಂವಿಧಾನಿಕ ಕಾನೂನು, ನೇರ ತೆರಿಗೆಗಳು, ಮಧ್ಯಸ್ಥಿಕೆ, ವಾಣಿಜ್ಯ, ಕಂಪನಿ ಕಾನೂನು, ಭೂ ಕಾನೂನುಗಳು, ಹೈಕೋರ್ಟ್ ಮತ್ತು ನ್ಯಾಯ ಮಂಡಳಿಗಳಲ್ಲಿ ನಿಯಮಿತವಾಗಿ ಕೆಲಸ ಮಾಡಿದ್ದರು.

ಉತ್ತರ ಕೊರಿಯಾ ಸೇನೆಗೆ 14 ಲಕ್ಷ ಯುವಕರ ಸೇರ್ಪಡೆ



ಸೋಲ್ (ದಕ್ಷಿಣ ಕೊರಿಯಾ): ಉತ್ತರ ಕೊರಿಯಾ ಸೇನೆಗೆ 14 ಲಕ್ಷ ಯುವಕರು ಒಂದೇ ವಾರದಲ್ಲಿ ಸೇರ್ಪಡೆಗೊಂಡಿದ್ದಾರೆ. ಈ ಪೈಕಿ ಬಹುತೇಕರು ವಿದ್ಯಾರ್ಥಿಗಳು ಎಂದು ತಿಳಿದು ಬಂದಿದೆ. ಸೇನೆಯಿಂದ ನಿವೃತ್ತಿಯಾಗಿದ್ದ ಕೆಲವು ಯುವಕರೂ ಸೇನೆಗೆ ಮರಳಿದ್ದಾರೆ. ಒಂದೇ ವಾರದ ಅಂತರದಲ್ಲಿ ಇಷ್ಟು ದೊಡ್ಡ ಮಟ್ಟದ ನೇಮಕಾತಿಗೆ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಸಾರಥ್ಯದ ಉತ್ತರ ಕೊರಿಯಾ ಸರ್ಕಾರ ಚಾಲನೆ ನೀಡಿದೆ. ಯುವ ಸಮೂಹವು ಹೋರಾಟಕ್ಕೆ ಸಜ್ಜಾಗಿದೆ ಎಂದು ಉತ್ತರ ಕೊರಿಯಾದ ಸರ್ಕಾರಿ ಮಾಧ್ಯಮಗಳು ಮಾಹಿತಿ ನೀಡಿದೆ. 'ಕ್ರಾಂತಿಯ ತೋಳುಗಳಿಂದ ಶತ್ರುವನ್ನು ನಾಶಮಾಡುವ ಪವಿತ್ರ ಯುದ್ಧಕ್ಕೆ ಸಿದ್ಧತೆ ನಡೆಯುತ್ತಿದೆ' ಎಂದು ಉತ್ತರ ಕೊರಿಯಾದ ಸರ್ಕಾರಿ ಮಾಧ್ಯಮ ಸಂಸ್ಥೆ ಕಹಳೆ ಮೊಳಗಿಸಿದೆ. ಉತ್ತರ ಕೊರಿಯಾ ಸೇನೆಗೆ 'ಕೊರಿಯನ್ ಪೀಪಲ್ಸ್ ಆರ್ಮಿ' ಎಂದು ಕರೆಯಲಾಗುತ್ತದೆ. ಉತ್ತರ ಹಾಗೂ ದಕ್ಷಿಣ ಕೊರಿಯಾ ನಡುವಣ ಉದ್ವಿಗ್ನ ಸ್ಥಿತಿ ತಾರಕಕ್ಕೆ ಏರಿರುವ ಹೊತ್ತಲ್ಲೇ ಇಂಥದ್ದೊಂದು ಬೆಳವಣಿಗೆ ನಡೆದಿದ್ದು, ಕೊರಿಯಾ ಪರ್ಯಾಯ ದ್ವೀಪದಲ್ಲಿ ಇದೀಗ ಅಸ್ಥಿರತೆಯ ವಾತಾವರಣ ಮನೆ ಮಾಡಿದೆ.

ವಾಲ್ಮೀಕಿ ರಾಮಾಯಣ ಸಾರ್ವಕಾಲಿಕ

● ಸಚಿವ ಎನ್.ಎಸ್.ಭೋಸರಾಜು ಶ್ಲಾಘನೆ ● ಮಡಿಕೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



ಮಡಿಕೇರಿ ಗಾಂಧಿ ಭವನದಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮಡಿಕೇರಿ, ಅ.17–ಆದಿಕವಿ ಹಾಗೂ ಶ್ರೇಷ್ಠ ಕವಿ ವಾಲ್ಮೀಕಿ ಅವರ ಮಹಾಕಾವ್ಯ ರಾಮಾಯಣ ಸಾರ್ವಕಾಲಿಕ ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಶ್ಲಾಘಿಸಿದರು.

ನಗರದ ಗಾಂಧಿ ಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಾಲ್ಮೀಕಿ ಅವರು 24 ಸಾವಿರ ಸಂಸ್ಕೃತ ಶ್ಲೋಕಗಳ ಒಂದು ಬೃಹತ್ ಗ್ರಂಥ ರಚಿಸಿರುವುದು ವಿಶೇಷವಾಗಿದೆ ವಾಲ್ಮೀಕಿ ಅವರು ರಾಮಾಯಣವನ್ನು ವಿದ್ವತ್ ಪೂರ್ಣವಾಗಿ ಬರೆದಿದ್ದಾರೆ. ರಾಮಾಯಣ ಬರೆಯುವಲ್ಲಿ ಸಾಕಷ್ಟು ಪರಿಶ್ರಮ ವಹಿಸಿದ್ದಾರೆ ಎಂದರು.

ಮಾತೃ ವಾತ್ಸಲ್ಯದ ಕುರಿತು ರಾಮಾಯಣದಲ್ಲೇ ಸಾಕಷ್ಟು ಮಾಹಿತಿ ಸಿಗುತ್ತದೆ. ಪುರಾಣ ಮತ್ತು ಐತಿಹ್ಯಗಳ ವಿಭಿನ್ನ ನಿರೂಪಣೆಗಳ ನಡುವೆ ವಾಲ್ಮೀಕಿ ಹೇಗೆ ಪ್ರಸ್ತುತರಾಗುತ್ತಾರೆ ಎಂಬುದನ್ನು ನಾವೆಲ್ಲಾ ಅರಿತುಕೊಳ್ಳಬೇಕು. ವಾಲ್ಮೀಕಿಯವರ ಚಿಂತನೆ, ಬರವಣಿಗೆಗಳನ್ನು ಹೆಚ್ಚು ಅಧ್ಯಯನ ಮಾಡಬೇಕು ಎಂದು ತಿಳಿಸಿದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ವಾಲ್ಮೀಕಿ ಅವರು ಸಾವಿರಾರು ವರ್ಷಗಳ ಹಿಂದೆಯೇ ರಾಮಾಯಣ ಬರೆದು ಸಮಾಜಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ಅಖಂಡ ಭಾರತದಲ್ಲಿ ವಾಲ್ಮೀಕಿ ಅವರು ತೋರಿಸಿರುವ ದಾರಿಯಲ್ಲಿ ಪ್ರತಿಯೊಬ್ಬರೂ ನಡೆಯಬೇಕು. ಇಡೀ ದಕ್ಷಿಣ ಏಷ್ಯಾದಲ್ಲೇ ವಾಲ್ಮೀಕಿ ರಾಮಾಯಣ ಕಥೆಯನ್ನು ಕಾಣಬಹುದಾಗಿದೆ ಎಂದು ಹೇಳಿದರು.

> ವಾಲ್ಮೀಕಿ ರಾಮಾಯಣ ಇಂದಿಗೂ ಪ್ರಸ್ತುತವಾಗಿದ್ದು, ಬದುಕಿನಲ್ಲಿ ತನ್ನದೇ ಪ್ರಭಾವ ಬೀರಿದೆ. ವಾಲ್ಮೀಕಿ ಸಮಾಜ ಗುರುಭಕ್ತಿಗೆ ಬೆರಳು ಕೊಟ್ಟ, ದೈವಭಕ್ತಿಗೆ ಕಣ್ಣು ಕೊಟ್ಟ, ರಕ್ಷಣೆಗಾಗಿ ಖಡ್ಗ ಹಿಡಿದ, ಸನ್ಮಾರ್ಗಕ್ಕಾಗಿ ಧರ್ಮಗ್ರಂಥ ರಚಿಸಿದ ಸಮಾಜವಾಗಿದೆ.
> –ಅಶೋಕ್, ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷ

ಆಲೂರು–ಸಿದ್ದಾಪುರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲೆ ಕೆಆರ್. ಭಾರತಿ ಮಾತನಾಡಿ, ವಾಲ್ಮೀಕಿ ಅವರ ಜೀವನ ಚರಿತ್ರೆಯನ್ನು ರಾಮಾಯಣದ ಮೂಲಕ ಎಲ್ಲೆಡೆ ಕಾಣಬಹುದು. ಅವರ ಆದರ್ಶ ಗುಣಗಳು ಇಂದಿಗೂ ಮಾದರಿಯಾಗಿದೆ. ಪ್ರತಿಯೊಬ್ಬ ಭಾರತೀಯರು ರಾಮಾಯಣ ಮತ್ತು ಮಹಾಭಾರತವನ್ನು ಅಧ್ಯಯನ ಮಾಡಬೇಕು. ಸಮಾಜದಲ್ಲಿ ಇತರರೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ರಾಮಾಯಣದಲ್ಲಿ ತಿಳಿಯಬಹುದು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಪೌರ ಕಾರ್ಮಿಕರು, ಪರಿಶಿಷ್ಟ ಪಂಗಡದ ರೈತರು ಹಾಗೂ ಸೈನಿಕರನ್ನು ಸನ್ಮಾನಿಸಲಾಯಿತು. ಅಂತರ್ ಜಾತಿ ವಿವಾಹಿತ 10 ದಂಪತಿಗಳಿಗೆ ತಲಾ 3 ಲಕ್ಷ ರೂ. ಪ್ರೋತ್ಸಾಹ ಧನದ ಚೆಕ್ ವಿತರಿಸಲಾಯಿತು. ಚೆನ್ನಂಗಿ ಬಸವನಹಳ್ಳಿ ಸರ್ಕಾರಿ ವಸತಿ ಶಾಲೆ, ಮರೂರು ತಿತಿಮತಿ ವಸತಿ ಶಾಲೆ, ಕೋತೂರು ವಾಲ್ಮೀಕಿ ಆಶ್ರಮ ಶಾಲೆ, ಕರಿಕೆ ಆಶ್ರಮ ಶಾಲೆ, ಮೊರಾಜಿ ದೇಸಾಯಿ ವಸತಿ ಶಾಲೆ ಹಾಗೂ ಬಾಳುಗೋಡು ಏಕಲವ್ಯ ಮಾದರಿ ವಸತಿ ಶಾಲೆ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಜಿಲ್ಲಾಧಿಕಾರಿ ವೆಂಕಟ ರಾಜಾ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಪ್ರಮುಖರಾದ ಪರಮೇಶ್, ಗಂಗಾಧರ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಇಲಾಖೆ ಯೋಜನಾ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಪವನ್ ಕುಮಾರ್, ಬಾಳುಗೋಡು ವಸತಿ ಶಾಲೆ ಪ್ರಾಂಶುಪಾಲ ದಿಲನ್ ಮುತ್ತಣ್ಣ ಇತರರು ಇದ್ದರು.

ಕುಶಾಲನಗರದಲ್ಲೂ ವಾಲ್ಮೀಕಿ ಜಯಂತಿ ಆಚರಣೆ



ಕುಶಾಲನಗರದಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕುಶಾಲನಗರ, ಅ.17–ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪುರಸಭೆ, ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲಾ ವಾಲ್ಮೀಕಿ ನಾಯಕರ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಹಾರಂಗಿ ರಸ್ತೆಯ ಮುಳ್ಳುಸೋಗೆ ವಾಲ್ಮೀಕಿ ಭವನದಲ್ಲಿ ಗುರುವಾರ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪುರಸಭೆ ಅಧ್ಯಕ್ಷೆ ಜಯಲಕ್ಷ್ಮಿ ಚಂದ್ರು, ಮಹಾಕವಿ ವಾಲ್ಮೀಕಿ ಅವರ ಆದರ್ಶ, ವ್ಯಕ್ತಿತ್ವ ಹಾಗೂ ಗುಣಗಳನ್ನು ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಶಾಸಕ ಡಾ.ಮಂತರ್‌ಗೌಡ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ತಹಸೀಲ್ದಾರ್ ಕಿರಣ್ ಗೌರಯ್ಯ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವಿ.ಪಿ.ಶಶಿಧರ್ ಹಾಗೂ ಮೈಸೂರು ಮಾನಸ ಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಉಪನ್ಯಾಸಕ ಬಂಡಳ್ಳಿ ಕುಮಾರ ಮಾತನಾಡಿದರು. ಪುರಸಭೆ ಉಪಾಧ್ಯಕ್ಷೆ ಪುಟ್ಟಲಕ್ಷ್ಮಮ್ಮ, ಸದಸ್ಯರಾದ ಸುರೇಯಾಬಾನು, ಪದ್ಮಾವತಿ, ಮುಖ್ಯಾಧಿಕಾರಿ ಕೃಷ್ಣಪ್ರಸಾದ್, ಗುಡ್ಡೆಹೊಸೂರು ಗ್ರಾಪಂ ಅಧ್ಯಕ್ಷೆ ರುಕ್ಮಿಣಿ, ತಾಪಂ ಇಓ ಪರಮೇಶ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ಯೋಜನಾ ಪ್ರಾಧಿಕಾರದ ಕಾರ್ಯದರ್ಶಿ ಸ್ವಾತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಶ್ರೀದೇವಿ, ಮುಖ್ಯ ಶಿಕ್ಷಕಿ ಪುಷ್ಪಾ, ಪರಿಶಿಷ್ಟ ಜಾತಿ ಮತ್ತು ವರ್ಗದ ನಿವೃತ್ತ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸಿದ್ದಪ್ಪ, ವಾಲ್ಮೀಕಿ ನಾಯಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಕೆ.ಎನ್.ಅಶೋಕ್, ಕಾರ್ಯದರ್ಶಿ ಪರಮೇಶ್, ತಾಲೂಕು ಅಧ್ಯಕ್ಷ ಚಂದನ್, ಮುಖಂಡರಾದ ನಿರ್ವಾಣಪ್ಪ, ಹೊನ್ನಪ್ಪ, ದಾಮೋದರ್, ಪ್ರಭಾಕರ್, ಯೋಗೇಂದ್ರ ನಾಯಕ್ ಪಾಲ್ಗೊಂಡಿದ್ದರು.

ತೀರ್ಥೋದ್ಭವಕ್ಕೆ ಸಾವಿರಾರು ಭಕ್ತರು ಸಾಕ್ಷಿ



ತಲಕಾವೇರಿಯ ತೀರ್ಥೋದ್ಭವದಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಮಡಿಕೇರಿ, ಅ.17–ನಾಡಿನ ಜೀವನದಿ, ಕಾವೇರಿ ಉಗಮಸ್ಥಾನ ತಲಕಾವೇರಿಯಲ್ಲಿ ಗುರುವಾರ ನಡೆದ ಪವಿತ್ರ ತೀರ್ಥೋದ್ಭವಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು.

ಸಂಪ್ರದಾಯದಂತೆ ತಾಯಿ ಕಾವೇರಿ ಮಾತೆಗೆ ಪೂಜಾ ಕಾರ್ಯ ನಡೆದವು. ಭಕ್ತರು ಕಾವೇರಿ ಮಾತೆಗೆ ಘೋಷಣೆ ಮೊಳಗಿಸಿ, ಸಾಂಪ್ರದಾಯಿಕ ಉಡುಪಿನೊಂದಿಗೆ ಆರತಿ ತಟ್ಟೆಯೊಂದಿಗೆ ಕಾವೇರಿ ಮಾತೆಗೆ ನಮಿಸಿದರು. ಕೊಡಗು ಏಕೀಕರಣ ರಂಗ ಹಾಗೂ ಚೆಟ್ಟಿನಾಡು ವಾಲ್ನೂರು ಎಸ್ಟೇಟ್‌ನ ಅಣ್ಣಾಮಲೈ ಚೆಟ್ಟಿಯಾರ್‌ನಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಮಾತನಾಡಿ, ಈ ಬಾರಿ ನಾಡಿನಲ್ಲಿ ಉತ್ತಮ ಮಳೆಯಾಗಿದೆ. ಇದರಿಂದ ಎಲ್ಲರಲ್ಲಿ ಸಮೃದ್ಧಿ ಹಾಗೂ ಸಂತಸ ತಂದಿದೆ. ತಾಯಿ ಕಾವೇರಿ ಮಾತೆ ಸದಾಕಾಲ ಎಲ್ಲರಿಗೂ ಒಳಿತು ಮಾಡಲಿ ಎಂದು ಪ್ರಾರ್ಥಿಸಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ನಾಡಿನ ಸಮಸ್ತ ಜನರಿಗೆ ಶಾಂತಿ, ನೆಮ್ಮದಿ ತರುವಂತಾಗಲಿ ಎಂದರು. ಶಾಸಕ ಡಾ. ಮಂತರ್‌ಗೌಡ ಮಾತನಾಡಿ, ಕಾವೇರಿ ನದಿ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಕುಶಾಲನಗರದ ಕನ್ನಡ ಸಿರಿ ಸ್ನೇಹ ಬಳಗ ವತಿಯಿಂದ ಕಸಾಪ ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷ ಲೋಕೇಶ್ ಸಾಗರ್ ನೇತೃತ್ವದಲ್ಲಿ ಭಕ್ತಿಗೀತೆ ಗಾಯನ ಕಾರ್ಯಕ್ರಮ ನಡೆಯಿತು. ಎಂ.ಬಿ.ದೇವಯ್ಯ ನೇತೃತ್ವದ ತಂಡದವರು ದುಡಿ ನುಡಿಸಿದರು. ಕಿರು ಸಂಕ್ರಮಣ ಹಿನ್ನೆಲೆಯಲ್ಲಿ ಮುಂದಿನ ಒಂದು ತಿಂಗಳು ತಲಕಾವೇರಿಗೆ ಭಕ್ತರು ಭೇಟಿ ನೀಡಿ ತೀರ್ಥ ಪಡೆಯಬಹುದು.

ವಿರಾಜಪೇಟೆಯಲ್ಲಿ ಕಾವೇರಿ ತೀರ್ಥ ವಿತರಣೆ



ಕಾವೇರಿ ತೀರ್ಥವನ್ನು ಹಿಂದೂ ಅಗ್ನಿದಳ ಸಂಘಟನೆ ವತಿಯಿಂದ ವಿತರಿಸಲಾಯಿತು.

ವಿರಾಜಪೇಟೆ, ಅ.17–ಕೊಡಗಿನ ಕುಲದೇವಿ ಮಾತೆ ಕಾವೇರಿ ತೀರ್ಥವನ್ನು ಹಿಂದೂ ಅಗ್ನಿದಳ ಸಂಘಟನೆ ವತಿಯಿಂದ ಗುರುವಾರ ಪಟ್ಟಣದಲ್ಲಿ ವಿತರಿಸಲಾಯಿತು.

ಹಿಂದೂ ಅಗ್ನಿದಳ ಸಂಘಟನೆ 11ನೇ ವರ್ಷಗಳಿಂದಲೂ ತೀರ್ಥ ವಿತರಿಸುತ್ತಿದ್ದು, ಈ ಬಾರಿ ತಲಕಾವೇರಿಯಿಂದ ತೆರೆದ ವಾಹನದಲ್ಲಿ ಕಾವೇರಿ ತೀರ್ಥ ತಂದು ಪಟ್ಟಣದ ಶ್ರೀ ಮಹಾಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಲಾಯಿತು. ನಂತರ ಮೂರ್ನಾಡು ರಸ್ತೆ, ಗಾಂಧಿನಗರ, ಖಾಸಗಿ ಬಸ್ ನಿಲ್ದಾಣ, ಮೀನುಪೇಟೆ, ಪಂಜಾರುಪೇಟೆ, ತೆಲುಗರ ಬೀದಿ, ಜೈನರ ಬೀದಿ, ದೊಡ್ಡಟ್ಟಿಚೌಕಿ ಸೇರಿದಂತೆ ವಿವಿಧೆಡೆ ಸಾರ್ವಜನಿಕರಿಗೆ ವಿತರಿಸಲಾಯಿತು.

ಸಾರ್ವಜನಿಕರು ಸರತಿ ಸಾಲಿನಲ್ಲಿ ನಿಂತು ತೀರ್ಥ ಪಡೆದರು. ಹಿಂದೂ ಅಗ್ನಿದಳ ಸಂಘಟನೆ 25ಕ್ಕೂ ಹೆಚ್ಚು ಪದಾಧಿಕಾರಿಗಳು ಇದ್ದರು.

ಸೇತುವೆಯಿಂದ ಬಿದ್ದ ಕಾರು: ನಾಲ್ವರಿಗೆ ಗಾಯ



ಮಡಿಕೇರಿ: ಚಾಲಕನ ನಿಯಂತ್ರಣ ತಪ್ಪಿದ ಕಾರು ಸೇತುವೆಯಿಂದ ಕೆಳಗೆ ಬಿದ್ದು ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ದೇವರಕೊಲ್ಲಿ ಬಳಿ ಗುರುವಾರ ಮುಂಜಾನೆ ನಡೆದಿದೆ.

ಕೇರಳದ ಕಾಞಂಗಾಡ್ ಮೂಲದ ನಾಲ್ವರು ಸಣ್ಣಪುಟ್ಟ ಗಾಯಗೊಂಡು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಂಪಾಜೆ ಮಾರ್ಗವಾಗಿ ಮಡಿಕೇರಿ ಕಡೆಗೆ ಆಗಮಿಸುತ್ತಿದ್ದ ಕಾರು ದೇವರಕೊಲ್ಲಿಯ ಹೋನೆಸ್ಟ್ ಸರ್ವಿಸ್ ಸ್ಟೇಷನ್ ಬಳಿ ಚಾಲಕನ ನಿಯಂತ್ರಣ ತಪ್ಪಿ ಸೇತುವೆಯಿಂದ ಕೆಳಗೆ ಬಿದ್ದಿದೆ. ಅಪಘಾತ ಶಬ್ದ ಕೇಳಿದ ಸ್ಥಳೀಯ ನಿವಾಸಿ ರಿಯಾಜ್ ಅಕ್ಕಪಕ್ಕದವರೊಂದಿಗೆ ಸ್ಥಳಕ್ಕೆ ಆಗಮಿಸಿ, ಗಾಯಾಳುಗಳನ್ನು ಸಂಪಾಜೆ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆಗೆ ದಾಖಲಿಸಿದರು.

ಹುಲಿ ದಾಳಿಗೆ ಹಸು, ಕರು ಬಲಿ



ಸಿದ್ದಾಪುರ: ಕಾಫಿ ತೋಟದಲ್ಲಿದ್ದ ಬಿಡಾಡಿ ಹಸು ಹಾಗೂ ಕರುವಿನ ಮೇಲೆ ಹುಲಿ ದಾಳಿ ನಡೆಸಿ, ಕೊಂದು ಹಾಕಿರುವ ಘಟನೆ ಮಾಲ್ದಾರೆ ಗ್ರಾಪಂ ವ್ಯಾಪ್ತಿಯ ಬಾಡಗ ಬಾಣಾಂಗಾಲದಲ್ಲಿ ಬುಧವಾರ ರಾತ್ರಿ ನಡೆದಿದೆ.

ಮಾಲ್ದಾರೆ, ಮೈಲಾಪುರ, ತೂಬನಕೊಲ್ಲಿ, ಮಟ್ಟಂ, ಹುಂಡಿ, ಬಾಡಗ ಬಾಣಂಗಾಲ ಕಾಫಿ ತೋಟಗಳಲ್ಲಿ ನೂರಕ್ಕೂ ಹೆಚ್ಚು ಬೀಡಾಡಿ ದನಗಳು ಬಿಡುಬಿಟ್ಟಿದ್ದು, ರಾತ್ರಿ ಹುಲಿ ದಾಳಿ ನಡೆಸಿ ಹಸು ಹಾಗೂ ಕರುವಿವನ್ನು ಅರ್ಧ ಭಾಗದಷ್ಟು ತಿಂದು ಹಾಕಿದೆ.

ಗುರುವಾರ ಬೆಳಗ್ಗೆ ತೋಟಕ್ಕೆ ತೆರಳಿದ ಕಾರ್ಮಿಕರಿಗೆ ಹಸು ಹಾಗೂ ಕರುವಿನ ಕಳೇಬರಹ ಪತ್ತೆಯಾಗಿವೆ. ಸ್ಥಳಕ್ಕೆ ತಿತಿಮತಿ ಅರಣ್ಯ ವಲಯ ವ್ಯಾಪ್ತಿ ಚೆನ್ನಂಗಿ ಉಪವಲಯ ಅರಣ್ಯಾಧಿಕಾರಿ ಶಶಿ ಹಾಗೂ ಆರ್‌ಆರ್‌ಟಿ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದರು. ಕಾಫಿ ತೋಟದ ಸುತ್ತಮುತ್ತ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ವಲಯ ಅರಣ್ಯಾಧಿಕಾರಿ ಗಂಗಾಧರ್ ನಿರ್ದೇಶನದ ಮೇರೆಗೆ ಕಾಫಿ ತೋಟದಲ್ಲಿ ಹುಲಿ ಸೆರೆಗೆ ಕಾರ್ಯಾಚರಣೆ ನಡೆಸುವುದಾಗಿ ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾಡಳಿತ, ನಾಯಕ ಸಮುದಾಯದಿಂದ ಪ್ರತ್ಯೇಕ ಮಹರ್ಷಿ ವಾಲ್ಮೀಕಿ ಜಯಂತಿ



ಜಿಲ್ಲಾಡಳಿತದಿಂದ ನಡೆದ ವಾಲ್ಮೀಕಿ ಜಯಂತಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ನಾಯಕ ಸಮುದಾಯದ ವಿದ್ಯಾರ್ಥಿನಿ ಆರ್.ಚೇತನಾಗೆ ನಗದು ಬಹುಮಾನ ನೀಡಲಾಯಿತು.

ಚಾಮರಾಜನಗರ, ಅ.17–ನಗರದಲ್ಲಿ ಗುರುವಾರ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾಡಳಿತ ಹಾಗೂ ನಾಯಕ ಸಮುದಾಯದವರು ಪ್ರತ್ಯೇಕವಾಗಿ ಆಚರಿಸಿದರು.

ಜಿಲ್ಲಾಡಳಿತದ ಕಾರ್ಯಕ್ರಮ: ಡಾ. ರಾಜ್‌ಕುಮಾರ್ ಜಿಲ್ಲಾ ಕಲಾಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ಪೊಲೀಸ್ ಭದ್ರತೆಯಲ್ಲಿ ವಾಲ್ಮೀಕಿ ಜಯಂತಿ ನಡೆಯಿತು. ಸಮುದಾಯದಿಂದ ಬೃಹತ್ ವಾಲ್ಮೀಕಿ ಭಾವಚಿತ್ರದ ಅದ್ದೂರಿ ಮೆರವಣಿಗೆಯನ್ನು ನಗರದ ಪ್ರವಾಸಿ ಮಂದಿರದಿಂದ ನಡೆಸಲಾಯಿತು. ನಂತರ ವೇದಿಕೆ ಕಾರ್ಯಕ್ರಮ ನಡೆಸಿ, ಜಿಲ್ಲಾಡಳಿತ ಭವನದ ಮುಂಭಾಗ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಭೂಮಿಪೂಜೆ ನಡೆಸಲು ಮುಂದಾದ ಸಮುದಾಯದ ಮುಖಂಡರನ್ನು ಬಂಧಿಸಿ, ಬಿಡುಗಡೆಗೊಳಿಸಲಾಯಿತು.

ಸರ್ಕಾರಿ ಕಾರ್ಯಕ್ರಮ ಬಹಿಷ್ಕಾರ: ವಾಲ್ಮೀಕಿ ಜಯಂತಿ ದಿನದಂದು ಜಿಲ್ಲಾಡಳಿತ ಭವನ ಆವರಣದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಚಾಲನೆ ನೀಡಬೇಕು ಎಂದು ಜಿಲ್ಲೆಯ ನಾಯಕ ಸಮುದಾಯದ ಮುಖಂಡರು ಬೇಡಿಕೆ ಸಲ್ಲಿಸಿದ್ದರು. ಆದರೆ, ಸಮುದಾಯದ ಬೇಡಿಕೆಗೆ ಜಿಲ್ಲಾಡಳಿತ ಹಾಗೂ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ ಎಂದು ಸಮುದಾಯ ಮುಖಂಡರು ಆರೋಪಿಸಿ ಜಿಲ್ಲಾಡಳಿತದಿಂದ ನಡೆದ ವಾಲ್ಮೀಕಿ ಜಯಂತಿ ಬಹಿಷ್ಕರಿಸಿದರು.

ಈ ವಿಚಾರವಾಗಿ ಕಳೆದ ಹದಿನೈದು ದಿನಗಳಿಂದ ಸಮುದಾಯದ ಮುಖಂಡರು ಸಭೆ, ಸುದ್ದಿಗೋಷ್ಠಿ ನಡೆಸಿ, ಬೇಡಿಕೆ ಈಡೇರಿಸದಿದ್ದರೆ ಕಾರ್ಯಕ್ರಮ ಬಹಿಷ್ಕರಿಸುವುದಾಗಿ ಎಚ್ಚರಿಸಿದ್ದರು.

ಪೊಲೀಸ್ ಸರ್ಪಗಾವಲು: ಜಿಲ್ಲಾಡಳಿತ ಭವನ ಆವರಣದಲ್ಲಿ ನಾಯಕ ಸಮುದಾಯದಿಂದ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ ಮಾಡುವುದಾಗಿ ಸಮುದಾಯ ಮುಖಂಡರು ತಿಳಿಸಿದ್ದರಿಂದ ಜಿಲ್ಲಾಡಳಿತ ಭವನದ ಬಳಿ ಭದ್ರತೆಗೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರನ್ನು ಪೊಲೀಸರು ಪರಿಶೀಲಿಸಿ, ಒಳಗೆ ಬಿಡುತ್ತಿದ್ದರು. ಅನಗತ್ಯವಾಗಿ ಯಾವುದೇ ಬ್ಯಾಗ್, ವಸ್ತುಗಳನ್ನು ತೆಗೆದುಕೊಂಡು ಹೋಗುವುದಕ್ಕೆ ನಿರ್ಬಂಧಿಸಲಾಗಿತ್ತು. ಅಲ್ಲದೆ, ಸಚಿವ ಕೆ.ವೆಂಕಟೇಶ್ ಅವರಿಗೂ ಜಿಲ್ಲಾ ಮೀಸಲು ಪಡೆ ಭದ್ರತೆ ನೀಡಿತ್ತು. ನಂತರ ಪೊಲೀಸ್ ಸರ್ಪಗಾವಲಿನಲ್ಲಿ ಜಿಲ್ಲಾಡಳಿತದಿಂದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ನಡೆಯಿತು. ಒಟ್ಟಾರೆ ನಗರದಲ್ಲಿ ಜಿಲ್ಲಾಡಳಿತ ಹಾಗೂ ಸಮುದಾಯ ಮುಖಂಡರು ಪ್ರತ್ಯೇಕವಾಗಿ ವಾಲ್ಮೀಕಿ ಜಯಂತಿ ಆಚರಣೆ ಮಾಡಿದ್ದರು.

ವಾಲ್ಮೀಕಿ, ಭಗೀರಥ, ಕನಕ ಪುತ್ಥಳಿ ನಿರ್ಮಾಣಕ್ಕೆ ಕ್ರಮ

ಮುಂದಿನ ದಿನಗಳಲ್ಲಿ ನಗರದ ಜಿಲ್ಲಾಡಳಿತ ಭವನದಲ್ಲಿ ಮಹರ್ಷಿ ವಾಲ್ಮೀಕಿ, ಭಗೀರಥ ಮಹರ್ಷಿ ಹಾಗೂ ಕನಕದಾಸರ ಪುತ್ಥಳಿ ನಿರ್ಮಾಣಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಭರವಸೆ ನೀಡಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ನಗರಸಭೆ ವತಿಯಿಂದ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಸರ್ಕಾರದ ಮಂಜೂರಾತಿ ಬೇಕಾಗಿದೆ. ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟ ಸಚಿವರೊಂದಿಗೆ ಈಗಾಗಲೇ ಚರ್ಚಿಸಲಾಗಿದ್ದು, ಮುಖ್ಯಮಂತ್ರಿ ಒಪ್ಪಿಗೆ ನೀಡಿದ್ದಾರೆ. ವಾಲ್ಮೀಕಿ ಪುತ್ಥಳಿಯೊಂದಿಗೆ ಭಗೀರಥ ಹಾಗೂ ಕನಕದಾಸರ ಪುತ್ಥಳಿ ನಿರ್ಮಾಣಕ್ಕೂ ಸರ್ಕಾರ ಒಪ್ಪಿದೆ. ಈ ಸಂಬಂಧ ಅಂದಾಜುಪಟ್ಟಿ ತಯಾರಿಸಿ, ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಮೂವರು ಮಹನೀಯರ ಪುತ್ಥಳಿಗಳು ನಿರ್ಮಾಣವಾಗಲಿವೆ ಎಂದು ಹೇಳಿದರು.

ನಂತರ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ನಿವೃತ್ತ ಪ್ರಾಂಶುಪಾಲ ಬಂಗಾರನಾಯಕ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಮಾತನಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿನಿ ಆರ್.ಚೇತನಾಗೆ ಒಂದು ಲಕ್ಷ ರೂ. ನಗದು ಬಹುಮಾನ ನೀಡಲಾಯಿತು. ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಸಿಇಓ ಮೋನಾರೋತ್, ಎಸ್‌ಪಿ ಡಾ.ಬಿ.ಟಿ.ಕವಿತಾ, ಎಡಿಸಿ ಗೀತಾ ಹುಡೇದ, ಜಿಪಂ ಉಪಕಾರ್ಯದರ್ಶಿ ಲಕ್ಷ್ಮೀ ಇದ್ದರು.

ಆನಂದ ರಾಜ್ ನಿಧನ



ಚಾಮರಾಜನಗರ, ಅ.17–ನಗರದ ಹಿರಿಯ ಬಾಲ್ ಬ್ಯಾಡ್ಮಿಂಟನ್ ಮತ್ತು ವಾಲಿಬಾಲ್ ಆಟಗಾರ ಆನಂದ ರಾಜ್ (82) ನಿಧನರಾದರು. ಮೃತರು ಪತ್ನಿ ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಗರದ ಬಣಜಿಗರ ರುದ್ರಭೂಮಿಯಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ವಾಲ್ಮೀಕಿ ಪುತ್ಥಳಿ ಭೂಮಿಪೂಜೆಗೆ ಯತ್ನಿಸಿದವರ ಬಂಧನ, ಬಿಡುಗಡೆ

ಜಿಲ್ಲಾಡಳಿತ ಭವನಕ್ಕೆ ನುಗ್ಗಲು ಮುಂದಾದ ಸಮುದಾಯ ಮುಖಂಡರನ್ನು ವಶಕ್ಕೆ ಪಡೆದ ಪೊಲೀಸರು



ಜಿಲ್ಲಾಡಳಿತ ಭವನಕ್ಕೆ ನುಗ್ಗಲು ಮುಂದಾದ ನಾಯಕ ಸಮುದಾಯ ಮುಖಂಡರನ್ನು ಪೊಲೀಸರು ಬಂಧಿಸಿದರು.

ಚಾಮರಾಜನಗರ, ಅ.17–ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ ನಡೆಸಲು ಮೆರವಣಿಗೆ ಮೂಲಕ ಜಿಲ್ಲಾಡಳಿತ ಭವನಕ್ಕೆ ನುಗ್ಗಲು ಮುಂದಾದ ನಾಯಕ ಸಮುದಾಯದ 50ಕ್ಕೂ ಹೆಚ್ಚು ಮುಖಂಡರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆಗೊಳಿಸಿದರು.

ಭಾರೀ ಸಂಖ್ಯೆಯಲ್ಲಿದ್ದ ಸಮುದಾಯದವರನ್ನು ಪೊಲೀಸರು, ಭವನದ ಮುಖ್ಯ ದ್ವಾರದಲ್ಲೇ ತಡೆದರು. ನಂತರ ಭವನಕ್ಕೆ ನುಗ್ಗಲು ಮುಂದಾದ ಸಮುದಾಯದ ಮುಖಂಡರಾದ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಕೆಲ್ಲಂಬಳ್ಳಿ ಸೋಮನಾಯಕ, ಪು.ಶ್ರೀನಿವಾಸ ನಾಯಕ, ಸುರೇಶ್ ನಾಯಕ, ಕಂಡಕ್ಟರ್ ಸೋಮನಾಯಕ, ವಿರಾಟ್ ಶಿವು, ಕೃಷ್ಣನಾಯಕ, ಸಿಂಗನಪುರ ಮಹೇಶ್ ಸೇರಿದಂತೆ 50ಕ್ಕೂ ಹೆಚ್ಚು ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.


ಪೂರ್ವ ನಿಗದಿಯಂತೆ ಮುಖಂಡರು ನಗರದ ತಾಲೂಕು ಕಚೇರಿಯ ನಾಯಕ ಸಮುದಾಯದ ಹಾಸ್ಟೆಲ್ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ಮುಗಿಸಿ ಜಿಲ್ಲಾಡಳಿತ ಭವನಕ್ಕೆ ತೆರಳಿ ಪುತ್ಥಳಿ ನಿರ್ಮಾಣಕ್ಕೆ ಭೂಮಿಪೂಜೆಗೆ ಮುಂದಾದರು. ಈ ವೇಳೆ ಪೊಲೀಸರು ಮಧ್ಯಪ್ರವೇಶಿಸಿ, ಮುಖಂಡರನ್ನು ವಶಕ್ಕೆ ಪಡೆದರು. ಇದರಿಂದ ಜಿಲ್ಲಾಡಳಿತ ಭವನದ ಮುಂಭಾಗದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ಹಾಗೂ ಮುಖಂಡರ ನಡುವೆ ಮಾತಿನ ಚಕಮಕಿಯೂ ನಡೆಯಿತು. ಕೆಲವರು ಪೊಲೀಸ್ ವಾಹನವನ್ನು ತಡೆದು ರಸ್ತೆಯಲ್ಲೇ ಪ್ರತಿಭಟನೆ ನಡೆಸಿದರು. ನಂತರ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು. ಬಳಿಕ ಜಿಲ್ಲಾಡಳಿತ ಭವನದ ಮುಖ್ಯದ್ವಾರದ ಮುಂಭಾಗ ಸಮಾವೇಶಗೊಂಡವರನ್ನು ಪೊಲೀಸರು ಚದುರಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಅದ್ದೂರಿ ಮೆರವಣಿಗೆ: ನಗರದ ಪ್ರವಾಸಿ ಮಂದಿರದಿಂದ ವಾಲ್ಮೀಕಿ ಭಾವಚಿತ್ರದ ಅದ್ದೂರಿ ಮೆರವಣಿಗೆ ನಡೆಸಲಾಯಿತು. ಸತ್ತಿ ರಸ್ತೆ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಜೋಡಿರಸ್ತೆ ಮಾರ್ಗವಾಗಿ ತಾಲೂಕು ನಾಯಕರ ವಿದ್ಯಾರ್ಥಿನಿಲಯ ಆವರಣದಲ್ಲಿ ನಿರ್ಮಿಸಿದ್ದ ವೇದಿಕೆವರೆಗೆ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡು ಮೆರಗು ನೀಡವು. ಅಲ್ಲದೆ, ವಾಲ್ಮೀಕಿ ವೇಷಧಾರಿ ತಮ್ಮಡಹಳ್ಳಿ ಮಹದೇವ ನಾಯಕ ನೋಡುಗರ ಗಮನ ಸೆಳೆದರು.

10 ವರ್ಷಗಳ ಬೇಡಿಕೆ: ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಕಳೆದ 10 ವರ್ಷಗಳಿಂದಲ್ಲೂ ವಾಲ್ಮೀಕಿ ಪುತ್ಥಳಿ ನಿರ್ಮಿಸುವಂತೆ ಒತ್ತಾಯಿಸಲಾಗುತ್ತಿದೆ. ಆದರೂ ಸರ್ಕಾರ, ಜಿಲ್ಲಾಡಳಿತ ನಿರ್ಲಕ್ಷ್ಯ ಮಾಡುತ್ತಿದೆ. ಹೀಗಾಗಿ ಜಿಲ್ಲೆಯ ಇಡೀ ಸಮುದಾಯ ತೀರ್ಮಾನ ಕೈಗೊಂಡು ಸರ್ಕಾರಕ್ಕೆ ಎಚ್ಚರಿಕೆ ನೀಡುವ ಸಲುವಾಗಿ ಜಿಲ್ಲಾಡಳಿತದಿಂದ ನಡೆದ ವಾಲ್ಮೀಕಿ ಕಾರ್ಯಕ್ರಮವನ್ನು ಬಹಿಷ್ಕರಿಸಿ, ಸಮುದಾಯದಿಂದಲೇ ವಾಲ್ಮೀಕಿ ಜಯಂತಿ ಆಚರಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭಾ ಅಧ್ಯಕ್ಷ ಸುರೇಶ್, ಸದಸ್ಯ ಶಿವರಾಜ್, ಮುಖಂಡರಾದ ಮಲ್ಲೇಶ ನಾಯಕ, ಕಪಿನಿ ನಾಯಕ, ಜಯಸುಂದರ್, ಚೆಂಗುಮಣಿ ನಾಯಕ, ಆರ್.ಸುಂದರ್, ಸಮುದಾಯದ ಮುಖಂಡರು ಹಾಜರಿದ್ದರು.

ಕುಲಗಾಣದಲ್ಲಿ ಬೋನಿಗೆ ಬಿದ್ದ ಚಿರತೆ



ಕುಲಗಾಣದಲ್ಲಿ ಬೋನಿಗೆ ಬಿದ್ದ ಚಿರತೆ.

ಬೇಗೂರು, ಅ.17–ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಕುಲಗಾಣ ಗ್ರಾಮದಲ್ಲಿ ಚಿರತೆ ಬೋನಿಗೆ ಬಿದ್ದಿದೆ.

ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ನಂತರ ವಾರದ ಹಿಂದೆ ಗ್ರಾಮದ ಶ್ರೀರಂಗರಾಜನ್ (ಬಾಬು) ಅಯ್ಯಂಗಾರ್ ಅವರ ಜಮೀನಿನಲ್ಲಿ ಬೋನು ಇರಿಸಲಾಗಿತ್ತು. ಬುಧವಾರ ರಾತ್ರಿ ಚಿರತೆ ಬೋನಿಗೆ ಬಿದ್ದಿದೆ.

ಸೆರೆಯಾದ ಚಿರತೆಯನ್ನು ಮಹದೇಶ್ವರಬೆಟ್ಟದ ಅರಣ್ಯ ಪ್ರದೇಶಕ್ಕೆ ಬಿಡುವುದಾಗಿ ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಅ.21, ಉಸ್ತುವಾರಿ ಸಮಿತಿ ಪರಿಶೀಲನಾ ಸಭೆ



ಸುನೀಲ್ ಬೋಸ್

ಚಾಮರಾಜನಗರ, ಅ.17–ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯನ್ನು ಸಂಸದ ಸುನೀಲ್ ಬೋಸ್ ಅಧ್ಯಕ್ಷತೆಯಲ್ಲಿ ಅ.21ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ಪಂಚಾಯಿತಿ ನೂತನ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜೇಶ್ವರ ಹುಣ್ಣಿಮೆ ರಥೋತ್ಸವ



ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ರಥೋತ್ಸವ ನಡೆಸಲಾಯಿತು.

ಚಾಮರಾಜನಗರ: ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಗುರುವಾರ ಹುಣ್ಣಿಮೆ ರಥೋತ್ಸವ ಪ್ರಯುಕ್ತ ಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಚಾಮರಾಜೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ದೇವಸ್ಥಾನ ಸುತ್ತಲೂ ಮೆರವಣಿಗೆ ಮೂಲಕ ಹುಣ್ಣಿಮೆ ರಥೋತ್ಸವ ನಡೆಸಲಾಯಿತು. ರಥೋತ್ಸವ ಸೇವಾರ್ಥದಾರರಾದ ಇಂಚರ ಗ್ರೂಪ್ಸ್ ಮಂಜು ಹಾಗೂ ಅವರ ಕುಟುಂಬಸ್ಥರು, ಪ್ರಧಾನ ಅರ್ಚಕ ದರ್ಶನ್, ಅರ್ಚಕರಾದ ರಾಮಕೃಷ್ಣ ಭಾರದ್ವಾಜ್, ನಾಗರಾಜ ದೀಕ್ಷಿತ್, ಅನಿಲ್ ಕುಮಾರ್ ದೀಕ್ಷಿತ್, ಉತ್ಸವ ಸಮಿತಿ ಸದಸ್ಯರು ಇದ್ದರು.

ಡಿ.20ಕ್ಕೆ ಉಪೇಂದ್ರನ 'ಯುಐ' ಕಮಾಲ್



ರಿಯಲ್‌ಸ್ಟಾರ್ ಉಪೇಂದ್ರ ನಿರ್ದೇಶನದ ಬಹುನಿರೀಕ್ಷಿತ ಚಿತ್ರ ಯುಐ ಬಿಡುಗಡೆಗೆ ಇದೀಗ ಮುಹೂರ್ತ ನಿಗದಿಯಾಗಿದೆ. ವಿಭಿನ್ನ ಚಿತ್ರಕಥೆ, ಮೇಕಿಂಗ್‌ನಿಂದಲೇ ಕುತೂಹಲ ಹುಟ್ಟುಹಾಕಿದ್ದ ಈ ಚಿತ್ರ ಡಿಸೆಂಬರ್ 20ಕ್ಕೆ ವಿಶ್ವಾದ್ಯಂತ ಕನ್ನಡ, ತಮಿಳು, ತೆಲುಗು, ಹಿಂದಿ, ಮಲಯಾಳಂ ಸೇರಿ ಐದು ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗುತ್ತಿದೆ. ಉಪ್ಪಿ ನಿರ್ದೇಶನದ ಜೊತೆ ನಾಯಕನಾಗೂ ನಟಿಸಿರುವ ಈ ಚಿತ್ರದಲ್ಲಿ ಕೊಡಗಿನ ಕುವರಿ ರೀಷ್ಮಾ ನಾಣಯ್ಯ ನಾಯಕಿಯಾಗಿದ್ದಾರೆ.

ನೂತನ ಪೋಸ್ಟರ್ ಮೂಲಕ ಚಿತ್ರದ ರಿಲೀಸ್ ಡೇಟ್ ಅನೌನ್ಸ್ ಮಾಡಲಾಗಿದ್ದು, ಇದರಲ್ಲಿ ಇಷ್ಟು ದಿನ ಸಿನಿಮಾ ನೋಡಿ ನೀವು ಹಿಟ್, ಫ್ಲಾಪ್ ಅಂತ ಹೇಳ್ತಿದ್ರಿ, ಈ ಸಿನಿಮಾ ನಿಮ್ಮನ್ ನೋಡಿ... ! ಎಂದು ಅರ್ಥಕ್ಕೇ ನಿಲ್ಲಿಸಿ ಮುಂದಿನದನ್ನು ಪ್ರೇಕ್ಷಕರ ಊಹೆಗೆ ಬಿಡಲಾಗಿದೆ. ಯುಐ ನಿಮ್ಮ ತಲೆಯಲ್ಲಿರುವ ಹುಳ ತೆಗೆಯುವ ಸಿನಿಮಾ, ಈ ಚಿತ್ರ ನಿಮ್ಮ ಆಲೋಚನೆಯನ್ನು ಪ್ರಚೋದಿಸುವುದಕ್ಕೆಂದೇ ಮಾಡಿರುವುದು. ಯಾವಾಗಲೂ ಉಪೇಂದ್ರ ಎಲ್ಲರ ತಲೇಲಿ ಹುಳ ಬಿಡ್ತಾನೆ ಅಂತಿದ್ದರು, ಹಾಗಾಗಿ ಇದೊಂದು ಚಿತ್ರವನ್ನು ನಿಮ್ಮೆಲ್ಲರ ತಲೆಯಲ್ಲಿರುವ ಹುಳ ತೆಗೆಯಲೆಂದೇ ಮಾಡಿದ್ದೇನೆ. ನನ್ನ ಪ್ರಕಾರ ಪ್ರೇಕ್ಷಕರು ಯಾವತ್ತೂ ಮೇಲಿರುತ್ತಾರೆ, ನಾವು ಏನೇ ಮಾಡಿದರೂ ಅವರಿಗಿಂತ ಕೆಳಗೇ ಇರುತ್ತೇವೆ. ಆತ ಎಷ್ಟೇ ದೊಡ್ಡ ಟೆಕ್ನಿಷಿಯನ್ ಆದರೂ ಅವನು ಕೆಳಗೇನೇ. ಯಾಕಂದ್ರೆ ಜನರನ್ನು ಗೆಲ್ಲುವುದು ಸುಲಭವಲ್ಲ ಎಂದು ಉಪೇಂದ್ರ ಹೇಳಿದ್ದಾರೆ.

ಯುಐ ಚಿತ್ರದ ನಿರ್ಮಾಪಕರಲ್ಲೊಬ್ಬರಾದ ಕೆ.ಪಿ.ಶ್ರೀಕಾಂತ್ ಮಾತನಾಡುತ್ತ, ಯುಐ ಸಿನಿಮಾ ಯಾವಾಗ ರಿಲೀಸಾಗುತ್ತೆ ಅಂತ ಎಲ್ಲರೂ ಕೇಳ್ತಿದ್ದರು. ಈಗ ಅವರೆಲ್ಲರ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಡಿ.20ಕ್ಕೆ ಯುಐ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ. ಉಪೇಂದ್ರ ಅವರು ಚಿತ್ರದಲ್ಲಿ ಒಂದು ಅದ್ಭುತ ಲೋಕವನ್ನೇ ಸೃಷ್ಟಿಸಿದ್ದಾರೆ. ಇದರ ಜೊತೆಗೆ ಪ್ರೇಕ್ಷಕರಿಗೆ ನಮ್ಮ ಸಿನಿಮಾ ಊಹೆಗೂ ನಿಲುಕದ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ನೀಡುವುದು ಖಂಡಿತ. ಇದುವರೆಗೂ ಕನ್ನಡದಲ್ಲಿ ಇಂಥ ಮ್ಯೂಸಿಕ್, ಸೌಂಡ್ ಎಫೆಕ್ಟ್ ಇರುವಂಥ ಚಿತ್ರ ಬಂದಿಲ್ಲ ವೆಂದೇ ಹೇಳಬಹುದು ಎಂದಿದ್ದಾರೆ.

ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್‌ಪ್ರೈಸಸ್ ಲಾಂಛನದಲ್ಲಿ ಜಿ. ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ನವೀನ್ ಮನೋಹರ್ ಅವರ ಸಹ ನಿರ್ಮಾಣ ಹಾಗೂ ತುಳಸಿರಾಮ ನಾಯ್ಡು(ಲಹರಿ ವೇಲು), ಜಿ.ರಮೇಶ್, ಜಿ.ಆನಂದ್, ಚಂದ್ರು ಮನೋಹರನ್ ಹಾಗೂ ನಾಗೇಂದ್ರ ಅವರುಗಳು ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ.



ದೀಪಾವಳಿಗೆ ಬಘೀರನ ಅಬ್ಬರ ಶುರು

ಶ್ರೀಮುರುಳಿ ಅಭಿನಯದ ಬಘೀರ ಅ.31ಕ್ಕೆ ದೀಪಾವಳಿ ಕೊಡುಗಡೆಯಾಗಿ ರಿಲೀಸಾಗುತ್ತಿದೆ. ಮೈ ಜುಂ ಎನಿಸುವ ಹಾಲಿವುಡ್ ಶೈಲಿಯ ಸಾಹಸ ಸನ್ನಿವೇಶಗಳು ಈ ಚಿತ್ರದ ವಿಶೇಷ. ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಒಬ್ಬ ಪೊಲೀಸ್ ಅಧಿಕಾರಿಯಾಗಿ ತಡೆಯಲು ಸಾಧ್ಯವಾಗದೇ ಹೋದಾಗ ನಾಯಕ ಯಾವ ದಾರಿ ಕಂಡುಕೊಂಡ ಎನ್ನುವುದೇ ಈ ಚಿತ್ರದ ಕಾನ್ಸೆಪ್ಟ್, ಸೂಪರ್‌ಮ್ಯಾನ್ ಶೈಲಿಯ ಕಥೆಯ ಮೂಲಕ ಡಾ.ಸೂರಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಕೆಜಿಎಫ್, ಕಾಂತಾರ ಖ್ಯಾತಿಯ ಹೊಂಬಾಳೆ ಫಿಲಂಸ್ ನಿರ್ಮಾಣದ ಮತ್ತೊಂದು ಬಹುನಿರೀಕ್ಷಿತ ಚಿತ್ರ ಬಘೀರ. ಕನ್ನಡ, ತೆಲುಗು, ತಮಿಳು ಸೇರಿದಂತೆ 5 ಭಾಷೆಗಳಲ್ಲಿ ಹಾಲಿವುಡ್ ರೇಂಜ್‌ನಲ್ಲಿ ನಿರ್ಮಾಣವಾಗಿರುವ ಹೈವೋಲ್ಟೇಜ್ ಆಕ್ಷನ್‌ಪ್ಯಾಕ್ಡ್ ಸಿನಿಮಾ ಇದಾಗಿದ್ದು, ಈ ಮಾಸಾಂತ್ಯಕ್ಕೆ ತೆರೆಗೆ ಬರಲು ಸಿದ್ಧವಾಗಿರುವ ಈ ಚಿತ್ರದ ಮೊದಲ ಹಾಡು ರುಧೀರಧಾರಾ ಈಗಾಗಲೇ ಬಿಡುಗಡೆಯಾಗಿದೆ. ಚಿತ್ರೋದ್ಯಮದಲ್ಲಿ ಈಗಾಗಲೇ ಸಾಕಷ್ಟು ಹೈಪ್ ಕ್ರಿಯೇಟ್ ಮಾಡಿರುವ ಈ ಚಿತ್ರಕ್ಕೆ ಕೆಜಿಎಫ್ ಖ್ಯಾತಿಯ ಪ್ರಶಾಂತ್‌ನೀಲ್ ಕಥೆ ಬರೆದಿದ್ದಾರೆ. ಆಕ್ಷನ್ ಟೀಸರ್ ಮೂಲಕವೇ ನಿರೀಕ್ಷೆ ಮೂಡಿಸಿರುವ ಚಿತ್ರದಲ್ಲಿ ಶ್ರೀಮುರಳಿ ಒಬ್ಬ ಪೊಲೀಸ್ ಆಫೀಸರ್ ಆಗಿ ಖಡಕ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಸಮಾಜವು ಕಾಡಾಗಿ ಬದಲಾದಾಗ ಒಬ್ಬ ರಕ್ಷಕ ಮಾತ್ರ ನ್ಯಾಯಕ್ಕಾಗಿ ಘರ್ಜಿಸುತ್ತಾನೆ ಎನ್ನುವ ಟ್ಯಾಗ್‌ಲೈನ್ ಈ ಚಿತ್ರಕ್ಕಿದೆ,

ಕಾಂತಾರ ಖ್ಯಾತಿಯ ಅಜನೀಶ್ ಲೋಕನಾಥ್ ಅವರ ಬಿಜಿಎಂ ಜೊತೆಗೆ ಕಬ್ಜ ಖ್ಯಾತಿಯ ಎಜೆ.ಶೆಟ್ಟಿ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ, ಉಗ್ರಂ, ರಥಾವರ, ಮಫ್ತಿ, ಭರಾಟೆ, ಮದಗಜ ಚಿತ್ರಗಳ ನಂತರ ಶ್ರೀಮುರುಳಿ ಇದೀಗ ಬಘೀರನಾಗಿ ಮತ್ತೆ ಪ್ರೇಕ್ಷಕರ ಮುಂದೆ ರಗಡ್ ಅವತಾರದಲ್ಲಿ ಬರಲು ಅಣಿಯಾಗಿದ್ದಾರೆ. ಈ ಚಿತ್ರದಲ್ಲಿ ಶ್ರೀಮುರುಳಿ ಜೋಡಿಯಾಗಿ ಸಪ್ತಸಾಗರದಾಚೆ ಎಲ್ಲೋ ಖ್ಯಾತಿಯ ರುಕ್ಮಿಣಿ ವಸಂತ್ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಪ್ರಕಾಶ್‌ರಾಜ್, ರಂಗಾಯಣ ರಘು, ಅಚ್ಯುತ್ ಕುಮಾರ್, ಗರುಡರಾಮ್ ಸೇರಿದಂತೆ ಹತ್ತಾರು ಕಲಾವಿದರು ನಟಿಸಿದ್ದಾರೆ.


'ಯಲಾ ಕುನ್ನಿ' ವಜ್ರಮುನಿಯಾದ ಕೋಮಲ್

ಯಲಾಕುನ್ನಿ, ತನಗೆದುರಾಗಿ ನಿಲ್ಲುವ ವ್ಯಕ್ತಿಗೆ ಹೇಳುವ ಖಡಕ್ ಮಾತಿದು. ತೊಂಭತ್ತರ ಕಾಲಘಟ್ಟದಲ್ಲಿ ತೆರೆಕಂಡ ಸಂಪತ್ತಿಗೆ ಸವಾಲ್ ಚಿತ್ರದಲ್ಲಿ ರಾಜಕುಮಾರ್ ಹಾಗೂ ವಜ್ರಮುನಿ ಇವರಿಬ್ಬರ ನಡುವಿನ ಸಂಭಾಷಣೆಗಳನ್ನು ಯಾರು ತಾನೆ ಮರೆಯಲು ಸಾಧ್ಯ, ಚಿತ್ರದ ಸನ್ನಿವೇಶಗಳಲ್ಲಿ ಯಲಾಕುನ್ನಿ ಎಂಬ ಮಾತನ್ನು ಖಳನಾಯಕ ವಜ್ರಮುನಿ ಅವರು ಪದೇ ಪದೆ ಹೇಳುತ್ತಾರೆ, ವಜ್ರಮುನಿ ಅವರನ್ನು ನೆನಪಿಸುವ ಪಾತ್ರದಲ್ಲಿ ಈಗ ನಟ ಕೋಮಲ್ ಕುಮಾರ್ ಕಾಣಿಸಿಕೊಂಡಿದ್ದಾರೆ. ಚಿತ್ರದ ಹೆಸರು ಕೂಡ ಯಲಾಕುನ್ನಿ.

ಎನ್.ಆರ್.ಪ್ರದೀಪ್ ಅವರ ನಿರ್ದೇಶನದ ಈ ಚಿತ್ರದಲ್ಲಿ ನಟ ಕೋಮಲ್ ಕುಮಾರ್ ತಂದೆ, ಮಗನಾಗಿ 2 ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಟೈಟಲ್‌ಗೆ ಮೇರಾನಾಮ್ ವಜ್ರಮುನಿ ಎನ್ನುವ ಉಪಶೀರ್ಷಿಕೆಯೂ ಇದೆ. ಧರಣಿ ಮಂಡಲ ಎಂಬ ಊರಲ್ಲಿ ನಡೆಯೋ ಕಥೆಯಿದು. ಕೋಮಲ್ ನಿರ್ವಹಿಸಿದ ಕೇಡಿ ನಾಗಪ್ಪ ಎನ್ನುವ ಪಾತ್ರಕ್ಕೆ ವಜ್ರಮುನಿ ಅವರ ಛಾಯೆಯಿದೆ. ಮಗನ ಹೆಸರು ಸತ್ಯ ಹರಿಶ್ಚಂದ್ರ; ಇಲ್ಲೂ ರಾಜ್ ಕುಮಾರ್ ನೆನಪಾಗಬಹುದೇನೋ. ಆದರೆ ವಜ್ರಮುನಿ ಪಾತ್ರದ ನೆರಳಂತೂ ಇಡೀ ಚಿತ್ರದಲ್ಲಿರುತ್ತೆ, ವಜ್ರಮುನಿ ಅವರ ಮೊಮ್ಮಗ ಆಕರ್ಷ್ ನಾಯಕನ ಚಿಕ್ಕ ವಯಸ್ಸಿನ ಪಾತ್ರದಲ್ಲಿ ಅಭಿನಯಿಸಿದ್ದಾನೆ. ನಿಸರ್ಗ ಅಪರ್ಣಾ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದು, ಸಿಟಿಯಲ್ಲಿ ಡಾಕ್ಟರ್ ಓದಿಕೊಂಡು, ಹಳ್ಳಿಗೆ ಬಂದು ಆ ಜನರಲ್ಲಿ ಬದಲಾವಣೆ ತರಬೇಕೆಂದು ಪ್ರಯತ್ನಿಸುತ್ತಾಳೆ. ಯುವ ನಟ ಮಯೂರ್ ಪಟೇಲ್ ವಿಲನ್ ಶೇಡ್ ಇರೋ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಮಿತ್ರ, ದತ್ತಣ್ಣ, ತಬಲಾ ನಾಣಿ, ಸಾಧು ಕೋಕಿಲ, ಶಿವರಾಜ್ ಕೆ.ಆರ್. ಪೇಟೆ, ರಾಜು ತಾಳಿಕೋಟೆ ಹೀಗೆ ಹಲವಾರು ಕಲಾವಿದರ ದಂಡೇ ಯಲಾಕುನ್ನಿ ಚಿತ್ರದಲ್ಲಿದೆ. ಚಿತ್ರದ ನಾಲ್ಕು ಹಾಡುಗಳಿಗೆ ಧರ್ಮವಿಶ್ ಸಂಗೀತ ಸಂಯೋಜಿಸಿದ್ದಾರೆ, ಹಾಲೇಶ್ ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ, ಇದೇ ತಿಂಗಳ 25ರಂದು ತೆರೆಕಾಣಲಿರುವ ಈ ಚಿತ್ರವನ್ನು ಕೋಮಲ್ ಪತ್ನಿ ಅನಸೂಯ ಕೋಮಲ್ ಕುಮಾರ್ ಹಾಗೂ ಸಹನಾ ಮೂರ್ತಿ ನಿರ್ಮಾಣ ಮಾಡಿದ್ದಾರೆ.



'ಜೈ ಕಿಸಾನ್' ರೈತನ ಬದುಕಿನ ಅನಾವರಣ




ರೈತ ನಮ್ಮ ದೇಶದ ಬೆನ್ನೆಲುಬು. ಅಂತಹ ರೈತನ ಬದುಕು, ಬವಣೆಯನ್ನಿಟ್ಟುಕೊಂಡು ರವಿ ನಾಗಪುರೆ ಅವರು ಕಥೆ ಬರೆದು ನಿರ್ಮಿಸಿರುವ ಚಿತ್ರ ಜೈ ಕಿಸಾನ್. ಗ್ರಾಮೀಣ ಪ್ರದೇಶದ ರೈತನ ಜೀವನಶೈಲಿ ಹಾಗೂ ಆತನ ಹೋರಾಟದ ಬದುಕನ್ನು ಬಿಚ್ಚಿಡುವ ಈ ಚಿತ್ರಕ್ಕೆ ವಿಕಾಸ್ ವಿಲಾಸ್ ಮಿಸಾಲ್ ಆಕ್ಷನ್ ಕಟ್ ಹೇಳಿದ್ದಾರೆ. ಕನ್ನಡ ಹಾಗೂ ಮರಾಠಿ ಭಾಷೆಯಲ್ಲಿ ತಯಾರಾಗಿರುವ ಈ ಚಿತ್ರದಲ್ಲಿ ಜನುಮೇಜಂಯ್ ಹಾಗೂ ತನ್ವಿ ಸಾವಂತ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ನಾಗರಾಜ ಎಂ.ಎನ್. ಚಿತ್ರದ ಸಂಭಾಷಣೆ ಹೆಣೆದಿದ್ದಾರೆ. ಜೈ ಕಿಸಾನ್ ಚಿತ್ರ ಕನ್ನಡ ಭಾಷೆಯಲ್ಲಿ ನವೆಂಬರ್ 7ಕ್ಕೆ ಬಿಡುಗಡೆಯಾಗಲಿದೆ. ಬಿಡುಗಡೆ ಕುರಿತಂತೆ ಮಾಹಿತಿ ನೀಡಲು ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಸದಸ್ಯರು ಹಾಜರಿದ್ದು ಚಿತ್ರದ ಕಾನ್ಸೆಪ್ಟ್ ಬಗ್ಗೆ ಮಾತನಾಡಿದರು.

ಕಥೆಗಾರ ಹಾಗೂ ನಿರ್ಮಾಪಕ ರವಿ ನಾಗಪುರೆ ಮಾತನಾಡುತ್ತ ನಾನೊಬ್ಬ ರೈತ, ನನ್ನ ತಂದೆಯೂ ರೈತರು. ರೈತನ ಕಷ್ಟಗಳನ್ನು ತುಂಬಾ ಹತ್ತಿರದಿಂದ ಕಂಡಿದ್ದೇನೆ. ನಮ್ಮ ರೈತರು ಹಾಗೂ ಆತನ ಕುಟುಂಬ ಯಾರಿಗೂ ಕಡಿಮೆ ಇಲ್ಲದಂತೆ ಬೆಳೆಯಬೇಕು. ರೈತ ಎಂದರೆ ಕೆಲವರಿಗೆ ಅಸಡ್ಡೆ. ಆತನಿಗೆ ಹೆಣ್ಣು ಕೊಡಲೂ ಹಿಂಜರಿಯುತ್ತಾರೆ, ಹಾಗಾಗಬಾರದು. ರೈತನನ್ನು ಹುಡುಕಿಕೊಂಡು ಬಂದು ಹೆಣ್ಣು ಕೊಡುವಂತಾಗಬೇಕು. ಓದಿರುವವರು ಕೃಷಿ ಮಾಡಲು ಹಿಂಜರಿಯಬಾರದು. ಆಧುನಿಕ ಕೃಷಿಯ ಮೂಲಕ ಸಾಕಷ್ಟು ಸಂಪಾದನೆ ಮಾಡಬಹುದು. ಅದನ್ನೇ ಈ ಚಿತ್ರದ ಮೂಲಕ ಹೇಳಿದ್ದೇನೆ. ನಮ್ಮ ಚಿತ್ರದಲ್ಲಿ ನಾಯಕ ವಿದ್ಯಾವಂತ. ಆತನ ತಂದೆಗೆ ಮಗ ಕೃಷಿ ಮಾಡುವುದು ಇಷ್ಟವಿರಲ್ಲ. ಆದರೆ ಸನ್ನಿವೇಶ ಆತನನ್ನು ರೈತನನ್ನಾಗಿ ಮಾಡುತ್ತದೆ. ರೈತನ ಬದುಕೀಗ ಹೋರಾಟಮಯವಾಗಿದೆ, ಹಣ ಗಳಿಸಲೆಂದು ನಾನು ಸಿನಿಮಾ ಮಾಡಿಲ್ಲ. ನಮ್ಮ ರೈತರ ಮುಂದಿನ ಭವಿಷ್ಯಕ್ಕಾಗಿ ಚಿತ್ರ ನಿರ್ಮಿಸಿದ್ದೇನೆ. ಚಿತ್ರದ ಆಶಯವನ್ನು ಎಲ್ಲರೂ ತಿಳಿದುಕೊಳ್ಳಬೇಕೆಂಬುದು ನಮ್ಮ ಆಶಯ ಎಂದು ಹೇಳಿದರು.

ನಾಯಕ ಜನುಮೇಜಯ್ ಮಾತನಾಡಿ, ಚಿತ್ರದಲ್ಲಿ ನಾನು ವಿದ್ಯಾವಂತ ಯುವಕ ಶಿವ ಎಂಬ ಪಾತ್ರ ಮಾಡಿದ್ದೇನೆ, ಅಣ್ಣನ ಆಸೆಯನ್ನು ಪೂರೈಸಲು ರೈತನಾಗುತ್ತೇನೆ. ನಂತರ ಅಧುನಿಕ ಕೃಷಿಯ ಮೂಲಕ ಬೇರೆಯವರಿಗೂ ಆದರ್ಶವಾಗುತ್ತೇನೆ ಎಂದು ಹೇಳಿದರು. ನಾಯಕಿ ತನ್ವಿ ಸಾವಂತ್ ಮಾತನಾಡುತ್ತ, ನನ್ನ ಪಾತ್ರದ ಹೆಸರು ಮಂಜರಿ. ಆಕೆ ಮಾಡರ್ನ್ ಗರ್ಲ್, ಅಂಥವಳು ಹೇಗೆ ರೈತನ್ನು ಲವ್ ಮಾಡುತ್ತಾಳೆ, ನಂತರ ಏನಾಗುತ್ತದೆ ಎಂಬುದನ್ನು ಚಿತ್ರದಲ್ಲಿ ನಿರ್ದೇಶಕರು ತುಂಬಾ ಚೆನ್ನಾಗಿ ತೋರಿಸಿದ್ದಾರೆ ಎಂದರು.

ಸಿನಿಪದಬಂಧ-547



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1.ಡಾ.ರಾಜ್‌ಕುಮಾರ್-ಶಂಕರ್‌ನಾಗ್ ಮಿಲನ	6
3.ಅಣ್ಣಯ್ಯ ಚಿತ್ರದ ನಾಯಕಿ	4
5.ಸಪ್ತಮಿಯ ದಿನ ಎಳೆದ ತೇರು	2
6.ಚಿತ್ರದುರ್ಗದ ವೀರ ಕೊನೆಯಲ್ಲಿ ತುಸು ವ್ಯತ್ಯಾಸಗೊಂಡಿದ್ದಾನೆ	6
8._ _ ಮೂಡಿ ಬಂದ	2
10.ಬಲೆ ಬೀಸಿದ ಹೆಂಗಸು ಕೊನೆಯಲ್ಲಿ ದೀರ್ಘವಾಗಿದ್ದಾಳೆ	3
12.ಅಂಬಿ-ಸುಮಲತಾ ಅಭಿನಯದ ಪ್ರೀತಿಯಳೆದು ಉಡುಗೊರೆ	7
15.ಬಗ್ಗಡದಲ್ಲಿ ಅರಳಿದ ಪುಷ್ಪ	7
16.ಕಿತ್ತೂರು ಚೆನ್ನಮ್ಮ ಇಲ್ಲಿ ಇನ್ಸಿಲ್ ಕಳೆದುಕೊಂಡಿದ್ದಾಳೆ	5

ಮೇಲಿನಿಂದ ಕೆಳಕ್ಕೆ

1.ಕುಮಾರ್ ಬಂಗಾರಪ್ಪ -- ಶಿವರಂಜಿನಿಯ ಶಾಶ್ವತ ಪ್ರೀತಿ	5
2.ರವಿಚಂದ್ರನ್ ಸಾರಿದ ಯುದ್ಧದಲ್ಲಿ ಹಳ್ಳಿಯಿದೆ	3
3.ಕೊಬ್ಬಿದ ಹೆಣ್ಣು ಹಾಡಿನಲ್ಲಿ ಬಂದಳು	4
4.ಹಸಿರು ಗಾಜಿನ ಬಳೆಗಳೇ.... ಹಾಡಿನ ಗಾಯಕಿ	6
7.ಡಾ. ರಾಜಕುಮಾರ್-ಜಯಪ್ರದ ಅಭಿನಯದ ಚಿತ್ರ	8
9.ಸಾಹಸ ಸಿಂಹನ ಜೊತೆ ಅಕ್ಷಯ್ ಕುಮಾರ್ ಅಭಿನಯಿಸಿದ ಚಿತ್ರ	5
11." _ _ ನಾನು ಬಳ್ಳಿಯ ಮಿಂಚು... ",	2
12.ದರ್ಶನ್ ಅಭಿನಯದ "ಧಣಿ"	3
13.ರಾಕ್ ಲೈನ್ ವೆಂಕಟೇಶ್ ನೇಗಿಲು ಹಿಡಿದಿದ್ದಾನೆ	4
14.ನನಸಾದ ಸ್ವಪ್ನ	3
15.ಯುದ್ಧ ಕಾಂಡ ಚಿತ್ರದ ನಿರ್ದೇಶಕನ ಇನ್ಸಿಲ್	2

ಸಿನಿ ಪದಬಂಧ 546ರ ಉತ್ತರ

ವಿ	ಜ	ಯ	ದ	ಶ	ಮಿ		ನ	ವ	ಗ್ರ	ಹ
ಜ			ಸ				ವ			ಸಿ
ಯ	ದು		ರಾ	ಜ	ಮ	ಹಾ	ರಾ	ಜ		ರು
ಲ					ಹಿ		ತ್ರಿ			ತೋ
ಕ್ಷ್ಮಿ		ಗೊಂ	ಬೆ		ಷಾ			ಸುಂ	ದ	ರ
			ಟ್ಟಿ		ಸು		ಆ			ಣ
	ಅಂ	ದ	ದ	ಅ	ರ	ಮ	ನೆ		ಮೃ	
	ಬಾ		ತಾ		ಮ				ಗಾ	
	ರಿ		ಯಿ		ರ್ದಿ		ಸಿ		ಲ	
				ಸಿ	ನಿ	ಮಾ	ತಾ	ರೆ	ಯ	ರು
ಜಂ	ಬೂ	ಸ	ವಾ	ರಿ			ರಾ			

ವಿಜೇತರು: ಜಿ.ಕೆ.ಶ್ರೀಕಾಂತ್, ಪಿ.ಒ. ರಸ್ತೆ, ಬೆಟ್ಟದಪುರ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ವಾಲ್ಮೀಕಿ ಸಮುದಾಯ ಸರ್ಕಾರದ ಸೌಲಭ್ಯ ಬಳಸಿಕೊಳ್ಳಿ

ಸಂಸದ ಸುನೀಲ್ ಬೋಸ್ ಸಲಹೆ



ಶ್ರೀಮಹರ್ಷಿ ವಾಲ್ಮೀಕಿ ಜಯಂತಿಯನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಿದರು.

ತಿ.ನರಸೀಪುರ, ಅ.17– ವಾಲ್ಮೀಕಿ ಸಮುದಾಯದ ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವ ಮೂಲಕ ಅವರ ಭವಿಷ್ಯ ಕಟ್ಟಿಕೊಡುವ ಕಾರ್ಯವಾಗಬೇಕಾಗಿದೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕು ಆಡಳಿತ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ನಾಯಕರ ಸಂಘದ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಶ್ರೀಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದವರು ಸರ್ಕಾರ ನೀಡುವ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ತಳ ಸಮುದಾಯವಾದ ಈ ಸಮಾಜಕ್ಕೆ ರಾಜಕೀಯವಾಗಿ ಸಿಕ್ಕಿರುವ ಮೀಸಲಾತಿ, ಶಿಕ್ಷಣ ಹಾಗೂ ಉದ್ಯೋಗದಲ್ಲಿ ಸಿಗಬೇಕಾಗಿದೆ ಎಂದರು.

ಮಹರ್ಷಿ ವಾಲ್ಮೀಕಿ ಒಂದು ಸಮುದಾಯಕ್ಕೆ ಸೀಮಿತರಲ್ಲ. ಬದಲಿಗೆ ಇಡೀ ಮನುಕುಲಕ್ಕೆ ಬೇಕಾದ ಮಹಾನ್ ಸಂತ. ರಾಮಾಯಣ ಮಹಾಕಾವ್ಯದ ಮೂಲಕ ನಾವು ಹೇಗೆ ಮೌಲ್ಯಯುತ ಬದುಕು ಕಟ್ಟಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಆ ಮಹಾನ್ ದಾರ್ಶನಿಕರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ನಡೆಯಬೇಕಾಗಿದೆ. ಪ್ರಸ್ತುತ ಮಹನೀಯರ ಜಯಂತಿಗಳು ಕೇವಲ ಒಂದೊಂದೆ ಸಮುದಾಯಕ್ಕೆ ಮೀಸಲಾಗುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು.

ವಾಲ್ಮೀಕಿ ಸಮುದಾಯದ ಬಹುದಿನಗಳ ಬೇಡಿಕೆಯನ್ನು ಸರ್ಕಾರ ಇಂದು ಈಡೇರಿಸಿದೆ. ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಮಹರ್ಷಿ ವಾಲ್ಮೀಕಿ ಪ್ರತಿಮೆ ನಿರ್ಮಾಣಕ್ಕೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೂಮಿ ಪೂಜೆ ನೆರವೇರಿಸಿದ್ದಾರೆ. ಪ್ರತಿಮೆ ನಿರ್ಮಾಣಕ್ಕೆ ಅನುದಾನ ನೀಡಿದ ಸಿಎಂ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರಕ್ಕೆ ಅಭಿನಂದಿಸುತ್ತೇನೆ ಎಂದರು.

ಎಂಎಲ್‌ಸಿ ಡಾ.ಯತೀಂದ್ರ ಮಾತನಾಡಿ, ವಾಲ್ಮೀಕಿ ರಚಿಸಿದ ರಾಮಾಯಣ ಮಹಾಕಾವ್ಯ ಇಡೀ ವಿಶ್ವಕ್ಕೆ ಭಾರತ ನೀಡಿದ ಬಹುದೊಡ್ಡ ಸಾಹಿತ್ಯ ಕೊಡುಗೆಯಾಗಿದೆ. ವಾಲ್ಮೀಕಿ ರಾಮಾಯಣ ದೇಶ–ಭಾಷೆಗೆ ಸೀಮಿತಗೊಳ್ಳದೆ ಜಾಗತಿಕವಾಗಿ ಆರಾಧಿಸಲ್ಪಟ್ಟಿದೆ ಎಂದರು.

ಜನಸಮುದಾಯದ ಎಲ್ಲಾ ಸಮಸ್ಯೆಗಳಿಗೆ ವಾಲ್ಮೀಕಿ ರಾಮಾಯಣದಲ್ಲಿ ಉತ್ತರ ಸಿಗುತ್ತದೆ. ಮಾನವೀಯ ಗುಣಗಳನ್ನು ಮೈಗೂಡಿಸಿಕೊಳ್ಳುವುದು ಸೇರಿದಂತೆ ಉತ್ತಮ ಸಮಾಜ ನಿರ್ಮಾಣದ ಮಹತ್ವದ ಸಂಗತಿಗಳನ್ನು ರಾಮಾಯಣ ಮಹಾಕಾವ್ಯದಿಂದ ನಾವು ಕಲಿಯಬಹುದಾಗಿದೆ. ಜಾತಿ, ಧರ್ಮದ ಹೆಸರಿನಲ್ಲಿ ಮನುಷ್ಯರ ನಡುವಿನ ಸಂಬಂಧಗಳು ಕುಸಿಯುತ್ತಿರುವ ಪ್ರಸ್ತುತ ದಿನಗಳಲ್ಲಿ ಮಹರ್ಷಿ ವಾಲ್ಮೀಕಿ ರಚಿಸಿದ ಮಹಾಕಾವ್ಯ ದಾರಿದೀಪವಾಗಿ ತೋರುತ್ತದೆ ಎಂದ ಅವರು ಪಟ್ಟಣದಲ್ಲಿ ನಿರ್ಮಿಸುತ್ತಿರುವ ವಾಲ್ಮೀಕಿ ಭವನದ ಮುಂದುವರೆದ ಕಾಮಗಾರಿಗೆ ಬೇಕಾದ ಅನುದಾನ ಕೊಡಿಸುವುದಾಗಿ ಭರವಸೆ ನೀಡಿದರು.

ಹುಣಸೂರಿನ ಸರ್ಕಾರಿ ಮಹಿಳಾ ಕಾಲೇಜು ಪ್ರಾಧ್ಯಾಪಕ ಡಾ.ನಂಜುಂಡಸ್ವಾಮಿ ಮುಖ್ಯ ಭಾಷಣ ಮಾಡಿದರು. ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧಕರು, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಯಂತಿ ಸಮಿತಿ ಅಧ್ಯಕ್ಷ ಹೊನ್ನನಾಯಕ, ಮೈಮುಲ್ ಅಧ್ಯಕ್ಷ ಚೆಲುವರಾಜು, ಲಕ್ಷ್ಮಿನಾರಾಯಣ, ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್, ಪ.ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎನ್.ಕೋಮಲ, ಪುರಸಭಾಧ್ಯಕ್ಷೆ ಬಿ.ವಸಂತ, ಸದಸ್ಯರಾದ ಸಿ.ಪ್ರಕಾಶ್, ಟಿ.ಎಂ.ನಂಜುಂಡಸ್ವಾಮಿ, ಎಲ್.ಮಂಜುನಾಥ್, ಎನ್.ಸೋಮು, ಮಾಜಿ ಸದಸ್ಯ ರಾಘವೇಂದ್ರ, ಜಿಪಂ ಮಾಜಿ ಸದಸ್ಯರಾದ ಸುಧಾಮಣಿ, ರೇಣುಕಾ, ರಾಷ್ಟ್ರಪ್ರಶಸ್ತಿ ವಿಜೇತ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ನಾಗರಾಜು, ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ತಾಪಂ ಮಾಜಿ ಸದಸ್ಯ ನರಸಿಂಹ ಮಾದನಾಯಕ, ಬಿ.ಮರಯ್ಯ, ಶಿವರಾಮು, ಗ್ರಾಪಂ ಮಾಜಿ ಅಧ್ಯಕ್ಷ ರಾಜೇಶ್, ಡೈರಿ ಅಧ್ಯಕ್ಷ ಕುಮಾರ್, ಸಿದ್ದರಾಜು, ಗಣೇಶ್, ಕುಮಾರಸ್ವಾಮಿ, ಶಿವಶಂಕರ ಮೂರ್ತಿ, ನಾಗರಾಜು, ಬಸವರಾಜು, ನಾಗರಾಜು, ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್, ಶಂಕರ್, ಪ್ರಸಾದ್ ನಾಯಕ್, ಗೋವಿಂದ, ಡಾ.ಮಹದೇವಯ್ಯ, ಶಶಿಧರ್, ರಾಜು, ಹೊನ್ನಯ್ಯ, ಸಿದ್ದರಾಜು ಸೇರಿದಂತೆ ನಾಯಕ ಸಂಘದ ಪದಾಧಿಕಾರಿಗಳು, ಗ್ರಾಮಸ್ಥರು, ಅಧಿಕಾರಿಗಳು ಹಾಜರಿದ್ದರು.

ಸಂಭ್ರಮದ ಮೆರವಣಿಗೆ

ಪಟ್ಟಣದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಅವರ ಬೃಹತ್ ಭಾವಚಿತ್ರ ಮೆರವಣಿಗೆಗೆ ಎಂಎಲ್‌ಸಿ ಡಾ.ಯತೀಂದ್ರ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನ ಮುಂಭಾಗ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆ ತಾಲೂಕು ಕಚೇರಿ ತಲುಪಿತು. ಈ ವೇಳೆ ವೀರಭದ್ರ ಕುಣಿತ, ತಮಟೆ, ನಗಾರಿ, ನಂದಿ ಕೋಲು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು, ಸ್ತಬ್ಧಚಿತ್ರಗಳು ಪಾಲ್ಗೊಂಡು ಮೆರಗು ನೀಡಿದವು. ವಾಲ್ಮೀಕಿ ಸಮಾಜದ ಮುಖಂಡರು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ವಾಲ್ಮೀಕಿ ರಾಮಾಯಣ ಎಲ್ಲರ ಗೌರವಕ್ಕೆ ಪಾತ್ರ



ವಾಲ್ಮೀಕಿ ಜಯಂತಿಯಲ್ಲಿ ಉಪನ್ಯಾಸಕ ಡಾ.ಪುಟ್ಟನಂಜಯ್ಯ ಮಾತನಾಡಿದರು.

ಹೆಚ್.ಡಿ.ಕೋಟೆ, ಅ.17– ಮಹಾಕವಿ ವಾಲ್ಮೀಕಿ ರಚಿಸಿದ ರಾಮಾಯಣ ಕಾವ್ಯ ಎಲ್ಲರ ಗೌರವಕ್ಕೆ ಪಾತ್ರವಾಗಿದೆ ಎಂದು ಉಪನ್ಯಾಸಕ ಡಾ.ಪುಟ್ಟನಂಜಯ್ಯ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ಶ್ರೀಮಹರ್ಷಿ ವಾಲ್ಮೀಕಿಯವರು ಸಂಸ್ಕೃತದಲ್ಲಿ ಬರೆದ ಕಾವ್ಯದಿಂದಾಗಿ ಸಂಸ್ಕೃತದ ಆದಿಕವಿಯಾಗಿದ್ದಾರೆ. ಶ್ರೀರಾಮನ ಕುರಿತು ಕಥೆಯ ರೂಪದಲ್ಲಿ 24 ಸಾವಿರ ಶ್ಲೋಕಗಳನ್ನು ಒಳಗೊಂಡ ಮಹಾಕಾವ್ಯ ರಚಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ವಾಲ್ಮೀಕಿ, ಅಂಬೇಡ್ಕರ್, ಬಸವಣ್ಣನವರ ಭವನಗಳ ಬದಲು ಗ್ರಂಥಾಲಯಗಳಾಗಬೇಕು. ಆ ಮೂಲಕ ಅವರ ವಿಚಾರಧಾರೆಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಮಹನೀಯರ ಪ್ರತಿಮೆಗಳ ಬದಲಿಗೆ ಅವರ ತತ್ವ ಸಿದ್ಧಾಂತಗಳನ್ನು ಅರಿತು ಹೊಸ ಪ್ರತಿಭೆಗಳು ಹುಟ್ಟಬೇಕು. ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದಲ್ಲಿ ಸಮಾಜದಲ್ಲಿರುವ ಮೌಢ್ಯ, ಕಂದಾಚಾರ, ಅಸಮಾನತೆ ಹೋಗಲಾಡಿಸಬಹುದಾಗಿದೆ. ಕತ್ತಲಿನಿಂದ ಬೆಳಕಿನಕಡೆಗೆ ಪ್ರಕಾಶಿಸುವ ಚಿಂತನೆ ಬುದ್ಧ ಮತ್ತು ವಾಲ್ಮೀಕಿಯವರಾದಗಿತ್ತು ಎಂದು ಶ್ಲಾಘಿಸಿದರು.


ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ರಾಮಾಯಣದಲ್ಲಿ ಅಡಗಿಸಿರುವ ಮೌಲ್ಯಗಳು, ಸಂದೇಶಗಳು ಇಂದಿಗೂ ಪ್ರಸ್ತುತ ಎನಿಸಿವೆ. ರಾಮಾಯಣ ಕುರಿತು ಹಲವು ಗ್ರಂಥಗಳು ಬಂದಿದೆ. ಎಲ್ಲರೂ ಓದದಿದ್ದರೂ ಕಥೆಗಳು ಜನಮಾನಸದಲ್ಲಿ ಉಳಿದಿದೆ. ವಾಲ್ಮೀಕಿ ಜಯಂತಿಯನ್ನು ಸರಳವಾಗಿ ಆಚರಿಸಲಾಗಿದೆ. ಮುಂದಿನ ದಿನದಲ್ಲಿ ಶಾಸಕ ಅನಿಲ್ ಅವರ ತೀರ್ಮಾನದಂತೆ ಸಂಭ್ರಮದಿಂದ ಆಚರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಲೋಕೇಶ್, ವೆಂಕಟೇಶ್, ಆರಕ್ಷಕ ನಿರೀಕ್ಷಕ ಶಬ್ಬೀರ್ ಹುಸೇನ್, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಜಿ.ಆರ್.ಮಹೇಶ್, ಸಿಂಡಿಕೇಟ್ ಸದಸ್ಯ ನಾಗರಾಜು, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಸಿಡಿಪಿಓ ದೀಪಾ, ನೇತ್ರಾವತಿ, ಎಇಇ ವಸಂತಕುಮಾರ್, ಜಗನ್ನಾಥ್, ಮುಖಂಡರಾದ ದೊಡ್ಡನಾಯಕ, ಚಿಕ್ಕವೀರನಾಯಕ, ಶಂಭುಲಿಂಗನಾಯಕ, ಸಿ.ತಿಮ್ಮಯ್ಯ, ಮಂಚಯ್ಯ, ರಾಜನಾಯಕ, ಕೃಷ್ಣ ಅಂಕನಾಯಕ, ಮಹದೇವನಾಯಕ, ಬೆಟ್ಟನಾಯಕ, ನಾಗರಾಜು, ರಾಜಣ್ಣ, ದೇವರಾಜು, ಶಿವಯ್ಯ ಇದ್ದರು.

ಹಳೇ ದ್ವೇಷ: ವ್ಯಕ್ತಿಗೆ ಚಾಕುವಿನಿಂದ ಇರಿತ



ಪ್ರಮೋದ್



ಕುಮಾರ ನಾಯಕ

ಹಿರೀಕ್ಯಾತನಹಳ್ಳಿ, ಅ.17– ಹಳೇ ದ್ವೇಷದ ಹಿನ್ನೆಲೆಯಲ್ಲಿ ವ್ಯಕ್ತಿಯೋರ್ವನಿಗೆ ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನಡೆದಿದೆ.

ಗ್ರಾಮದ ನಿವಾಸಿ, ಕೃಷಿ ಕೂಲಿ ಕಾರ್ಮಿಕ ಪ್ರಮೋದ್ ಅಲಿಯಾಸ್ ರಾಜು(27) ಗಾಯಗೊಂಡವರು. ಗ್ರಾಮದ ಕುರಿ ವ್ಯಾಪಾರಿ ಕುಮಾರ ನಾಯಕ ಚಾಕುವಿನಿಂದ ಇರಿದ ಆರೋಪಿ.

ವಿವರ: ಪ್ರಮೋದ್ ಹಾಗೂ ಕುಮಾರ ನಾಯಕ ನಡುವೆ ಹಳೇ ವೈಷಮ್ಯವಿತ್ತು ಎನ್ನಲಾಗಿದೆ. ಈ ಸಂಬಂಧ ಇಬ್ಬರ ನಡುವೆ ಬುಧವಾರ ಮಾತಿನ ಚಕಮಕಿ ನಡೆದಿತ್ತು. ಆದರೆ ಗುರುವಾರ ಮಧ್ಯಾಹ್ನ 12 ಗಂಟೆ ವೇಳೆಗೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಪ್ರಮೋದ್ ಮೇಲೆ ಕುಮಾರ ನಾಯಕ ಏಕಾಏಕಿ ದಾಳಿ ನಡೆಸಿ ಎಡಗೈ ಭಾಗಕ್ಕೆ ಚಾಕುವಿನಿಂದ ಇರಿದಿದ್ದಾನೆ. ಈ ವೇಳೆ ಸಾವಿನ ದವಡೆಯಿಂದ ಬದುಕುಳಿಯಲು ಪ್ರಯತ್ನಿಸಿದ ಪ್ರಮೋದ್ ಹತ್ತಿರದ ಅಂಗಡಿಗಳತ್ತ ಓಡಿದ್ದಾನೆ. ಈ ಸಂದರ್ಭ ಸ್ಥಳೀಯರು ಆತನನ್ನು ರಕ್ಷಿಸಿ ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಾಕುವಿನಿಂದ ಇರಿದು ಪರಾರಿಯಾಗಲು ಯತ್ನಿಸಿದ ಆರೋಪಿ ಕುಮಾರ ನಾಯಕನನ್ನು ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ಗ್ರಾಮಾಂತರ ಠಾಣೆ ಸಿಪಿಐ ಮುನಿಯಪ್ಪ ಹಾಗೂ ಸಿಬ್ಬಂದಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರೈಲಿಗೆ ಸಿಲುಕಿ ಯುವಕ ಸಾವು

ನಂಜನಗೂಡು, ಅ.17– ಬೆಂಗಳೂರು– ಚಾಮರಾಜನಗರ ಪ್ಯಾಸೆಂಜರ್ ರೈಲಿಗೆ ಸಿಲುಕಿ ಯುವಕ ಮೃತಪಟ್ಟಿರುವ ಘಟನೆ ತಾಲೂಕಿನ ದೇವರಸನಹಳ್ಳಿ ರೈಲ್ವೆ ಗೇಟ್ ಬಳಿ ಜರುಗಿದೆ. ಹಸುವಿನಹಳ್ಳಿ ಗ್ರಾಮದ ಶಿವು (20) ಮೃತಪಟ್ಟವರು. ಯುವಕನ ಸಾವಿಗೆ ಕಾರಣ ತಿಳಿದು ಬಂದಿಲ್ಲ ಎಂದು ರೈಲ್ವೆ ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಸಂಬಂಧ ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪತ್ನಿ ಅಕ್ರಮ ಸಂಬಂಧ: ಪತಿ ಆತ್ಮಹತ್ಯೆ


ಮಲ್ಕುಂಡಿ, ಅ.17– ಪತ್ನಿ ಅಕ್ರಮ ಸಂಬಂಧ ಹೊಂದಿದ್ದರಿಂದ ಮನನೊಂದ ಪತಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಪಾರ್ವತಿಪುರದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಮರಿಸ್ವಾಮಿ(42) ಆತ್ಮಹತ್ಯೆ ಮಾಡಿಕೊಂಡವರು. ಈತನ ಪತ್ನಿ ಭಾಗ್ಯಮ್ಮ ಹೊಸ ಬಿರ್ವಾಳು ಗ್ರಾಮದ ದೊಡ್ಡಯ್ಯ ಎಂಬಾತನನ್ನು ಪ್ರೀತಿಸುತ್ತಿದ್ದು, ಇವರಿಬ್ಬರ ನಡುವೆ ಅಕ್ರಮ ಸಂಬಂಧವಿತ್ತು ಎನ್ನಲಾಗಿದೆ. ಬುಧವಾರ ರಾತ್ರಿ ಭಾಗ್ಯಮ್ಮ ಹಾಗೂ ದೊಡ್ಡಯ್ಯ ಇಬ್ಬರೂ ಒಟ್ಟಿಗೆ ಇರುವುದನ್ನು ಕಂಡ ಮರಿಸ್ವಾಮಿ ಮನನೊಂದು ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಸಿದ ಹುಲ್ಲಹಳ್ಳಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಭಾಗ್ಯಮ್ಮ ಹಾಗೂ ದೊಡ್ಡಯ್ಯ ಅವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಾಯಿಗಳ ಸಂತಾನ ಹರಣ ಶಸ್ತ್ರಚಿಕಿತ್ಸೆಗೆ 9.73 ಲಕ್ಷ ಪಾವತಿ

ನಂಜನಗೂಡು, ಅ.17– ನಗರಸಭೆ ಆಡಳಿತಾಧಿಕಾರಿಗಳ ಅವಧಿಯಲ್ಲಿ ನಾಯಿಗಳ ಸಂತಾನ ಹರಣ ಶಸ್ತ್ರಚಿಕಿತ್ಸೆಗಾಗಿ 10 ಲಕ್ಷ ಅನುದಾನ ಮೀಸಲಿಡಲಾಗಿತ್ತು. ಹೀಗಾಗಿ 590 ನಾಯಿಗಳನ್ನು ಹಿಡಿದು ಚಿಕಿತ್ಸೆ ನಡೆಸಿದ ರೋಟ ಎನ್‌ಜಿಓ ಸಂಸ್ಥೆಗೆ 9.75 ಲಕ್ಷ ಪಾವತಿಸಲಾಗಿದೆ ಎಂದು ನಗರಸಭೆ ಪ್ರಕಟಣೆ ತಿಳಿಸಿದೆ. ಅ.15ರಂದು ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯರಾದ ಕಪಿಲೇಶ್ ಹಾಗೂ ಸಿದ್ದರಾಜು ನಾಯಿ ಹಿಡಿಯಲು ಹಾಗೂ ನಗರಸಭೆ ವಾಹನಗಳ ವಿಮೆಗಾಗಿ ತಲಾ 40 ಲಕ್ಷ ಖರ್ಚು ಮಾಡಲಾಗಿದೆ ಎಂದು ಆಪಾದಿಸಿದ್ದರು. ಸಭೆಯಲ್ಲಿ ಸದಸ್ಯರಿಗೆ ನಾಯಿಗಳನ್ನು ಹಿಡಿದು ಶಸ್ತ್ರ ಚಿಕಿತ್ಸೆ ಕೈಗೊಳ್ಳಲು 9.73 ಲಕ್ಷ ಹಾಗೂ 38 ವಾಹನಗಳ ವಿಮೆಗಾಗಿ 7.56 ಲಕ್ಷ ಖರ್ಚು ಮಾಡಲಾಗಿದೆ. ಈ ಸಂಬಂಧ ಸದಸ್ಯರಿಗೆ ಖರ್ಚು – ವೆಚ್ಚಗಳ ರಶೀದಿಗಳನ್ನು ನೀಡಲಾಗಿದೆ ಎಂದು ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಆಯುಕ್ತ ನಂಜುಂಡಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಾಲ್ಮೀಕಿ ಜಯಂತಿ



ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಪ್ರೌಢಶಾಲಾ ವಿಭಾಗದ ಎಸ್‌ಡಿಎಂಸಿ ಅಧ್ಯಕ್ಷ ಎಂ.ರಂಗಸ್ವಾಮಿ ಹಾಗೂ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಯುವ ಪೀಳಿಗೆಗೆ ಮಹನೀಯರ ವಿಚಾರಧಾರೆ ತಿಳಿಸಿ

ವಾಲ್ಮೀಕಿ ಜಯಂತಿಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ



ಹುಣಸೂರಿನ ತಾಲೂಕು ಕಚೇರಿಯಲ್ಲಿ ವಾಲ್ಮೀಕಿ ಜಯಂತಿ ನಡೆಯಿತು.

ಹುಣಸೂರು, ಅ.17– ದೇಶಕ್ಕೆ ಕೊಡುಗೆ ನೀಡಿದ ಮಹನೀಯರ ವಿಚಾರಧಾರೆಯನ್ನು ಯುವ ಪೀಳಿಗೆಗೆ ಅರ್ಥಪೂರ್ಣವಾಗಿ ತಿಳಿಸಿದಾಗ ಮಾತ್ರ ಅವರಿಗೆ ಗೌರವ ಸಿಗಲು ಸಾಧ್ಯ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತದಿಂದ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ದೇಶ ಮತ್ತು ವಿಶ್ವಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ವರ್ಷಕ್ಕೆ ಒಮ್ಮೆ ಮಾತ್ರ ನೆನೆಯದೆ ನಿರಂತರವಾಗಿ ನೆನೆಯುತ್ತಾ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕಿದೆ ಎಂದರು.

ವಾಲ್ಮೀಕಿ ಅವರು ಮಹಾಕಾವ್ಯ ರಾಮಾಯಣ ರಚಿಸುವ ಮೂಲಕ ವಿಶ್ವಜ್ಞಾನಿಯಾಗಿದ್ದಾರೆ. ಇಂತಹ ಮಹನೀಯರನ್ನು ಜಾತಿಯ ಸಂಕೋಲೆಯಲ್ಲಿ ಬಂಧಿಸದೇ ವಿಶ್ವಮಾನವರಾಗಿ ನೋಡಬೇಕಿದೆ ಎಂದರು.

ಉಪವಿಭಾಗಾಧಿಕಾರಿ ವಿಜಯಕುಮಾರ್ ಮಾತನಾಡಿ, ಮಹನೀಯರು ಬಿಟ್ಟು ಹೋದ ಆದರ್ಶ, ಮೌಲ್ಯಗಳನ್ನು ಮೈಗೂಡಿಸಿಕೊಂಡು ಅದರಂತೆ ನಡೆದರೆ ನಮ್ಮ ಜೀವನ ಸಾರ್ಥಕವಾಗಲಿದೆ ಎಂದರು.

ತಾಲೂಕು ನಾಯಕರ ಸಂಘದ ಕಾರ್ಯದರ್ಶಿ ರವಿ ಮಾತನಾಡಿ, ಅನೇಕ ಮಹನೀಯರು ಮನುಕುಲಕ್ಕೆ ಜ್ಞಾನದ ಬುತ್ತಿ ನೀಡಿದ್ದಾರೆ. ಅದನ್ನು ತೆರೆದು ನಮ್ಮಲ್ಲಿರುವ ಅಜ್ಞಾನ ಹೋಗಲಾಡಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಹಸೀಲ್ದಾರ್ ಮಂಜುನಾಥ್ ಮಾತನಾಡಿದರು. ಕಾರ್ಯಕ್ರಮದಲ್ಲಿ ನಗರಸಭಾಧ್ಯಕ್ಷ ಶರವಣ, ಉಪಾಧ್ಯಕ್ಷೆ ಆಶಾ, ಇಓ ಹೊಂಬಯ್ಯ, ಬಿಇಓ ಮಹದೇವ್, ಪೌರಾಯುಕ್ತೆ ಮಾನಸ, ಸಿಪಿಐ ಸಂತೋಷ್ ಕಶ್ಯಪ್, ಸಮಾಜ ಕಲ್ಯಾಣಾಧಿಕಾರಿ ಅರುಣ್ ಕುಮಾರ್, ಶಿವಣ್ಣ, ದೇವನಾಯ್ಕ, ರೈತ ಸಂಘದ ಅಧ್ಯಕ್ಷ ಕುಮಾರ್, ದಲಿತ ಮುಖಂಡ ನಿಂಗರಾಜ ಮಲ್ಲಾಡಿ, ಪ್ರಸನ್ನ, ನಾಯಕ ಸಮಾಜದ ಕಾಳಿದಾಸ ನಾಯಕ, ದೇವರಾಜು, ಪ್ರಭಾಕರ್, ಶಿವಣ್ಣ, ಶ್ರೀಧರ್, ದಾಸೇಗೌಡ, ರಾಷ್ಟ್ರೀಯ ಹಬ್ಬಗಳ ಸಮಿತಿ ಜಯರಾಂ, ರಾಚಪ್ಪ, ಭಾಸ್ಕರ್ ಇದ್ದರು.

ಯುವ ಪೀಳಿಗೆ ರಾಮಾಯಣದ ಮೌಲ್ಯಗಳನ್ನು ಅಳವಡಿಸಿಕೊಳ್ಳಿ



ತಿ.ನರಸೀಪುರ ಪುರಸಭೆ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ ನಡೆಯಿತು.

ತಿ.ನರಸೀಪುರ, ಅ.17– ಮಹರ್ಷಿ ವಾಲ್ಮೀಕಿ ರಚಿಸಿರುವ ರಾಮಾಯಣದಲ್ಲಿ ಅಡಕವಾಗಿರುವ ಪಿತೃವಾಕ್ಯ ಪರಿಪಾಲನೆ ಹಾಗೂ ಸೋದರ ಬಾಂಧವ್ಯ ಸಂಬಂಧಗಳ ಮೌಲ್ಯಗಳನ್ನು ಯುವ ಪೀಳಿಗೆ ಅಳವಡಿಸಿಕೊಳ್ಳಬೇಕು ಎಂದು ಪುರಸಭಾಧ್ಯಕ್ಷೆ ವಸಂತ ತಿಳಿಸಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ಸೂರ್ಯ ಚಂದ್ರ ಇರುವವರೆಗೂ ರಾಮಾಯಣ ಮಹಾಕಾವ್ಯ ಜಗತ್ತಿನಲ್ಲಿ ಅಮರ ಕಾವ್ಯವಾಗಿರುತ್ತದೆ ಎಂದರು.

ಪುರಸಭಾ ಸದಸ್ಯ ಸಿ.ಪ್ರಕಾಶ್ ಮಾತನಾಡಿ, ರಾಮಾಯಣ ದೇಶದ ಅತಿದೊಡ್ಡ ಮಹಾ ಕಾವ್ಯವಾಗಿದ್ದು, ಇದರಲ್ಲಿ ಭಾರತದ ಜೀವನ ಚರಿತ್ರೆ, ಸಂಸ್ಕೃತಿ ಅಡಗಿದೆ. ವಾಲ್ಮೀಕಿ ಅವರು ತಪಸ್ಸಿನ ಶಕ್ತಿಯಿಂದ ಮಹಾಕಾವ್ಯ ರಚಿಸಿದ್ದಾರೆ. ರಾಮಾಯಣ ಪ್ರಪಂಚದಲ್ಲೇ ಶ್ರೇಷ್ಠ ಕಾವ್ಯ ಆಗಿದೆ ಎಂದರು.

ಪುರಸಭೆ ಮುಖ್ಯಧಿಕಾರಿ ಬಿ.ಕೆ.ವಸಂತ ಕುಮಾರಿ, ಉಪಾಧ್ಯಕ್ಷೆ ರಾಜೇಶ್ವರಿ, ಮಾಜಿ ಅಧ್ಯಕ್ಷ ಟಿ.ಎಂ.ನಂಜುಡಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಸದಸ್ಯರಾದ ಎಸ್.ಕೆ.ಕಿರಣ್, ಎಲ್.ಮಂಜು ನಾಥ್, ಮೆಡಿಕಲ್ ನಾಗರಾಜು, ಸಿದ್ದು, ತೇಜಸ್ವಿನಿ, ರೂಪ, ಎಸ್.ಡಿ.ಎ. ರಾಜೇಂದ್ರ, ಸಮುದಾಯ ಸಂಘಟಕ ಮಹದೇವನಾಯಕ, ಆರೋಗ್ಯ ಅಧಿಕಾರಿ ಮಧು, ವ್ಯವಸ್ಥಾಪಕ ಮಹೇಂದ್ರ, ಜೆಇ ನಾಗರಾಜು, ಕೃಷ್ಣಪ್ಪ, ಸಿದ್ದಪ್ಪ, ಮುಖಂಡರಾದ ಶ್ರೀಕಂಠ, ಮಾದೇಶ ಮತ್ತಿತರರು ಹಾಜರಿದ್ದರು.

ಸರಗೂರಲ್ಲಿ ಶ್ರೀವಾಲ್ಮೀಕಿ ಜಯಂತಿ



ಸರಗೂರಲ್ಲಿ ಶ್ರೀವಾಲ್ಮೀಕಿ ಜಯಂತಿ ನಡೆಯಿತು.

ಸರಗೂರು, ಅ.17– ವಾಲ್ಮೀಕಿ ಮಹರ್ಷಿ ವ್ಯಕ್ತಿ ರೂಪವಾದರೂ, ದೈವ ಪುರುಷರು ಎಂದು ತಹಸೀಲ್ದಾರ್ ರುಕಿಯಾ ಬೇಗಂ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ಬರೆದಿರುವ ರಾಮಾಯಣ, ಮಹಾಭಾರತ ಮಹಾಗ್ರಂಥಗಳನ್ನು ಅಧ್ಯಯನ ಮಾಡುವ ಮೂಲಕ ಪ್ರತಿಯೊಬ್ಬರೂ ಬದುಕು ಕಟ್ಟಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ವಾಲ್ಮೀಕಿ ಹಾಗೂ ಶ್ರೀರಾಮ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು. ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ನೂರಾಳಸ್ವಾಮಿ, ಚಲುವ ಕೃಷ್ಣ, ನಾಯಕ ಸಮಾಜದ ವೆಂಕಟೇಶ್ ನಾಯಕ, ನವೀನ್ ಕುಮಾರ್, ಮಾಜಿ ಯಜಮಾನ ಚನ್ನಪ್ಪನಾಯಕ, ಬಸವ ನಾಯಕ, ತ್ರಿಮಸ್ಥ ಬ್ರಾಹ್ಮಣ ಸಂಘದ ಗೌರವಾಧ್ಯಕ್ಷ ಎಸ್.ಎ.ಸಾಂಬವ ಮೂರ್ತಿ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಮುಖಂಡರಾದ ಎಸ್.ಎ.ನಾಗೇಂದ್ರ, ಹೆಚ್.ಎಸ್.ರಮೇಶ್, ಎಸ್.ಕೆ.ಕುಮಾರ್, ಸುರೇಶ್‌ನಾಯಕ, ಎಂ.ನಾಗರಾಜು, ವೆಂಕಟಾಚಲನಾಯಕ, ಬಜರಂಗದಳ ರಾಮು, ಶ್ರೀನಾಥ್, ತಾಲೂಕು ಇಲಾಖಾಧಿಕಾರಿಗಳು, ಸಾರ್ವಜನಿಕರು ಹಾಜರಿದ್ದರು.

ಮಹರ್ಷಿ ವಾಲ್ಮೀಕಿ ಜಯಂತಿ



ಮೈಸೂರು ತಾಲೂಕಿನ ನಾಗವಾಲ ಗ್ರಾಪಂನಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ, ಗ್ರಾಪಂ ಅಧ್ಯಕ್ಷೆ ಕಾಮಾಕ್ಷಮ್ಮ, ಉಪಾಧ್ಯಕ್ಷೆ ಗೌರಮ್ಮ, ಸದಸ್ಯೆ ಯಶೋಧಮ್ಮ, ಸೀಗಳ್ಳಿ ಕುಮಾರ್, ಡಿಸಿಸಿ ಎಸ್‌ಟಿ ವಿಭಾಗದ ಜಿಲ್ಲಾಧ್ಯಕ್ಷ ಕೆ.ಮಹೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಶಾಂತ್, ಯಜಮಾನರಾದ ಡೈರಿ ಕುಮಾರ್, ಪ್ರಕಾಶ್, ಜವರನಾಯಕ, ನಾಗಣ್ಣ, ಗ್ರಾಪಂ ಕಾರ್ಯದರ್ಶಿ ಯಶ್ವಂತ್, ಶ್ರೀಧರ್, ಪಾಪನಾಯಕ, ಗಾಮಸ್ಥರು ಹಾಜರಿದ್ದರು.

ವಾಲ್ಮೀಕಿ ತತ್ವಾದರ್ಶ ಸರ್ವ ಕಾಲಕ್ಕೂ ಸಲ್ಲುವಂತಹುದು

ಶಾಸಕ ದರ್ಶನ್ ಅಭಿಮತ



ಕಾರ್ಯಕ್ರಮವನ್ನು ಎಂಎಲ್‌ಸಿ ಡಾ.ಯತೀಂದ್ರ ಉದ್ಘಾಟಿಸಿದರು.

ನಂಜನಗೂಡು, ಅ.17– ಮಹರ್ಷಿ ವಾಲ್ಮೀಕಿ ಅವರು ಪಿತೃವಾಕ್ಯ ಪರಿಪಾಲನೆ, ಸೋದರ ಪ್ರೇಮ ಮುಂತಾದ ಜೀವನ ಮೌಲ್ಯಗಳನ್ನು ರಾಮಾಯಣದ ಮೂಲಕ ಪ್ರಸ್ತುತಪಡಿಸಿದ್ದಾರೆ. ರಾಮಾಯಣದ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಡೆದಲ್ಲಿ ಸಮಾಜವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ನಿರ್ಮಿಸಬಹುದು ಎಂದು ಶಾಸಕ ದರ್ಶನ್ ತಿಳಿಸಿದರು.

ಗುರುವಾರ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಮತ್ತು ತಾಲೂಕು ಆಡಳಿತದಿಂದ ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ ಅವರ ತತ್ವಾದರ್ಶಗಳು ಸರ್ವ ಕಾಲಕ್ಕೂ ಸಲ್ಲುವಂತಹುದು ಎಂದರು.

2019ರಲ್ಲಿ ವಾಲ್ಮೀಕಿ ಜಯಂತಿ ಮೆರವಣಿಗೆ ವೇಳೆ ನಡೆದ ಗಲಾಟೆಯಲ್ಲಿ ನಾಯಕ ಸಮುದಾಯದ 38 ಯುವಕರ ಮೇಲೆ ಮೊಕದ್ದಮೆ ದಾಖಲಾಗಿತ್ತು. ಕ್ಷುಲ್ಲಕ ಕಾರಣಕ್ಕೆ ನಡೆದ ಗಲಾಟೆಯಲ್ಲಿ ಹಲವು ವಿದ್ಯಾರ್ಥಿಗಳ ಮೇಲೂ ಮೊಕದ್ದಮೆ ದಾಖಲಾಗಿತ್ತು. ಕಳೆದ ವರ್ಷದ ಜಯಂತಿಯಲ್ಲಿ ನಾಯಕ ಸಮುದಾಯದ ಮುಖಂಡರ ಮನವಿ ಮೇರೆಗೆ ಸಿಎಂ ಸಿದ್ದರಾಮಯ್ಯನವರ ಗಮನಕ್ಕೆ ತಂದ ಪರಿಣಾಮ ಸರ್ಕಾರ ಮೊಕದ್ದಮೆಗಳನ್ನು ಹಿಂದೆ ಪಡೆದಿದೆ. ಅಲ್ಲದೇ ನಗರದ ಬೈಪಾಸ್ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ವಾಲ್ಮೀಕಿ ಭವನನಕ್ಕೆ ಈಗಾಗಲೇ 25 ಲಕ್ಷ ಅನುದಾನ ನೀಡಲಾಗಿದೆ. ಶೀಘ್ರ ಇನ್ನೂ 50 ಲಕ್ಷ ಅನುದಾನ ತಂದು ಭವನವದ ಉಳಿದ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗುವುದು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಎಂಎಲ್‌ಸಿ ಡಾ.ಯತೀಂದ್ರ, ಕಾಂಗ್ರೆಸ್ ಸರ್ಕಾರ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವರ್ಗಗಳ ಪರವಾಗಿದ್ದು, ಶೋಷಿತರಿಗೆ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡುತ್ತಿದೆ. ಭಾರತೀಯ ಸಂಸ್ಕೃತಿ, ಪರಂಪರೆ, ಮೌಲ್ಯಗಳನ್ನು ಪ್ರತಿಪಾದಿಸುವ ರಾಮಾಯಣ ಮಹಾಕಾವ್ಯವನ್ನು ರಚಿಸಿದ ಮಹರ್ಷಿ ವಾಲ್ಮೀಕಿಯವರ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ನಮ್ಮ ಸಂಸ್ಕೃತಿ ಉಳಿಯುತ್ತದೆ. ನಾಯಕ ಸಮುದಾಯ ಜನಸಂಖ್ಯೆಗೆ ಅನುಗುಣವಾಗಿ ಶೇ.7ರಷ್ಟು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವಂತೆ ನಡೆಸಿದ ಹೋರಾಟಕ್ಕೆ ಕಾಂಗ್ರೆಸ್ ಬೆಂಬಲ ನೀಡಿತ್ತು. ಹಿಂದುಳಿದ ವರ್ಗಗಳು ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಮುಂದುವರೆದಾಗ ಮಾತ್ರ ಸಮಾನತೆಯ ಬದುಕು ಸಾಧ್ಯ ಎಂದರು.

ಮೈಸೂರಿನ ಮುಕ್ತ ವಿವಿ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಮಾತನಾಡಿದರು. ಇದಕ್ಕೂ ಮುನ್ನ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಶ್ರೀಕಂಠೇಶ್ವರಸ್ವಾಮಿ ದೇವಾಲಯದವರೆಗೆ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ವಿವಿಧ ಜನಪದ ಕಲಾ ತಂಡಗಳು, ಸ್ತಬ್ಧ ಚಿತ್ರಗಳೊಂದಿಗೆ ಉತ್ಸಾಹದಿಂದ ಭಾಗವಹಿಸಿದ್ದವು.

ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಬಿ.ಹರ್ಷವರ್ಧನ್, ತಾಲೂಕು ನಾಯಕರ ಸಂಘದ ಗೌರವ ಅಧ್ಯಕ್ಷ ಚಿಕ್ಕರಂಗನಾಯಕ, ಅಧ್ಯಕ್ಷ ಬಂಗಾರಸ್ವಾಮಿ, ನಾಯಕ ಸಂಘದ ಜಿಲ್ಲಾ ಉಪಾಧ್ಯಕ್ಷ ಸುಬ್ಬಣ್ಣ, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹೆನುಬಾನು, ಕಾಂಪೋಸ್ಟ್ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಜಿಪಂ ಮಾಜಿ ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠ ನಾಯಕ, ಸಿಎಂ ಶಂಕರ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಚಾಮರಾಜು, ಮುಖಂಡರಾದ ದೊರೆಸ್ವಾಮಿ ನಾಯಕ, ಶ್ರೀನಿವಾಸ ಮೂರ್ತಿ, ಮಹದೇವಸ್ವಾಮಿ, ರವೀಂದ್ರ, ರವಿಕುಮಾರ್, ಮಹೇಶ್, ನಾಗೇಂದ್ರ, ರಂಗಸ್ವಾಮಿ, ಚಂದ್ರು, ನಾಯಕ, ಕುಮಾರ್, ರಾಜು, ನಗರಸಭಾ ಸದಸ್ಯರಾದ ಗಂಗಾಧರ್, ಮಹದೇವ ಪ್ರಸಾದ್, ಕೆ.ಎಂ.ಬಸವರಾಜು, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್, ತಾಪಂ ಇಓ ಜೆರಾಲ್ಡ್ ರಾಜೇಶ್, ನಗರಸಭೆ ಆಯುಕ್ತ ನಂಜುಂಡಸ್ವಾಮಿ ಇನ್ನಿತರರಿದ್ದರು.

ಇದುವರೆಗಿನ 413 ದಸರಾಗಳಿಗಿಂತ ಈ ಬಾರಿಯದ್ದೇ ಅದ್ಧೂರಿ ದಸರಾ

ಈ ಸಾಲಿನ ಯಶಸ್ವಿ ದಸರಾ ಸಂಬಂಧ ಉಸ್ತುವಾರಿ ಸಚಿವ ಡಾ. ಮಹದೇವಪ್ಪ ಸಂತಸ


ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಚಿತ್ರದಲ್ಲಿ ಸಚಿವ ಕೆ.ವೆಂಕಟೇಶ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಎಸ್ಪಿ ವಿಷ್ಣುವರ್ಧನ್, ಜಿ.ಪಂ.ಸಿಇಓ ಕೆ.ಎಂ.ಗಾಯತ್ರಿ ಅವರನ್ನು ಕಾಣಬಹುದು.

ಮೈಸೂರು, ಅ.17(ಎಂಟಿವೈ)– ಈ ಬಾರಿಯ ದಸರಾ ಮಹೋತ್ಸವ ಜನರ ಕಾರ್ಯಕ್ರಮವಾಗಿ ಆಚರಿಸಲ್ಪಟ್ಟಿದ್ದು, ವಿವಿಧ ಕಾರ್ಯಕ್ರಮಗಳ ಮೂಲಕ ಮೈಸೂರಿನ ಸಾಂಸ್ಕೃತಿಕ ಹಿರಿಮೆ, ಗರಿಮೆಯನ್ನು ವಿಶ್ವಕ್ಕೆ ತೋರಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಂತಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ದಸರಾ ಸಂಬಂಧ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ಎಲ್ಲಾ ಡ್ಯಾಂಗಳು ತುಂಬಿರುವುದರಿಂದ ಅದ್ಧೂರಿಯಾಗಿ ದಸರಾ ಆಚರಿಸಲು ಸಿಎಂ ಸಿದ್ದರಾಮಯ್ಯ ನೇತೃತ್ವದ ಉನ್ನತ ಮಟ್ಟದ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಅದರಂತೆ ಈ ಬಾರಿಯ ದಸರಾ ವೈಭವಯುತವಾಗಿ ನಡೆದಿದೆ. ಉದ್ಘಾಟನೆಯಿಂದ ಜಂಬೂಸವಾರಿವರೆಗೆ ಲಕ್ಷಾಂತರ ಜನರು ಮೈಸೂರಿಗೆ ಭೇಟಿ ನೀಡಿದ್ದಾರೆ. ಪ್ರತಿಯೊಂದು ಕಾರ್ಯಕ್ರಮದಲ್ಲೂ ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ಜನ ಭಾಗಿಯಾಗಿದ್ದು, ಜನರ ದಸರಾ ಆಗಿ ಆಚರಣೆಯಾಗಿದೆ ಎಂದರು.

ನಾನು ಈ ಹಿಂದೆ ಹಾಗೂ ಈಗ ಸಚಿವನಾಗಿ ಐದು ದಸರಾ ಆಚರಿಸಿದ್ದೇನೆ. ಆದರೆ, ಇಷ್ಟೊಂದು ಅದ್ಧೂರಿಯಾಗಿ ಯಾವ ವರ್ಷವೂ ದಸರಾ ಆಚರಿಸಿಲ್ಲ. ಇದುವರೆಗಿನ 413 ದಸರಾಗಳಿಗಿಂತ ಈ ಬಾರಿಯ 414ನೇ ದಸರಾ ನಾಡಿನ ಜನರೆಲ್ಲಾ ಮಾತನಾಡಿಕೊಳ್ಳುವ ರೀತಿಯಲ್ಲಿ ಯಶಸ್ವಿಯಾಗಿದೆ. ವಿಭಿನ್ನ, ವಿಶಿಷ್ಟ ಕಾರ್ಯಕ್ರಮಗಳು ಜನರನ್ನು ಆಕರ್ಷಿಸಿವೆ. ಧಾರ್ಮಿಕ, ಸಂಗೀತ, ಕ್ರೀಡಾಭಿಮಾನಿಗಳು, ಸಾಹಿತ್ಯ ಪ್ರಿಯರು ಸೇರಿದಂತೆ ಎಲ್ಲಾ ವರ್ಗದವರಿಗೂ ಬೇಕಾದ ಕಾರ್ಯಕ್ರಮಗಳು ಈ ಬಾರಿ ನಡೆದಿವೆ. ಇದರಿಂದಾಗಿ ದಸರಾ ಜನರ ಹಬ್ಬವಾಗಿ ಪರಿವರ್ತನೆಯಾಯಿತು. ರಾಜ್ಯ ಸರ್ಕಾರಕ್ಕೆ ಕಿರೀಟ ಇಟ್ಟಂತೆ ಈ ಬಾರಿಯ ದಸರಾ ನಡೆದಿದೆ ಎಂದು ಅಭಿಪ್ರಾಯಪಟ್ಟರು.

ದಸರಾ ಮಹೋತ್ಸವದ ಯಶಸ್ವಿಗಾಗಿ 19 ಉಪ ಸಮಿತಿಗಳನ್ನು ರಚಿಸಲಾಗಿತ್ತು. ಎಲ್ಲಾ ಉಪಸಮಿತಿಗಳು ಅಚ್ಚುಕಟ್ಟಾಗಿ ತಮ್ಮ ತಮ್ಮ ಕಾರ್ಯ ನಿರ್ವಹಿಸಿವೆ. ಮೈಸೂರು–ಚಾಮರಾಜನಗರದ ಎಲ್ಲಾ ಶಾಸಕರು ಪಕ್ಷಭೇದ ಮರೆತು ಭಾಗವಹಿಸಿದ್ದಾರೆ. ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರಿಂದ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ದೊಡ್ಡ ಉತ್ಸವ ಆಚರಣೆ ಮಾಡುವಾಗ ಸಣ್ಣಪುಟ್ಟ ವ್ಯತ್ಯಾಸಗಳಾಗುವುದು ಸಹಜ. ಮುಂದಿನ ವರ್ಷ ಅವುಗಳೆಲ್ಲವನ್ನು ಸರಿಪಡಿಸಿಕೊಂಡು ಅತ್ಯುತ್ತಮವಾಗಿ ಆಯೋಜನೆ ಮಾಡಲಾಗುವುದು ಎಂದರು.

ಪ್ರವಾಸೋದ್ಯಮ ಚೇತರಿಕೆ: ನಾಡಹಬ್ಬ ದಸರಾ ಕಣ್ತುಂಬಿಕೊಳ್ಳಲು ಮೈಸೂರಿಗೆ ವಿಶ್ವದ ನಾನಾ ಮೂಲೆಗಳಿಂದ ಲಕ್ಷಾಂತರ ಪ್ರವಾಸಿಗರು ಭೇಟಿ ನೀಡಿದ್ದಾರೆ. ಹೋಟೆಲ್ ಉದ್ಯಮ 100 ಕೋಟಿಗೂ ಹೆಚ್ಚು ವಹಿವಾಟು ನಡೆಸಿ, ಪ್ರವಾಸೋದ್ಯಮಕ್ಕೆ ಹೊಸ ಭಾಷ್ಯ ಬರೆದಿದೆ. ಮೈಸೂರು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಪ್ರವಾಸೋದ್ಯಮಕ್ಕೂ ಹೆಚ್ಚು ಒತ್ತು ನೀಡಿ ಮತ್ತಷ್ಟು ಅಭಿವೃದ್ಧಿಗೊಳಿಸುವ ಅಗತ್ಯತೆ ಇದೆ. ನಗರದಲ್ಲಿ ವರ್ಷವಿಡೀ ಪೂರಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲು ಶೀಘ್ರದಲ್ಲೇ ವಿಷಯ ತಜ್ಞರ ಜತೆ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು. ಜಿಲ್ಲಾಧಿಕಾರಿಯೊಂದಿಗೆ ಚರ್ಚೆ ನಡೆಸಿದ್ದೇನೆ. ಮುಂದಿನ ದಿನಗಳಲ್ಲಿ ನುರಿತವರೊಂದಿಗೆ ಸಭೆ ನಡೆಸಿ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ತಿಳಿಸಿದರು.

ದಸರಾ ದೀಪಾಲಂಕಾರವನ್ನು ಅ.23ರವರೆಗೆ ವಿಸ್ತರಣೆ ಮಾಡಲಾಗಿದೆ. ರಾತ್ರಿ 10 ಗಂಟೆಯವರೆಗೂ ದೀಪಾಲಂಕಾರ ಇರಬೇಕು ಎಂದು ಸಂಬಂಧಪಟ್ಟ ಇಲಾಖೆಯವರಿಗೆ ಸೂಚನೆ ನೀಡುತ್ತೇನೆ. ದಸರೆಯಲ್ಲಿ ನಗರದ ಸೌಂದರ್ಯ ನೋಡದೆ ಇರುವ ಜನರಿಗಾಗಿ ದೀಪಾಲಂಕಾರವನ್ನು ವಿಸ್ತರಣೆ ಮಾಡಿದ್ದು, ಸ್ಥಳೀಯ ಜನರು ನೋಡಿ ಖುಷಿ ಪಡಬೇಕು ಎನ್ನುವುದು ನಮ್ಮ ಉದ್ದೇಶ ಎಂದರು.

ದಸರಾ ಪ್ರಾಧಿಕಾರದ ರಚನೆಯ ಬಗ್ಗೆ ಬಹಳ ವರ್ಷಗಳಿಂದಲೂ ಬೇಡಿಕೆ ಇದೆ. ವಸ್ತುಪ್ರದರ್ಶನ ಪ್ರಾಧಿಕಾರದಂತೆ ದಸರಾ ಪ್ರಾಧಿಕಾರ ರಚನೆಯಾದರೆ ಕೆಲಸ–ಕಾರ್ಯಗಳು ಸುಗಮವಾಗಿ ಆಗುತ್ತವೆ. ಮುಂದೆ ಇದರ ಬಗ್ಗೆ ಚರ್ಚಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ವಿಷ್ಣುವರ್ಧನ್, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್‌ಕುಮಾರ್ ಇದ್ದರು.

ಅ.23ರವರೆಗೂ ತಾತ್ಕಾಲಿಕ ನಿಲ್ದಾಣಗಳಿಂದಲೇ ಸಿಟಿ ಬಸ್ ಸಂಚಾರ



ಮೈಸೂರು, ಅ.17(ಆರ್‌ಕೆ)–ವಿದ್ಯುತ್ ದೀಪಾಲಂಕಾರವಿರುವುದರಿಂದ ಅಕ್ಟೋಬರ್ 23ರವರೆಗೂ ಮೈಸೂರು ನಗರದಲ್ಲಿ ವ್ಯವಸ್ಥೆ ಮಾಡಿರುವ ತಾತ್ಕಾಲಿಕ ಬಸ್ ನಿಲ್ದಾಣಗಳಿಂದಲೇ ಸಿಟಿ ಬಸ್‌ಗಳು ಕಾರ್ಯಾಚರಣೆ ನಡೆಸಲಿವೆ.

ಅ.23ರವರೆಗೆ ಪ್ರತೀ ದಿನ ಸಂಜೆ 4 ರಿಂದ ರಾತ್ರಿ 11 ಗಂಟೆವರೆಗೆ ತಾತ್ಕಾಲಿಕ ಬಸ್ ನಿಲ್ದಾಣ ಅಸ್ತಿತ್ವದಲ್ಲಿರುತ್ತವೆ. ಪ್ರಸ್ತುತ ಗಾಂಧಿ ವೃತ್ತ ಬನುಮಯ್ಯ ಕಾಲೇಜು ಬಳಿ ಹಾಗೂ ಮಿರ್ಜಾ ರಸ್ತೆಯಲ್ಲಿ ಈ ತಾತ್ಕಾಲಿಕ ಬಸ್ ನಿಲ್ದಾಣಗಳು ಕಾರ್ಯ ನಿರ್ವಹಿಸುತ್ತಿವೆ.

ಕೆಆರ್‌ಎಸ್, ಇಲವಾಲ, ಹೂಟಗಳ್ಳಿ, ಬೆಳವಾಡಿ, ಕೂರ್ಗಳ್ಳಿ, ವಿಜಯನಗರ, ಇನ್ಫೋಸಿಸ್, ಮೇಟಗಳ್ಳಿ, ಶ್ರೀರಂಗಪಟ್ಟಣ, ಎನ್.ಆರ್.ಮೊಹಲ್ಲಾ, ಉದಯಗಿರಿ, ಕೆಸರೆ, ಸಿದ್ದಲಿಂಗಪುರ, ನಾಯ್ಡುನಗರ ಕಡೆಗೆ ಹೋಗುವ ಬಸ್‌ಗಳು ಗಾಂಧಿ ಸ್ಕ್ವೇರ್‌ನಿಂದಲೂ, ಕುವೆಂಪುನಗರ, ಸರಸ್ವತಿಪುರಂ, ರಾಮಕೃಷ್ಣನಗರ, ಬೋಗಾದಿ, ವಿದ್ಯಾರಣ್ಯಪುರಂ, ಜೆ.ಪಿ.ನಗರ, ಶ್ರೀರಾಂಪುರ, ಹೆಚ್.ಡಿ.ಕೋಟೆ, ನಂಜನಗೂಡು, ಕಡಕೊಳ ಕಡೆಗೆ ಹೋಗುವ ಬಸ್‌ಗಳು ಬನುಮಯ್ಯ ಕಾಲೇಜು ಬಳಿಯಿಂದ ಹಾಗೂ ಚಾಮುಂಡಿಬೆಟ್ಟ, ಪೊಲೀಸ್ ಲೇಔಟ್, ಆಲನಹಳ್ಳಿ, ಲಲಿತಾದ್ರಿಪುರ, ಸಿದ್ಧಾರ್ಥನಗರ, ಮಹದೇವಪುರ, ಬನ್ನೂರು ಕಡೆಗೆ ಸಂಚರಿಸುವ ಬಸ್ಸುಗಳು ಮಿರ್ಜಾ ರಸ್ತೆಯ ತಾತ್ಕಾಲಿಕ ನಿಲ್ದಾಣದಿಂದ ಹೊರಡಲಿವೆ ಎಂದು ಕೆಎಸ್‌ಆರ್‌ಟಿಸಿ ನಗರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

ಅ.20ರಂದು ವಾರ್ಷಿಕ ಮಹಾಸಭೆ

ಮೈಸೂರು,ಅ.17–ಮೈಸೂರಿನ ಬ್ರಾಹ್ಮಣ ಧರ್ಮ ಸಹಾಯ ಸಭಾದ 97ನೇ ವಾರ್ಷಿಕ ಮಹಾಸಭೆಯನ್ನು ಸಭಾದ ಅಧ್ಯಕ್ಷ ಹೆಚ್.ಅಶ್ವಥ್‌ನಾರಾಯಣ ಅಧ್ಯಕ್ಷತೆಯಲ್ಲಿ ಅ.20ರಂದು ಬೆಳಗ್ಗೆ 11 ಗಂಟೆಗೆ ತ್ಯಾಗರಾಜ ರಸ್ತೆಯಲ್ಲಿರುವ ಕಲ್ಯಾಣ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಂದಿನಿ ದೋಸೆ, ಇಡ್ಲಿ ಹಿಟ್ಟು ಮಾರಾಟಕ್ಕೆ ರೆಡಿ



ಬೆಂಗಳೂರು, ಅ.17– ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ತನ್ನ ಪ್ರಮುಖ ಡೈರಿ ಬ್ರಾಂಡ್ ನಂದಿನಿ ಅಡಿಯಲ್ಲಿ ಇಡ್ಲಿ ಮತ್ತು ದೋಸೆ ಹಿಟ್ಟಿನ ಪ್ಯಾಕೆಟ್ ಅನ್ನು ಬೆಂಗಳೂರಿನಲ್ಲಿ ಬಿಡುಗಡೆ ಮಾಡಲು ಸಜ್ಜಾಗಿದೆ. ಅದರ ಪ್ಯಾಕೆಟ್‌ಗಳನ್ನು ನಂದಿನಿ ಸಿದ್ಧಗೊಳಿಸಿರುವುದರ ಚಿತ್ರವನ್ನು ಮನಿ ಕಂಟ್ರೋಲ್ ತನ್ನ ವರದಿಯಲ್ಲಿ ಪ್ರಕಟಿಸಿದೆ. ಅಲ್ಲದೆ ಉತ್ಪನ್ನದ ಬಿಡುಗಡೆಗೆ ಸಿಎಂ ಸಿದ್ದರಾಮಯ್ಯ ಅವರ ಸಮಯವನ್ನು ಕೇಳಿದೆ ಎಂದು ವರದಿ ಮಾಡಿದೆ.

ಬೆಂಗಳೂರಿನಲ್ಲಿ ಐಡಿ, ಅಸಲ್ ಮತ್ತು ಎಂಟಿಆರ್ ಕಂಪನಿಗಳು ಹಿಟ್ಟನ್ನು ಮಾರಾಟ ಮಾಡುತ್ತಿವೆ ಇದೀಗ ಆ ಎಲ್ಲ ಖಾಸಗಿ ಸಂಸ್ಥೆಗಳಿಗೆ ಪೈಪೋಟಿ ನೀಡಲು ನಂದಿನಿ ಸಜ್ಜಾಗಿದೆ. ನಾವು ಬಿಡುಗಡೆಗೆ ಸಿದ್ಧರಿದ್ದೇವೆ. ಸಿಎಂ ಅವರಿಂದ ದಿನಾಂಕ ಕೋರಿದ್ದೇವೆ. ಶೀಘ್ರದಲ್ಲೇ ನಂದಿನಿ ಇಡ್ಲಿ ಮತ್ತು ದೋಸೆ ಹಿಟ್ಟಿನ ಪ್ಯಾಕೆಟ್‌ಗಳು ಮಾರುಕಟ್ಟೆಗೆ ಇಳಿಯಲಿದೆ. ನಮ್ಮ ಪ್ರತಿಸ್ಪರ್ಧಿಗಳಿಗಿಂತ ಕಡಿಮೆ ಬೆಲೆ ನಿಗದಿಪಡಿಸುತ್ತೇವೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ.ಜಗದೀಶ್ ಹೇಳಿಕೆಯನ್ನು ಮನಿ ಕಂಟ್ರೋಲ್ ಉಲ್ಲೇಖಿಸಿದೆ. ಈ ಹಿಟ್ಟು 450 ಗ್ರಾಂ ಮತ್ತು 900 ಗ್ರಾಂ ಪ್ಯಾಕ್‌ಗಳಲ್ಲಿ ಲಭ್ಯವಾಗಲಿದೆ ಎಂದು ಕೆಎಂಎಫ್ ಮೂಲಗಳು ತಿಳಿಸಿವೆ.

ನಂದಿನಿ ಉಳಿದ ಬ್ರಾಂಡ್‌ಗಳಿಗಿಂತ ಭಿನ್ನವಾಗಲು ಅದರ ಪ್ರೋಟೀನ್ ಬೇಸ್, ಅದರ ಪರಿಮಳ ಮತ್ತು ವಿನ್ಯಾಸ ಹೆಚ್ಚಿಸುತ್ತದೆ ಎಂದು ಅವರು ಹೇಳಿದ್ದಾರೆ. ನೀಲಿ ಬಣ್ಣದ 900 ಗ್ರಾಂ ಹಿಟ್ಟು 18 ಇಡ್ಲಿ ಅಥವಾ 12–14 ದೋಸೆಗಳನ್ನು ತಯಾರಿಸುವ ಭರವಸೆ ನೀಡುತ್ತದೆ. ಆಗಸ್ಟ್‌ನಲ್ಲಿ ಬಿಡುಗಡೆಗೆ ಯೋಜಿಸಲಾಗಿತ್ತು. ವಿವಿಧ ಕಾರಣಗಳಿಂದಾಗಿ ವಿಳಂಬವಾಯಿತು ಎಂದು ಅವರು ಮಾಹಿತಿ ನೀಡಿದ್ದಾರೆ.

ಈಗ ನಂದಿನಿ ಹಾಲು, ಬ್ರೆಡ್, ತುಪ್ಪ, ಬೆಣ್ಣೆ, ಮೊಸರು, ಚೀಸ್, ಮಜ್ಜಿಗೆ ಮತ್ತು ಮೊಸರು ಸೇರಿದಂತೆ ಹಲವಾರು ಉತ್ಪನ್ನಗಳನ್ನು ನೀಡುತ್ತಿದೆ. ತ್ವರಿತ ಉಪಾಹಾರ ತಯಾರು ಮಾಡುವುದನ್ನು ಬಯಸುವ ಟೆಕ್ಕಿಗಳನ್ನು ಹೊಂದಿರುವ ಬೆಂಗಳೂರು ಹೊಸ ಉತ್ಪನ್ನಕ್ಕೆ ಪ್ರಮುಖ ಮಾರುಕಟ್ಟೆಯಾಗಿದೆ. ಬೆಂಗಳೂರಿನಲ್ಲಿ ಪ್ರತಿಕ್ರಿಯೆಯನ್ನು ಗಮನಿಸಿದ ನಂತರ ಹಿಟ್ಟನ್ನು ಇತರ ಸ್ಥಳಗಳಿಗೆ ಕೊಂಡೊಯ್ಯಲು ಕೆಎಂಎಫ್ ಯೋಜನೆ ರೂಪಿಸಿದೆ.

ವಾಲ್ಮೀಕಿ ಜಯಂತಿ ಆಚರಣೆ..



ಮೈಸೂರು ವಕೀಲರ ಸಂಘದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಸುಧೀರ್, ಜಂಟಿ ಕಾರ್ಯದರ್ಶಿ ಕೆ.ಆರ್.ಚರಣ್‌ರಾಜ್, ಉಪಾಧ್ಯಕ್ಷ ಚಂದ್ರಶೇಖರ್ ಮತ್ತಿತರರಿದ್ದರು

ಪರಿಸರ ಸ್ನೇಹಿ, ಆರೋಗ್ಯದಾಯಕ, ಅನುಕೂಲಕಾರಿ ಟ್ರಿಣ್ ಟ್ರಿಣ್ ಸೈಕಲ್‌ಗೂ ಉಳಿಗಾಲವಿಲ್ಲ

● ಉತ್ತಮ ವ್ಯವಸ್ಥೆಯ ಹಾಳು ಮಾಡುವ ಹೀನ ಕೃತ್ಯ ಹತ್ತಿಕ್ಕದಿದ್ದರೆ ಮೈಸೂರಿಗೇ ಮಾರಕ ● ಸೈಕಲ್‌ಗಳ ಕದಿಯುವುದು, ಬಿಡಿ ಭಾಗಗಳ ಊನ ಮಾಡುವ ವಿನಾಶಕಾರಿ ಪ್ರವೃತ್ತಿಯಿಂದ ಸಾಂಸ್ಕೃತಿಕ ನಗರಿಗೆ ಕೆಟ್ಟ ಹೆಸರು


ಅರವಿಂದನಗರದಲ್ಲಿರುವ ಗೋಡೌನ್‌ನಲ್ಲಿ ಸೈಕಲ್‌ಗಳನ್ನು ರಿಪೇರಿ ಮಾಡುತ್ತಿರುವುದು.

ಮೈಸೂರು, ಅ.17(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪರಿಸರ ಸ್ನೇಹಿ, ಆರಾಮ ಮತ್ತು ಆರೋಗ್ಯದಾಯಕ ಪಯಣಕ್ಕೆ ಮೆಚ್ಚುಗೆ ಪಡೆದ ಪರಿಸರ ಸ್ನೇಹಿ ಬ್ಯಾಟರಿ ಚಾಲಿತ ಪವರ್ ಪೆಡಲ್ ಟ್ರಿಣ್ ಟ್ರಿಣ್ ಸೈಕಲ್(ಮೈಬೈಕ್) ವ್ಯವಸ್ಥೆಗೆ ಸಂಚಕಾರ ಎಸಗಲಾಗುತ್ತಿದೆ.

ಮೈಬೈಕ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದಂತೆ ಹೆಚ್ಚುವರಿ ಸೈಕಲ್‌ಗಳನ್ನು ಪೂರೈಕೆ ಮಾಡಲಾಗಿದ್ದು, ನಗರದ ಹಳೇ ಜಿಲ್ಲಾಧಿಕಾರಿಗಳ ಕಚೇರಿ, ರೈಲ್ವೆ ನಿಲ್ದಾಣ, ಮೆಟ್ರೋಪೋಲ್ ವೃತ್ತ ಸೇರಿದಂತೆ 48 ಸೈಕಲ್ ಸ್ಟ್ಯಾಂಡ್‌ಗಳ ಮೂಲಕ 500ಕ್ಕೂ ಹೆಚ್ಚು ಬ್ಯಾಟರಿ ಚಾಲಿತ ಪವರ್ ಪೆಡಲ್ ಸೈಕಲ್‌ಗಳ ನಿತ್ಯ ಬಳಕೆಯಾಗುತ್ತಿವೆ. ಸುಮಾರು 11,323 ಲೈಫ್‌ಟೈಮ್ ಬಳಕೆದಾರರಿದ್ದಾರೆ. ಆದರೆ, ಉತ್ತಮ ಸೇವೆ ಪಡೆಯಬೇಕಾದವರೇ ಹಾಳು ಮಾಡಲು ಮುಂದಾಗಿರುವುದು ಮೂರ್ಖತನದ ಪರಮಾವಧಿಯಾಗಿದೆ.

ಆರಾಮದಾಯಕ ಸವಾರಿ ಜೊತೆಗೆ ಪರಿಸರಸ್ನೇಹಿಯಾಗಿರುವ ಬ್ಯಾಟರಿ ಚಾಲಿತ ಪವರ್ ಪೆಡಲ್ ಟ್ರಿಣ್ ಟ್ರಿಣ್ ಸೈಕಲ್‌ಗಳ ಕಳ್ಳತನ, ಮನಬಂದಂತೆ ಬಳಕೆ ಮಾಡುವುದು, ಎಲ್ಲೆಂದರಲ್ಲಿ ಕೆಡವಿ–ಬಿಸಾಡುವುದು, ಬ್ಲೂಟೂತ್ ಸಿಸ್ಟಂ ಒಳಗೊಂಡ ಲಾಕರ್ ಮುರಿದು ಕದ್ದೊಯ್ಯುವುದು, ಟ್ರಿಪಲ್ ರೈಡಿಂಗ್, ಸೀಟ್ ಹರಿದು ಹಾಕುವುದು, ಹೆಡ್‌ಲೈಟ್ ವಯರ್ ಕಟ್ ಮಾಡುವುದು, ಸ್ಟ್ಯಾಂಡ್ ಮತ್ತು ಬ್ರೇಕ್ ಮುರಿಯುವುದು ವಿಪರೀತವಾಗಿದ್ದು, ಮೈಬೈಕ್ ಪೂರೈಕೆದಾರರಿಗೆ ತಲೆನೋವಾಗಿ ಪರಿಣಮಿಸಿದೆ.

ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆಯಾಗಿರುವ ಸಂದರ್ಭದಲ್ಲಿ ಉದ್ಯೋಗಿಗಳಿಗೆ, ವಾಯುವಿಹಾರಿಗಳಿಗೆ, ಪ್ರವಾಸಿಗರಿಗೆ ಕಡಿಮೆ ಖರ್ಚಿನಲ್ಲಿ ನಗರ ಸುತ್ತಲು ಅನುಕೂಲವಾಗಿರುವ ಟ್ರಿಣ್ ಟ್ರಿಣ್ ಸೈಕಲ್‌ಗಳನ್ನು ಸದ್ಬಳಕೆ ಮಾಡಿಕೊಳ್ಳುವ ಬದಲು ಅವುಗಳನ್ನೇ ವಿರೂಪಗೊಳಿಸಲಾಗುತ್ತಿದೆ. ಪ್ರತಿನಿತ್ಯ 20–25 ಸೈಕಲ್‌ಗಳನ್ನು ರಿಪೇರಿ ಮಾಡದೇ ಬೇರೆ ದಾರಿ ಇಲ್ಲದಂತಾಗಿದೆ. ಸೈಕಲ್ ಬಳಸಿ ಪರಿಸರಕ್ಕೆ ಕೊಡುಗೆ ನೀಡಬೇಕಾದವರೇ ದುರ್ಬಳಕೆ ಮಾಡುತ್ತಿದ್ದಾರೆ.

ದಿಬ್ಬದ ರಸ್ತೆಯಲ್ಲೂ ಸರಾಗ ಹಾಗೂ ವೇಗವಾಗಿ ಚಲಿಸುವ, ಹಿರಿಯ ನಾಗರಿಕರು ಸಹ ಬಳಕೆ ಮಾಡಬಹುದಾದ ಬ್ಯಾಟರಿ ಚಾಲಿತ ಸೈಕಲ್‌ಗಳ ಸಿಂಗಲ್ ಸೀಟ್‌ನಲ್ಲಿ ಮೂರು ಮಂದಿ ಕೂರುವುದು(ಟ್ರಿಪಲ್), ಟಯರ್‌ಗಳನ್ನು ಪಂಕ್ಚರ್ ಮಾಡುವುದು, ಸ್ಟಿಕ್ಕರ್ ಹರಿದು ಹಾಕುವುದು ಸೇರಿದಂತೆ ಹಾಳುಮಾಡಲು ಏನೆಲ್ಲಾ ಮಾಡಬೇಕೋ ಅದನ್ನೆಲ್ಲವನ್ನೂ ಮಾಡುತ್ತಿದ್ದಾರೆ ಎಂದು ಮೈಬೈಕ್ ಸಿಟಿ ಮ್ಯಾನೇಜರ್ ಆರ್.ಯಶವಂತ್ 'ಮೈಸೂರು ಮಿತ್ರ'ನಲ್ಲಿ ಪರಿಸರ ಸ್ನೇಹಿ ಸೈಕಲ್ ಸೇವೆಯಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ತಿಳಿಸಿದರು.

ಸೈಕಲ್‌ಗಳ ಕಳ್ಳತನ: ಇದುವರೆಗೆ ಸುಮಾರು 10ಕ್ಕೂ ಹೆಚ್ಚು ಸೈಕಲ್‌ಗಳ ಕಳ್ಳತನವಾಗಿದೆ. ಮೈಸೂರಿನಿಂದ ಪಾಂಡವಪುರದ ಕಡೆಗೆ ಸೈಕಲ್ ಕದ್ದೊಯ್ಯುತ್ತಿದ್ದ ವ್ಯಕ್ತಿಯನ್ನು ಹಿಡಿದು ನಾವೇ ಪೊಲೀಸರಿಗೆ ಒಪ್ಪಿಸಿದ್ದೇವೆ. ಯುವತಿಯೊಬ್ಬಳಂತೂ ಲಾಕ್ ಆಗಿದ್ದ ಸೈಕಲ್‌ಗೆ ನಾಮ ಇಟ್ಟು ಪೂಜೆ ಮಾಡಿ ದರ ದರನೆ ಎಳೆದೊಯ್ಯುತ್ತಿದ್ದಳು. ಕೇಳಿದ್ದಕ್ಕೆ ಈ ಸೈಕಲ್ ನನ್ನದು. ನೀವೀಗ ಕಿತ್ತುಕೊಂಡರೂ ನಾಳೆ ಇದೇ ಜಾಗದಿಂದ ಇನ್ನೊಂದು ಸೈಕಲ್ ಎಗರಿಸುತ್ತೇನೆ ಎಂದಿದ್ದಳು ಎಂದು ಹತಾಶ ಪರಿಸ್ಥಿತಿ ತೆರೆದಿಟ್ಟರು.

ಆರಂಭದಲ್ಲಿ ಬಳಕೆದಾರರಿಗೆ ರೂಟ್ ಮ್ಯಾಪ್ ನೋಡಿಕೊಂಡು ಸಾಗಲು ಅನುಕೂಲವಾಗಲೆಂದು ಸೈಕಲ್‌ಗಳಿಗೆ ಮೊಬೈಲ್ ಲಾಕರ್ ಅಳವಡಿಸಿದ್ದೆವು. ಆದರೆ, ಕೆಲ ದಿನಗಳಲ್ಲೇ ಲಾಕರ್‌ಗಳ ಕಳ್ಳತನ ಹೆಚ್ಚಾದ್ದರಿಂದ ಮೊಬೈಲ್ ಲಾಕರ್ ಅಳವಡಿಸುವುದನ್ನೇ ಬಿಟ್ಟೆವು. ನಂತರ ರಾತ್ರಿ ವೇಳೆ ಅನುಕೂಲವಾಗಲೆಂದು ಹೆಡ್‌ಲೈಟ್ ಅಳವಡಿಸಿದ್ದರೆ ಅದರ ವಯರನ್ನೇ ಕಟ್ ಮಾಡುತ್ತಿದ್ದಾರೆ. ಒಮ್ಮೆ ಹೆಡ್‌ಲೈಟ್ ವಯರ್ ಕಟ್ ಮಾಡಿದರೆ, ಮತ್ತೆ ಕನೆಕ್ಟ್ ಮಾಡಲು ಇಡೀ ಸೈಕಲ್ ಬಿಚ್ಚಬೇಕು. ಆದ್ದರಿಂದ ಹೆಡ್‌ಲೈಟ್ ಒಮ್ಮೆ ಹಾಳಾಗಿದ್ದರೆ ಮತ್ತೆ ಸರಿಪಡಿಸುವುದನ್ನು ನಿಲ್ಲಿಸಿದ್ದೇವೆ. ಅನುಕೂಲಕ್ಕಾಗಿ ಇರುವುದನ್ನು ಸದ್ಬಳಕೆ ಮಾಡಿಕೊಳ್ಳುವ ಸಾಮಾನ್ಯ ಪರಿಜ್ಞಾನವೂ ಕೆಲವರಿಗೆ ಇಲ್ಲದಂತಾಗಿದೆ ಎಂದು ವಿಷಾದಿಸಿದರು.

ಜಿಪಿಎಸ್ ಇರಲಿದೆ: ಬ್ಯಾಟರಿ ಚಾಲಿತ ಪವರ್ ಪೆಡಲ್ ಟ್ರಿಣ್ ಟ್ರಿಣ್ ಸೈಕಲ್‌ಗಳಲ್ಲಿ ಜಿಪಿಎಸ್ ಇದ್ದು, ಸೈಕಲ್ ಎಲ್ಲಿಯೇ ಇದ್ದರೂ ಪತ್ತೆಯಾಗಲಿದೆ. ಆದರೂ ಕೆಲವರು ಜಿಪಿಎಸ್ ಅಳವಡಿಸಿರುವ ಬ್ಲೂಟೂತ್ ಯಂತ್ರವನ್ನು ಒಡೆದುಹಾಕಿ ಕಳ್ಳತನ ಮಾಡಿದ್ದಾರೆ. ಅಲ್ಲದೆ ಸೈಕಲ್ ಸ್ಟ್ಯಾಂಡ್, ಬೆಲ್, ಸೀಟ್ ಅಡ್ಜಸ್ಟ್‌ಮೆಂಟ್ ನಟ್‌ಗಳ ಕಳವು ಮಾಡುವುದು, ಸ್ಟಿಕ್ಕರ್ ಹರಿಯುವುದು ನಡೆಯುತ್ತಲೇ ಇದೆ ಎಂದು ಬೇಸರ ಹೊರಹಾಕಿದರು.

20–25 ಸೈಕಲ್‌ಗಳ ರಿಪೇರಿ: ಸರ್ವೀಸ್ ಮಾಡಿದ ಸೈಕಲ್‌ಗಳನ್ನು ಸ್ಟ್ಯಾಂಡ್‌ಗಳಿಗೆ ನಿಲ್ಲಿಸಿ, ಮತ್ತೆ ಅವುಗಳನ್ನು ತಂದು ರಿಪೇರಿ ಮಾಡಬೇಕು. ಪ್ರತಿನಿತ್ಯ 20–25 ಸೈಕಲ್‌ಗಳನ್ನು ರಿಪೇರಿ ಮಾಡುವುದೇ ನಮ್ಮ ಕೆಲಸವಾಗಿದೆ. ಚೆನ್ನಾಗಿರುವ ಸೈಕಲ್‌ಗಳನ್ನು ಹಾಳು ಮಾಡುವ ಪ್ರವೃತ್ತಿ ಬಿಟ್ಟರೆ ಟ್ರಿಣ್ ಟ್ರಿಣ್ ಸೈಕಲ್‌ಗಳನ್ನು ಇನ್ನಷ್ಟು ಸದ್ಬಳಕೆ ಮಾಡಿಕೊಳ್ಳಬಹುದು ಎಂದರು.

ಹಾಳುಮಾಡದೇ ಸದ್ಬಳಕೆ ಮಾಡಿಕೊಳ್ಳಿ...!



ಸಾರ್ವಜನಿಕರ ಅನುಕೂಲಕ್ಕಾಗಿರುವ ಪರಿಸರಸ್ನೇಹಿ ಬ್ಯಾಟರಿ ಚಾಲಿತ ಪವರ್ ಪೆಡಲ್ ಟ್ರಿಣ್ ಟ್ರಿಣ್ ಸೈಕಲ್‌ಗಳನ್ನು ಹಿರಿಯ ನಾಗರಿಕರೂ ಬಳಕೆ ಮಾಡಬಹುದು. ಪ್ರತೀ ದಿನ ಬಳಕೆದಾರರ ಸಂಖ್ಯೆ ಹೆಚ್ಚಾಗುತ್ತಿದೆ. ಅದರಂತೆ ಉತ್ತಮ ಸೇವೆ ನೀಡುವ ಪ್ರಯತ್ನ ಮಾಡುತ್ತಿದ್ದೇವೆ. ದಸರಾ ವೇಳೆಯಂತೂ ನಿರೀಕ್ಷೆಗೂ ಮೀರಿ ಪ್ರವಾಸಿಗರು ಸೈಕಲ್‌ಗಳನ್ನು ಬಳಸಿದ್ದು, ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ. ನೋಂದಣಿಯಾದವರು ತಮ್ಮ ಮಕ್ಕಳಿಗೆ ಈ ಸೈಕಲ್‌ಗಳನ್ನು ಕೊಡಬಾರದು. ಮಕ್ಕಳಿಗೆ ಈ ಸೈಕಲ್‌ಗಳ ಬಳಕೆ ಬಗ್ಗೆ ತಿಳಿದಿರುವುದಿಲ್ಲ. ಅಲ್ಲದೆ ಕುಡುಕರು ಮನಬಂದಂತೆ ಸೈಕಲ್‌ಗಳನ್ನು ಬಳಸಿ, ಹಾಳುಮಾಡುತ್ತಿದ್ದಾರೆ. ಪರಿಸರಕ್ಕೆ ತಾವೇನಾದರೂ ಕೊಡುಗೆ ನೀಡಬೇಕಿದ್ದರೆ ಪರಿಸರ ಸ್ನೇಹಿ ಸೈಕಲ್‌ಗಳನ್ನು ಸದ್ಬಳಕೆ ಮಾಡಿಕೊಳ್ಳಿ, ಹಾಳುಮಾಡಬೇಡಿ.

\- **ಆರ್.ಯಶವಂತ್,** ಸಿಟಿ ಮ್ಯಾನೇಜರ್, ಮೈಬೈಕ್



ಮೈಸೂರು ಸಿಟಿ ಬಸ್ ನಿಲ್ದಾಣದ ಎದುರಿನ ಟ್ರಿಣ್ ಟ್ರಿಣ್ ಸೈಕಲ್ ಸ್ಟ್ಯಾಂಡ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜಿಗ್ರಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರ್ಟಿನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭೈರಾದೇವಿ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಹರೂಪಿಣಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
DRC CINEMAS
ದೂ : 4240422/4241800

ಸ್ಕ್ರೀನ್ 1	ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
MVC
ದೂ : 0821–2973519

ಸ್ಕ್ರೀನ್ 1	ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ.
ಸ್ಕ್ರೀನ್ 2	ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ.
ಸ್ಕ್ರೀನ್ 4	ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

14ನೇ ದಿನ, ಶುಕ್ರವಾರ, 18–10–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಸುಂದರ್ ಬಾನ್ಸ್ ಪ್ಲೇಟ್ ಡಿII–1200 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 2.00ಕ್ಕೆ
1. ಶ್ಯಾಡೋ ಏಮ್ 2. ಆರಾಧನ 3. ಡಿ ಗೋಲ್ಡನ್ ಕಪ್

II. ಯಾದವಗಿರಿ ಪ್ಲೇಟ್ –1400 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ನ್ಯಾಚುರಲ್ ಪ್ಲೈ 2. ದಿ ಏಂಜಲ್ ಪವರ್ 3. ಬ್ರೇಕ್ ಅವೇ

III. ಸುಂದರ್ ಬಾನ್ಸ್ ಪ್ಲೇಟ್ ಡಿI–1200 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 3.00ಕ್ಕೆ
1. ಈಫಿಲ್ ಟವರ್ 2. ಮಿಸ್ಟಿಕಲ್ ಮರ್ಲಿನ್ 3. ಗಿಲ್ಡೆಡ್ ಬಟರ್‌ಪ್ಲೈ

IV. A.R.ಸುಬ್ರಮಣ್ಯ ರಾಜೇ ಅರಸ್ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ. 3.30ಕ್ಕೆ
1. ಬ್ರೇವ್ ಟ್ರೂಪರ್ 2. ಮಿಸ್ಟಿಕ್ ಬಾಂಡ್ 3. ಕೋರ್ಟ್ ಜೆಸ್ಟರ್

V. ಗೌರ್ನರ್ಸ್ ಕಪ್–2000 ಮೀ. 4 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಚಾಂಪಿಯನ್ಸ್ ವೇ 2. ಕಾಲಮಿಟ್ಟಿ 3. ಶುಭಂಕರ್


VI. ಅಲೆಕೋನಾ ಟ್ರೋಫಿ –1600 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಐರಿಷ್ ರಾಕ್‌ಸ್ಟಾರ್ 2. ಆರ್‌ಮೊರಿ 3. ಫ್ರೀ ಟು ಪ್ಲೇ

VII. ಹಸ್ತಿನಪುರ ಪ್ಲೇಟ್ –1400 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ಒ ಮಂಚಾಲಿ 2. ಬೆನ್‌ಜೈ 3. ನ್ಯಾಚುರಲ್ ಒನ್

ದಿನದ ಅತ್ಯುತ್ತಮ	ಚಾಂಪಿಯನ್ಸ್ ವೇ
ಡಬ್ಬಲ್	ಐರಿಷ್ ರಾಕ್ ಸ್ಟಾರ್, ಒ ಮಂಚಲಿ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರೆಬಲ್	2, 3 ಮತ್ತು 4
II ಟ್ರೆಬಲ್	5, 6 ಮತ್ತು 7
ಎಕ್ಸ್‌ಆಕ್ಸ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಟಾಟಾ ಮ್ಯಾಜಿಕ್ ಡಿಕ್ಕಿ: ಬೈಕ್ ಸವಾರ ಸಾವು



ಬಿ.ಲೋಕೇಶ್

ಮೈಸೂರು, ಅ.17(ಎಸ್‌ಬಿಡಿ)– ಟಾಟಾ ಮ್ಯಾಜಿಕ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟು, ಮತ್ತೋರ್ವ ಗಾಯಗೊಂಡಿರುವ ಘಟನೆ ಗುರುವಾರ ಮೈಸೂರಿನ ವರುಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ತಿ.ನರಸೀಪುರ ತಾಲೂಕಿನ ಬೆನಕನಹಳ್ಳಿ ಗ್ರಾಮದ ಮಾಸ್ಟರ್ ಬಸವರಾಜಪ್ಪ ಅವರ ಪುತ್ರ ಬಿ.ಲೋಕೇಶ್(48) ಅಪಘಾತದಲ್ಲಿ ಮೃತಪಟ್ಟಿದ್ದು, ಗಾಯಗೊಂಡಿರುವ ನಾಗರಾಜು ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ತಿ.ನರಸೀಪುರದಲ್ಲಿ ಪ್ರಿಯದರ್ಶಿ ಎಂಟರ್‌ಪ್ರೈಸಸ್ ನಡೆಸುತ್ತಿದ್ದ ಲೋಕೇಶ್ ಅವರು ಸ್ನೇಹಿತ ನಾಗರಾಜು ಜೊತೆ ಕಾರ್ಯನಿಮಿತ್ತ ಬೈಕ್‌ನಲ್ಲಿ ಮೈಸೂರಿಗೆ ಬಂದು, ಊರಿಗೆ ವಾಪಸ್ಸಾಗುವಾಗ ಮೊಸಂಬಾಯನಹಳ್ಳಿ ಗ್ರಾಮದ ಬಳಿ ವಾಣಿಜ್ಯ ಪ್ರಯಾಣಿಕರ ವಾಹನ ಟಾಟಾ ಮ್ಯಾಜಿಕ್ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಗಾಯಗೊಂಡಿದ್ದ ಬೈಕ್ ಸವಾರರಿಬ್ಬರನ್ನೂ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಲೋಕೇಶ್ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ನಾಗರಾಜು ಅವರಿಗೆ ಚಿಕಿತ್ಸೆ ಮುಂದುವರೆದಿದೆ ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ವರುಣ ಠಾಣೆ ಸಬ್‌ಇನ್ಸ್‌ಪೆಕ್ಟರ್ ಚೇತನ್ ತಿಳಿಸಿದ್ದಾರೆ.



ಮೊದಲನೇ ವರ್ಷದ ಪುಣ್ಯಸ್ಮರಣೆ



ಲೋಕೇಶ್

ಪ್ರಕಟಣೆ: ಸಿದ್ದು ಭೀರಮ್ಮ ಟೀ ಸ್ಟಾಲ್ ಕುರುಬಾರಹಳ್ಳಿ, ಮೈಸೂರು

6ನೇ ವರ್ಷದ ಸವಿನೆನಪು




ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ: ಸಾಜಿದ ಬೇಗಂ ಹಾಗೂ ಮಕ್ಕಳು, ಮೊಮ್ಮಕ್ಕಳು ಕುಟುಂಬದವರು

ಮೀರ್ ಇಸ್ತ್ಯಾಕ್ ಹುಸೇನ್ (ಕಾಲು)

S/o ಲೇಟ್ ಮೀರ್ ಮಜರ್ ಹುಸೇನ್, Retd. ಹೆಡ್‌ಕಾನ್ಸ್‌ಟೇಬಲ್, ಪೊಲೀಸ್ ಇಲಾಖೆ, ಜ್ಯೋತಿನಗರ, ಮೈಸೂರು





IN THE COURT OF THE HON'BLE III ADDITIONAL DISTRICT AND SESSIONS JUDGE, AT MYSURU

In the matter of:

R.A No.: 110 of 2024

Smt. Geetha, D/o Sri Siddegowda, Aged about 50 years, R/at D. No. 2, Behind Shanimahatma Temple, Gokulam, 3rd Stage, Mysuru, Karnataka-570002.

Versus

Sri SHREYAS & OTHERS

Mr. GIRISH,
S/o Veerabhadra,
Aged about 50 years.
RESPONDENT No. 6

Mr. NAGARAJU GOWDA.
S/o Siddagowda.
Aged not known.
RESPONDENT No. 7

Mrs. SAVITHRAMMA, D/o M. N. Narasimhamurthy, aged about 65 years.
RESPONDENT No. 9

Respondent No. 6, 7 & 9 are all residing at D. No. 1133/B, 13th Cross, 3rd Stage, Gokulam, Mysuru, Karnataka-570002.

PAPER PUBLICATION

It is hereby notified to you, the Respondent No. 6, 7 & 9 in the above case, that the Appellant has preferred the above Appeal against you before the Hon'ble III Additional District and Sessions Judge, at Mysuru challenging the judgment and decree dated 16th April, 2024 passed by the Learned Additional Small Causes, at Mysuru in O.S. No. 112/2014. The said case now stands posted to 30/10/2024 for your personal appearance at 11 am. If you do not appear on the said date at that time, you will be placed ex-parte and further proceedings will be proceeded with, in your absence.

By the Order of the Court
Given under my hand and seal
Sd/- Chief Ministerial Officer,
District & Sessions Court,
Mysuru

Sd/- Advocate for the Plaintiff
Place: Mysuru
Date: 30-9-2024

THE COSMOPOLITAN CLUB (R)
Dr. S. Radhakrishnan Avenue, Mysore-570 005
Phone: 0821-2423881, 2422355
E-mail: cosmoclubmysuru@gmail.com

ANNUAL GENERAL BODY MEETING

Notice is hereby given that the **122nd Annual General Meeting** of the Members of the Cosmopolitan Club(R), Mysore-570005 will be held at the Registered Office of the Club on **Sunday, 10th November 2024 at 10.30 a.m.**

Sd/- **Hon. Secretary**

8ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖತಪ್ತರು: ಪತಿ: ಜಗನ್ನಾಥ್ ಎಂ.ಎಲ್, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು

ಸುಶೀಲ.ಎಸ್

ಮಿರ್ಲೆಗ್ರಾಮ, ಕೆ.ಆರ್.ನಗರ
ನಿಧನ: 18.10.2016

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

PUBLIC NOTICE

My client intends to enter into Joint Development Agreement with respect to the Property mentioned and described in the Schedule hereunder with its owners (1) Shri. Nagendra Ravanikar, Son of Late Nanjaiah and (2) Shri. Chethan H. Ravanikar, son of Shri. Nagendra Ravanikar ("Owners"). The Owners represent that they are the absolute owners of the Schedule Property and have a good marketable, right, title and interest therein and that apart from them there are no other person/s having any right or claim over the Schedule Property. The Owners further represents that, they have not entered into any Agreements/MoU with any third party and that the Owners have not mortgaged, created any right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims within Seven (07) days from the date of this Notice with the Undersigned, failing which, my client shall proceed with the above-mentioned transaction.

Schedule

All that piece and parcel of the property bearing Nos. 2669/2D 35/1 and 2669/2D 35/1A (earlier bearing House No: 2669/2), both situated at 2nd Main Road, Vani Vilas Puram, Devaraja Mohalla, in Ward No. 32, Vonti Koppal, Mysuru, measuring East to West 50 feet and North to South 150 feet, measuring in total 7,500 square feet and is bounded on the: East by : Private Property; West by : Property bearing House No. 2669/3; North by : Conservancy Lane; and South by : 2nd Main Road.

Jayanth M Pattanshetti, Advocate,
Jayanth Pattanshetti Associates LLP,
102, Ground Floor, "Rams Infantry Manor", No. 70 Infantry Road, Bengaluru - 560 001. Ph. 25593195/25581469
Place: Bengaluru Date: 17/10/2024

6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ ಜಿ. ವನಜಾಕ್ಷಮ್ಮ ಮತ್ತು ಕುಟುಂಬ ವರ್ಗದವರು

ಶ್ರೀ ಹೆಚ್.ನಾಗಲಿಂಗಪ್ಪ

ನಿವೃತ್ತ ಸಂಚಾರಿ ನಿಯಂತ್ರಕರು (KSRTC)



5ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನೀವು ನಮ್ಮೆಲ್ಲರ ಮನಸ್ಸಿನಲ್ಲಿ ಹಸಿರಾಗಿರುತ್ತೀರಿ.

ದುಃಖತಪ್ತರು: ಪತಿ ಮಹದೇವ, ಮಕ್ಕಳು ಪಿ.ಎಂ.ಹಿತೇಶ್, ಪಿ.ಎಂ.ಜೀವನ್ ಹಾಗೂ ಕುಟುಂಬವರ್ಗದವರು, ವಿದ್ಯಾನಗರ, ಮೈಸೂರು

ಶ್ರೀಮತಿ ಗಿರಿಜ